
# ಅಪರಂಜಿ

ತಿಳಿನಗೆಯ ಕಾರಂಜಿ

ಜನವರಿ 2018



**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ವಿ.ಆರ್. ನಾಥ್
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಉಲ್ಲಾಸ್ ರಾಯಸಂ
ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 35**
**ಸಂಚಿಕೆ - 4**
**ಜನವರಿ - 2018**

## ಈ ಸಂಚಿಕೆಯಲ್ಲಿ.....

| | | |
|---|---|---|
| ಅಪರಂಜಿ ಕಿಡಿ | *ಪ್ರಕಾಶ್* | 2 |
| ನಮ್ಮ ನಿಮ್ಮಲ್ಲಿ | *ಶಿವಕುಮಾರ್* | 3 |
| ಸಾಹಿತ್ಯದಲ್ಲಿ ಮಾತ್ರ... | *ಎಸ್. ಆರ್. ವಿಜಯಶಂಕರ* | 5 |
| ಹಸಿರೂರಿನ ದ್ವಂದ್ವಗಳು | *ಪಾಲಹಳ್ಳಿ ವಿಶ್ವನಾಥ್* | 9 |
| ತುಂತುರು | *ದಂನಆ* | 15 |
| ಹರಿಕೇನ್ ಕರೀಮಾ | *ಸಿ. ಆರ್. ಸತ್ಯ* | 16 |
| ಯಾಕ್-ಗೆ ಶೇವ್..... | *ವಾಣಿ ಸುರೇಶ್* | 19 |
| ದೆಹಲಿಯಲ್ಲಿ ದಾರಿ.... | *ಗಣೇಶ್ ಹೆಗ್ಡೆ* | 23 |
| ವಿಶ್ವರೂಪಿ ರಂಗಮ್ಮ | *ವಾಣಿ ಮುರಳೀಧರ್* | 25 |
| ನಮ್ ದೇಶ್ದ........ | *ಇ. ಆರ್. ರಾಮಚಂದ್ರನ್* | 28 |
| ಮೀನುಗಳೂ....... | *ನಂನಾಗ್ರಾಜ್* | 31 |
| ಇಂಟರೆಸ್ಟಿಂಗ್ ಇಂದ್ರ | *ಗುಂಡುರಾವ್ ದೇಸಾಯಿ* | 33 |
| ಬೇಂದ್ರೆ ವರಕವಿ ಅಲ್ವೆ.... | *ಚಿದಂಬರ ನರೇಂದ್ರ* | 38 |
| ಹೋಗೋದೆಲ್ಲಿ, ಹೇಳಿ? | *ನುಗ್ಗೆಹಳ್ಳಿ ಪಂಕಜ* | 39 |

**ಮುಖಪುಟ ವ್ಯಂಗ್ಯಚಿತ್ರ - ಗುಜ್ಜಾರ್**

ಪ್ರಕಾಶಕರು*:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003. email: koravanji42@hotmail.com

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ: ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



'ಚಲಿಸುತ್ತಿರುತ್ತೆ ಬ್ಯಾಟರಿ, ಸಾಗುತ್ತಿರುತ್ತೆ ಲೈಫ್' – ಮೊಬೈಲ್ ಜಾಹಿರಾತು

***● 'ಆಧ್ಯಾತ್ಮಿಕ' ಜಾಹಿರಾತು !!***

★★★

ಜಿಲ್ಲಾ ಆಸ್ಪತ್ರೆ ಖಾಸಗೀಕರಣ ಕೇಂದ್ರದ ಪ್ರಸ್ತಾವಕ್ಕೆ ವಿರೋಧ – ಶೀರ್ಷಿಕೆ

***● ಗೂಗ್ಲಿ ಬಾಲ್ ಎಂದರೆ ಇದೇ ಇರಬೇಕು !!***

★★★

ಬಡವರ ಮನೆ ತೆರವುಗೊಳಿಸುವುದಿಲ್ಲ – ಸಚಿವ ಜಾರ್ಜ್

***● ಮಾನವೀಯತೆಯ ಪರಮಾವಧಿ !!***

★★★

ಒಬ್ಬ ರೋಗಿಗೆ 256 ವೈದ್ಯರ ಸಲಹೆ – ಸುದ್ದಿ

***● ಟೂ ಮೆನಿ ಕುಕ್ಸ್ ಸ್ಪಾಯಿಲ್ ದ ಬ್ರಾತ್ !!***

★★★

ಕನ್ನಡ ನಾಶಪಡಿಸುವ ಹುನ್ನಾರಕ್ಕೆ ಆಸ್ಪದ ಬೇಡ – ಮಾನ್ಯ ಮುಖ್ಯ ಮಂತ್ರಿಗಳು

***● ಅಂಗಂದ್ರೇನ್ ಸಾ ?!***

★★★

''ಸಹಿಷ್ಣುತೆ ಜಾಗದಲ್ಲಿ ಅಸಹಿಷ್ಣುತೆ'' – ಹೇಳಿಕೆ

***● ವೇದಾಂತದ ತಿರುಳು ಇದೇ ಇರಬೇಕು !!***

★★★

ಕೃಷಿ ಸಾಲ ಮನ್ನಾದಿಂದ ಲಾಭ ಇಲ್ಲ – ಡಾ॥ ದೇವಿ ಶೆಟ್ಟಿ

***● ಯಾರಿಗೆ ?!***

★★★

ಸಿದ್ದರಾಮಯ್ಯ ಜತೆ ಭಿನ್ನಾಭಿಪ್ರಾಯವಿಲ್ಲ – ಶ್ರೀ ಪರಮೇಶ್ವರ್

***● ಈ ತರಹ ಹೇಳಿಕೆಗಳಿಂದಲೇ ನಮಗೆ ಭಯ !!***

★★★

'ಪಂಪ ಪ್ರಶಸ್ತಿ' ಗಳಿಸಿದ ನಿಸಾರ್ ಅಹಮದ್ ಅವರಿಗೆ ಅಪರಂಜಿಯ ಅಭಿನಂದನೆಗಳು !!

★★★

## ನಮ್ಮ ನಿಮ್ಮಲ್ಲಿ

**ಮೊ**ನ್ನೆ ಸಂಜೆ ನಾನು ವಾಕಿಂಗ್ ನಡೆಸಿದ್ದಾಗ ಮೊಬೈಲ್ ರಿಂಗಾಯಿತು. ಆ ತುದಿಯಿಂದ, ''ಇದು ಸತ್ಯನಾರಾಯಣ ಮಾತಾಡ್ತಿರೋದು. ನಿಮ್ಮ ಹತ್ತಿರ ಕೊರವಂಜಿ ಸಂಚಿಕೆಗಳ ಸಂಕಲನದ ಸೀಡಿ ಸಿಗುತ್ತಾ'' ಅಂತ ಪ್ರಶ್ನೆ ಹರಿದು ಬಂತು. ಸಿಗುತ್ತೆ ಅಂತ ಹೇಳಿ ನಾನು ಆತನನ್ನು ಮಾರನೆಯ ಬೆಳಗ್ಗೆ ಹತ್ತು ಗಂಟೆಗೆ ಬರಹೇಳಿದೆ. ಬೆಳಗ್ಗೆ ಹತ್ತುಗಂಟೆಗೆ ಸರಿಯಾಗಿ ನಮ್ಮ ಮನೆಯ ಗೇಟಿನ ಬಳಿ ಸುಮಾರು ಇಪ್ಪತ್ತರ ಹರಯದ ಸತ್ಯನಾರಾಯಣ ನಿಂತಿದ್ದು ನೋಡಿ ನನಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ಸಾಮಾನ್ಯವಾಗಿ ಕೊರವಂಜಿ ಕೇಳಿಕೊಂಡು ಬರುವವರು ಹಿರಿಯ ಪ್ರಜೆಗಳು ಅಥವಾ ಅದರ ಅಂಚಿನಲ್ಲಿ ಇರುವವರು. ಈ ತರುಣನಿಗೆ ಕೊರವಂಜಿ ಹೆಸರಾದರೂ ಹೇಗೆ ತಿಳಿಯಿತು ಎಂಬ ಕುತೂಹಲ ತಡೆಯಲಾಗದೇ ಅವನನ್ನು ''ನಿಮಗೆ ಕೊರವಂಜಿ ಬಗ್ಗೆ ತಿಳಿದದ್ದಾದರೂ ಹೇಗೆ?'' ಅಂತ ಕೇಳಿಯೇ ಬಿಟ್ಟೆ.

ಅವನ ಉತ್ತರ ಹೀಗಿತ್ತು.

''ನೋಡಿ ನಾನೊಬ್ಬ ಸಾಫ್ಟ್‌ವೇರ್ ಇಂಜಿನಿಯರ್. ದಿನವೆಲ್ಲಾ ಕೆಲಸಮಾಡಿ ಸಂಜೆ ಸ್ವಲ್ಪ ವಿರಮಿಸೋಣ ಅಂತ ದಿನಪತ್ರಿಕೆ ತೆಗೆದರೆ ಎಲ್ಲಾ ಬರೀ ಗೋಳು ಸುದ್ದಿಗಳೇ ಹಾಳೇ ತುಂಬಾ ತುಂಬಿರುತ್ತೆ. ಅತ್ಯಾಚಾರ, ಭ್ರಷ್ಟಾಚಾರ, ಕೊಲೆ, ಸುಲಿಗೆ, ವಂಚನೆ ಈ ಸುದ್ದಿಗಳನ್ನೇ ತಿಂಗಳುಗಟ್ಟಲೆ ಓದಿ ನನಗೆ ಒಂದು ಬಗೆಯ ಖಿನ್ನತೆ ಶುರುವಾಯಿತು. ಡಿಪ್ರಷನ್ ಗಿಪ್ರಷನ್ ಬಂದುಬಿಟ್ಟರೆ ಏನು ಗತಿ ಅಂತ ಗಾಬರಿ ಆಯಿತು. ನಮ್ಮ ತಾತನ ಬಳಿ ಹೋಗಿ ಅವರ ಸಲಹೆ ಕೇಳಿದೆ.'' ಅವರು, ''ನಮ್ಮ ಕಾಲದಲ್ಲಿ ಕೊರವಂಜಿ ಅಂತ ಒಂದು ಮಾಸಪತ್ರಿಕೆ ಬರ್ತಾಯಿತ್ತು. ಒಂದು ಸಲ ಅದರ ಮೇಲೆ ಕಣ್ಣಾಡಿಸಿದರೆ ಮನಸ್ಸೆಲ್ಲಾ ಉಲ್ಲಾಸದಿಂದ ತುಂಬಿ, ಮುಂದಿನ ಕೆಲಸಕಾರ್ಯಗಳನ್ನು ಉತ್ಸಾಹದಿಂದ ಮಾಡಕ್ಕೆ ಸಾಧ್ಯ ಆಗ್ತಾ ಇತ್ತು'' ಅಂತ ಹೇಳಿದರು. ಸರಿ, ಇಂಟರ್ನೆಟ್‌ಗೆ ಹೋಗಿ ಕೊರವಂಜಿ ಅಂತ ಟೈಪ್ ಮಾಡಿದೆ. ಕೊರವಂಜಿ ಸೀಡಿ ಬಿಡುಗಡೆಯಾದ ಸುದ್ದಿ (ಹಿಂದೂ ಪತ್ರಿಕೆಯಲ್ಲಿ ಪ್ರಕಟವಾಗಿದ್ದು) ಮೊದಲ ಪೋಸ್ಟಿಂಗ್ ಆಗಿತ್ತು. ಅದರಲ್ಲಿ ಕೊರವಂಜಿ ಅಪರಂಜಿ ಟ್ರಸ್ಟ್ ಬಗ್ಗೆ ಇದ್ದ ಪ್ರಸ್ತಾಪ ನೋಡಿ ಆ ಸೈಟಿಗೆ ಹೋದಾಗ ಅಲ್ಲಿ ನಿಮ್ಮ ದೂರವಾಣಿ ಸಂಖ್ಯೆ ದೊರಕಿತು ಅಂತ ಸತ್ಯನಾರಾಯಣ ಚಿಕ್ಕದಾಗಿ ಚೊಕ್ಕವಾಗಿ ಉತ್ತರಿಸಿದ. ಅವನಿಗೆ ಅಪರಂಜಿ ಬಗ್ಗೆ ತಿಳಿಸಿ, ಕೊರವಂಜಿ ಸೀಡಿ ಕೊಟ್ಟು ಧನ್ಯವಾದ ಹೇಳಿ ಕಳಿಸಿದೆ. ಕನ್ನಡ ಓದುವ ತರುಣರು ಇನ್ನೂ ಇದ್ದಾರಲ್ಲಾ ಎಂಬ ಸಂತೋಷದಲ್ಲಿ ಇಡೀ ದಿನವೆಲ್ಲಾ ಕಳೆದುಹೋಯಿತು.

ಈ ತಿಂಗಳಿಂದ ನಮ್ಮ ಲೇಖಕ ಬಳಗದ ಶ್ರೀ ಗಣೇಶ ಹೆಗ್ಗಡೆಯವರು ತಮ್ಮ ಕಾಲಮ್, ''ಕಾಮನ್ ರೂಮ್ ಕಹಾನಿ''ಯನ್ನು ಪ್ರಾರಂಭಿಸಿದ್ದಾರೆ. ಓದುಗರು ಇದನ್ನು ಉತ್ಸಾಹದಿಂದ ಸ್ವೀಕರಿಸುವರೆಂಬ ಭರವಸೆ ನನಗಿದೆ. ಈ ತಿಂಗಳ ಸಂಚಿಕೆಯ ಇನ್ನೊಂದು ವಿಶೇಷವೆಂದರೆ ಇಬ್ಬರು ವಾಣಿಯರ ಲೇಖನಗಳು ಸಂಚಿಕೆಯನ್ನಲಂಕರಿಸಿವೆ. ಮೊದಲಿಗೆ ಅಮೆರಿಕೆಯಿಂದ ಬರೆಯುವ ನಮ್ಮ ಎಂದಿನ ಲೇಖಕಿ ಶ್ರೀಮತಿ ವಾಣಿ ಸುರೇಶ್ ಅವರು ''ಯಾಕ್‌ಗೆ ಷೇವ್ ಯಾಕೆ?'' ಎಂಬ, ಆ ದೇಶದಲ್ಲಿ ಪ್ರಚಲಿತವಾಗಿರುವ ಪದಸಮುಚ್ಚಯದ ವಿವರಣೆಯನ್ನು

ಬಹು ಸ್ವಾರಸ್ಯವಾಗಿ ನಿರೂಪಿಸಿದ್ದಾರೆ. ಮತ್ತೊಂದು ಲೇಖನ ''ವಿಶ್ವರೂಪಿ ರಂಗಮ್ಮ''ದ ಕರ್ತೃ ಶ್ರೀಮತಿ ವಾಣಿ ಬೂರವಲ್ಲಿಯವರು. ನಮ್ಮ ಬರಹಗಾರ ಬಳಗಕ್ಕೆ ಹೊಸದಾಗಿ ಸೇರಿ ಮೊದಲ ಲೇಖನ ನೀಡಿರುವ ಶ್ರೀಮತಿ ವಾಣಿ ಮುರಳೀಧರ್‌ರವರಿಗೆ ಅಪರಂಜಿ ಬಳಗದ ಆತ್ಮೀಯ ಸ್ವಾಗತ. ಅವರು ಚಿತ್ರಿಸಿರುವ ರಂಗಮ್ಮ ಬೇರೆ ಬೇರೆ ಹೆಸರುಗಳಲ್ಲಿ, ಬೆಂಗಳೂರಿನ ತುಂಬಾ ಸುತ್ತಾಡಿಕೊಂಡು ತಮ್ಮ ಸರ್ವಜ್ಞತ್ವವನ್ನು ಬಹು ಧಾರಾಳವಾಗಿ ಪಸರಿಸುತ್ತಿರುವುದು ಎಲ್ಲರ ಅನುಭವಕ್ಕೆ ಬಂದಿರುವ ಸಂಗತಿ.

ಸತ್ಯ ಬರೆದಿರುವ ''ಹರಿಕೇನ್ ಕರೀಮಾ, ವಿಜಯಶಂಕರರ ವಿಮರ್ಶೆ ವಿನೋದ ಕಾಲಮ್, ಪಾಲಹಳ್ಳಿಯವರ ಅಲ್ಪ ಸ್ವಲ್ಪ ವುಡ್‌ಹೌಸ್ ಮತ್ತು ಇತರ ಲೇಖನಗಳನ್ನು ಓದುತ್ತಾ ಹೊಸವರ್ಷವನ್ನು ನೀವು ಸಂತಸದಿಂದ ಸ್ವಾಗತಿಸುವಂತಾಗಲಿ. ಎಲ್ಲ ಓದುಗರಿಗೂ ಅಪರಂಜಿಯ ಹೊಸವರ್ಷದ ಶುಭಾಶಯಗಳು.''

**ಶಿವಕುಮಾರ್**

---

# ಅಪರಂಜಿ ಓದುಗರಿಗೆ

2018ರಲ್ಲಿ ನೀವು ಏನು ಮಾಡಲಿದ್ದೀರಿ?

ಸ್ವಾರಸ್ಯಮಯವಾಗಿ ಬರೆದು ಕಳಿಸಿ. ಪದಮಿತಿ: 50 ಪದಗಳು.

ಆಯ್ಕೆಯಾದ ಬರಹಗಳನ್ನು ಫೆಬ್ರವರಿ ಸಂಚಿಕೆಯಲ್ಲಿ ಪ್ರಕಟಿಸುತ್ತೇವೆ.

ನಿಮ್ಮ ಬರಹ ಕಳುಹಿಸಲು ಕೊನೆಯ ದಿನಾಂಕ: 16 ಜನವರಿ, 2018

ವಿಳಾಸ: koravanjiaparanji@gmail.com

# ಆತ್ಮೀಯ ಓದುಗರಲ್ಲಿ ವಿನಂತಿ

ನಮ್ಮ ನಿಮ್ಮ ನಡುವೆ ಸಂಪರ್ಕ ಸೇತುವೆಯನ್ನು ಬಲಪಡಿಸುವ ನಿಟ್ಟಿನಲ್ಲಿ ತಾವು ದಯಮಾಡಿ ತಮ್ಮ ಈ ಮೇಯ್ಲ್ ವಿಳಾಸ, ಮೊಬೈಲ್ ಸಂಖ್ಯೆ, ತಮ್ಮ ಹೆಸರನ್ನು ಸೇರಿಸಿ ಹಾಗೂ ಚಂದಾದಾರರ ಸಂಖ್ಯೆಯನ್ನು ಸೇರಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ.

koravanjiaparanji@gmail.com

# ಸಾಹಿತ್ಯದಲ್ಲಿ ಮಾತ್ರ ಹೆಣ ಬಂದರೆ ಚಂದವ ! ನಿಜ ಜೀವನದಲ್ಲಿ....

**- ಎಸ್.ಆರ್. ವಿಜಯಶಂಕರ**

ಮಧ್ಯಾಹ್ನ ಊಟದ ಬಿಡುವಿನಲ್ಲಿ ಮನೆಯಿಂದ ತಂದ ಬೀನ್ಸ್ ಪಲ್ಯ ಹಾಗೂ ಹೆಂಡತಿಕೊಟ್ಟ ಮೂರು ಚಪಾತಿಗಳನ್ನು ಪಂಚಭಕ್ಷ್ಯ ಪರಮಾನ್ನವೋ ಎಂಬಂತೆ ನಿಧಾನವಾಗಿ ರುಚಿ ರುಚಿಯಾಗಿ ತಿಂದ ಅಪ್ಪಣ್ಣ ಕೈ ತೊಳೆದು ಹಾಗೆಯೇ ಆಫೀಸಿನ ಕುರ್ಚಿಗೆ ತಲೆ ಒರಗಿಸಿ ತುಸು ಕಣ್ಣು ಮುಚ್ಚಿದ್ದ. ಅಷ್ಟರಲ್ಲಿ ಫೋನು ರಿಂಗಾಯಿತು. 'ಏನಪ್ಪಾ ಅಪ್ಪಣ್ಣ ಊಟ ಮಾಡಿ ಆರಾಮವಾಗಿದ್ದೀಯ' ಎಂದ ಅದ್ರಾಮ.

'ಇನ್ನೆಲ್ಲಿ ಆರಾಮ. ಒಂದು ಹತ್ತು ನಿಮಿಷ ಕಣ್ಣು ಮುಚ್ಚುವ ಎಂದಿದ್ದೆ. ಎಲ್ಲರೂ ಕೆಳಗೆ ಕೆಫೆಟೇರಿಯಾಕ್ಕೆ ಹೋಗಿದ್ದಾರೆ. ಇವತ್ತೇನೋ ನಾನು ಆಫೀಸು ಮೇಜಿನಲ್ಲೇ ಬುತ್ತಿ ತಿಂದೆ' ಎಂದ ಅಪ್ಪಣ್ಣ. 'ಪೊಮ್ಮನ ಕಥೆ ಏನಂತೆ? ಅವನ ಮಗಳು ಭಾನುವಾರ ವಚನ ಗಾಯನ ಸ್ಪರ್ಧೆಗೆ ಹೋಗುತ್ತಾಳೆಂದು ಹೇಳಿದ್ದ' ಎಂದ ಅದ್ರಾಮ.

ಪೊಮ್ಮನ ಮಗಳ ಸುದ್ದಿ ಬಂದದ್ದೇ ಅಪ್ಪಣ್ಣ 'ಇರು ಹಾಗಾದರೆ, ಒಂದು ಕಾನ್ಫರೆನ್ಸ್ ಕಾಲ್ ಮಾಡುತ್ತೇನೆ. ಈಗ ಊಟದ ಬಿಡುವಲ್ಲವೆ?' ಎಂದು ಫೋನ್ ಕನೆಕ್ಟ್ ಮಾಡಿದ.

''ಮಗಳ ಸ್ಪರ್ಧೆ ಏನಾಯಿತೋ ಪೊಮ್ಮ?''

''ದ್ವಿತೀಯ ಬಹುಮಾನ ಮಾರಾಯ. ಫಸ್ಟ್ ಪ್ರೈಸ್ ಪಂಡಿತ ಪರಮೇಶ್ವರ ಹೆಗಡೆ ಶಿಷ್ಯೆಗೆ.''

''ಹೋಗಲಿ ಬಿಡು. ಮುಂದಿನ ಸಲ ಪ್ರಥಮ ಪಡೆಯುತ್ತಾಳೆ.''

''ಹೋಗಲಿ ಬಿಡು ಎಂತದು. ಇಲ್ಲಿ ಮಗಳು ನನ್ನನ್ನು ಬಿಡುವುದಿಲ್ಲ. ಅರ್ಥ ಕೇಳಿ ತಲೆ ತಿಂತಾಳೆ.''

''ಯಾವುದರ ಅರ್ಥಬೇಕೋ ಮಾರಾಯ?''

ಅದೇ ಅಲ್ಲಮಪ್ರಭು ಹೇಳಿದ್ದಾನಲ್ಲ,

*ಸಂಸಾರವೆಂಬ ಹೆಣ ಬಿದ್ದಿರೆ ತಿನಬಂದ*
*ನಾಯ ಜಗಳವ ನೋಡಿರೇ!*
*ನಾಯ ಜಗಳವ ನೋಡಿ ಹೆಣನೆದ್ದು ನಗುತ್ತಿದೆ*
*ಗುಹೇಶ್ವರನೆಂಬ ಲಿಂಗವಲ್ಲಿಲ್ಲ ಕಾಣಿರೇ!*

ಇದಕ್ಕೇನು ಧಾರ್ಮಿಕವಾಗಿ ಅರ್ಥ ಹೇಳಬೇಕೋ? ಸಾತ್ವಿಕವಾಗಿಯೋ? ಈ ಅರ್ಥವೆಂಬುದು ಬಲು ಕಷ್ಟ ನೋಡು.

ಲಕ್ಷ್ಮೀಶನ ಜೈಮಿನಿ ಭಾರತದ ಹೆಣಕ್ಕಾದರೆ ಒಂದು ಕಥೆ ಇದೆ. ಯೌವನಾಶ್ವನ ಸೈನಿಕರು ಘಟೋತ್ಕಚನನ್ನು ಓಡಿಸುವ ರೀತಿ ಈ ವಚನದಲ್ಲಿ ಕಥೆ ಇಲ್ವಲ್ಲ ಮಾರಾಯ ಎಂದ ಪೊಮ್ಮ.

ಇದೂ ಕೂಡಾ ಈ ಪ್ರಪಂಚದಲ್ಲಿ ಸಂಸಾರ ಮಾಡಿದವರು. ಮಾಡುವ ಜಗಳದ ನಿರರ್ಥಕತೆಯನ್ನು ಹೇಳುವ ವಚನ ಅಲ್ವಾ. ಮುಂದೊಂದು ದಿನ ಸಾವು ಬರಲಿರುವುದರಿಂದ ಈ ಶಾಶ್ವತ ಎಂದು ತಿಳಿದು ಭ್ರಮಿಸಿರುವ ಸಂಸಾರ, ಲೋಕ ಎಲ್ಲವೂ ತಾತ್ಕಾಲಿಕ ಎಂದು ತಿಳಿಯದೆ ಹೋಗಿದೆ. ಜೀವಂತವಾಗಿರುವ ಈ ಸಂಸಾರಿ ವ್ಯಕ್ತಿಗಳ ಜಗಳ ನೋಡಿ ನಿರ್ಜೀವವಿರುವವರೂ ನಗುವಂತಾಗಿದೆ. ಇದೊಂದು ವೈರುಧ್ಯ ನೋಡು. ಸಿಕ್ಕಷ್ಟು ಸಾಲದೆಂಬ ಈ ಜಗಳ ಯಾಕೆಂದರೆ ಈ ಜೀವ ಇರುವ ದೇಹದ ಒಳಗೇ ಬೆಳೆಯುತ್ತಿರುವ ಸಾವಿನ ಬಗ್ಗೆ ಜೀವ ಇರುವಾಗ ತಿಳಿಯುತ್ತಿಲ್ಲ. ಸತ್ತ ಮೇಲೆ ಹೆಣವಾಗಲಿರುವ ಈ ದೇಹದಲ್ಲಿರುವ ಆ ಸಾವೆಂಬ ಇನ್ನೊಂದು ಪ್ರಜ್ಞೆ ಎಚ್ಚೆತ್ತುಕೊಂಡು ನಗುತ್ತಿದೆ. ಯಾಕೆಂದರೆ ಗುಹೇಶ್ವರನೆಂಬ ಲಿಂಗ ಅಲ್ಲಿಲ್ಲ ನೋಡು. ಗುಹೇಶ್ವರನ ತಿಳಿವು ಇದ್ದಿದ್ದರೆ ಈ ಜೀವವನ್ನೂ, ಸಾವನ್ನೂ ಮೀರಿದ ತಿಳಿವು ಅರಿವಿಗೆ ಬರುತ್ತಿತ್ತು ಎಂದು ವಿವರಿಸಿದ ಅಪ್ಪಣ್ಣ.

ಈ ಅಪ್ಪಣ್ಣ ಏನೇ ಹೇಳಲಿ, ಕಥೆ ಇದ್ದರೆ ಅರ್ಥವಾಗಲು ಸುಲಭ ನೋಡು. ಹೆಣಗಿಣ ಎಲ್ಲಾ ಸುಲಭದಲ್ಲಿ ಅರ್ಥವಾಗುತ್ತದೆ ಎಂದು ರಾಗ ಎಳೆದ ಅದ್ರಾಮ. ಅದೆಂತದು ನಿನ್ನದು ರಾಗ ಎಂದ ಅಪ್ಪಣ್ಣನಿಗೆ ಅದ್ರಾಮ ಹೇಳಿದ.

ನಿರಂಜನರ 'ಕೊನೆಯ ಗಿರಾಕಿ' ಎಂಬ ಕಥೆ ನೋಡು. 'ಕಾಣಿ' ಎಂಬ ಬಡ ಹುಡುಗಿ ಇನ್ನೊಬ್ಬ ಬಡ ಭಿಕ್ಷುಕನನ್ನು ನಂಬಿ ನಗರಕ್ಕೆ ಬಂದು ಮೋಸ ಹೋಗಿದ್ದಾಳೆ. ಬೀದಿ ಬದಿಯ ಸೂಳೆ ಆಗಿ ಬದುಕಬೇಕಾಗಿದೆ. ಮನೆ ಇಲ್ಲ, ಕೊನೆಯ ಗಿರಾಕಿ, ದುಡ್ಡು ಕೇಳಿದ್ದಕ್ಕೆ ನೀಡಿದ ಒದೆತ ಹೊಟ್ಟೆಗೆ ಬಿದ್ದಿದೆ. ಮೊದಲೇ ಮೂಕಿ. ಕಿರುಚದಂತೆ ಗಂಟಲು ಒತ್ತಿದಾಗ ಜ್ವರದಿಂದ ಬಳಲಿದ್ದ ಹಸಿವಿನಿಂದ ಕಂಗಾಲಾದ ಕಾಣಿ ಸತ್ತು ಬೀದಿಗೆ ಬಿದ್ದಿದ್ದಾಳೆ. ಜೀವವಿಲ್ಲದ ಆ ದೇಹದ ಮೇಲೆ ಆಕಾಶದಲ್ಲಿ ಹೆಣವನ್ನು ತಿನ್ನುವ ಹದ್ದು ಸುತ್ತು ಹಾಕುತ್ತಿದೆ. ಹೇಗೆ ವಿವರಿಸಬಹುದು ನೋಡು. ಜೀವವಿದ್ದಾಗ ಆ ಬಡವಳ ದೇಹ ಲೈಂಗಿಕ ವಸ್ತು. ಸತ್ತಮೇಲೆ ತಿನ್ನುವ ವಸ್ತು. ಬಡ ಮೂಕಿ ಹುಡುಗಿ. ಸೂಳೆಯಾಗಿ ಮಾಡಲ್ಪಟ್ಟಿದ್ದಾಳೆ. ಬಾಯಿ ಬಾರದ, ಮಾತಾಡಲಾರದ ಅಸಹಾಯ ಮೂಕತನ ಸಮಸ್ತ ಬಡವರ ಬಾಯಿ ಕಟ್ಟಿದ್ದಕ್ಕೆ ಸಂಕೇತ.

ನಿನ್ನ ಕಥೆ ಸರಿ ಮಾರಾಯ. ಸಾಹಿತ್ಯದಲ್ಲಿ ಹೆಣಗಳಿಗೇನು ಕೊರತೆಯೆ? ರನ್ನ, ಕುಮಾರವ್ಯಾಸ, ಪಂಪ ಎಲ್ಲರೂ ಹಲವಾರು ಯುದ್ಧ ಚಿತ್ರಗಳಲ್ಲಿ ಸತ್ತವರ ವಿಭಿನ್ನ ರೀತಿಯ ವರ್ಣನೆಗಳನ್ನು ಮಾಡಿಲ್ಲವೆ? ಅದು ಯಾಕೆ, ನಮ್ಮ ಕುವೆಂಪು ಅವರ 'ಸ್ಮಶಾನ ಕುರುಕ್ಷೇತ್ರಂ' ನಾಟಕದ ಪ್ರಾರಂಭದ ದೃಶ್ಯಗಳು, ಪಿಶಾಚಿಗಳಂತಹ ಆ ಮರುಳುಗಳು, ಮಕ್ಕಳು ಸತ್ತ ತಾಯಂದಿರು, ಮಹಾಭಾರತದ ಯುದ್ಧದ ಬಳಿಕ ಕುಂತಿ ಸತ್ತ ಕರ್ಣನ ಹೆಣ ಹುಡುಕುತ್ತಿದ್ದಳು ಅಂತಲೂ ಒಂದು ಕಥೆ ಪ್ರತೀತಿಯಲ್ಲಿ ಇಲ್ಲವೆ? ಎಂದ ಪೊಮ್ಮ.

ಈಗ ಅದ್ರಾಮನ ಸಂಸ್ಕೃತ ಓದಿನ ನೆನಪು ಜಾಗ್ರತವಾಯಿತು. ಅವ ಹೇಳಿದ; ಮಾರಾಯ. ಎಂಕು ಮರೆತ್ತೆ ಪೋಂಡು. (ನನಗೆ ಮರೆತೇ ಹೋಯಿತು). ಉತ್ತರ ರಾಮಚರಿತೆ ಬರೆದ ಭವಭೂತಿಯ 'ಮಾಲತಿ ಮಾಧವ' ನಾಟಕಕ್ಕಿಂತ ಬೇರೆ ಉದಾಹರಣೆ ಬೇಕಾ?

ಅವನ ಪ್ರಶ್ನೆಗೆ ಪೊಮ್ಮ, ಅವು ಎಂಚಿನ ಮಾರಾಯ (ಅದು ಎಂತದು ಮಾರಾಯ) ಎಂದು ಉದ್ಗಾರ ತೆಗೆದ. ಅದುವೇ ಮಾಲತಿಯನ್ನು ಮದುವೆಯಾಗಲು ಸಾಧ್ಯವಿಲ್ಲವೆಂಬುದರಿಂದ ವಿರಹದಿಂದ ಬೆಂದು ಈ ಲೋಕ ಬೇಡ ಎಂದು ಮಾಧವ ಸ್ಮಶಾನಕ್ಕೆ ಹೋಗುತ್ತಾನಲ್ಲ, ಅಲ್ಲಿ ಅವ ಮಾಡುವ ಕೆಲಸ ಎಂತದು? ಸ್ಮಶಾನದಲ್ಲಿ ಪಿಶಾಚಿಗಳಿಗೆ ಮನುಷ್ಯನ ಹೆಣದ ಮಾಂಸ ಮಾರುವುದು.

ನಿನ್ನದೂ ಒಂದು ಸಂಗತಿಯಾ ಎಂದು ನಗತೊಡಗಿದ ಅಪ್ಪಣ್ಣ, ಕಾಳಿದಾಸನ ಎದುರು ಭವಭೂತಿಯ ಮೊದಲ ನಾಟಕ ಪಡಪೋಶಿ ಎಂದದ್ದಕ್ಕೆ ಅವನಿಗೆ ಸಿಟ್ಟು ಬಂದಿತ್ತು. ಹಾಗಾಗಿ ಕಾಳಿದಾಸನಲ್ಲಿಲ್ಲದ ಬೀಭತ್ಸ ರಸವನ್ನೂ ಸೃಷ್ಟಿಸಿ ತೋರಿಸುತ್ತೇನೆ ಅಂತ ಅವ ಆ ಸೀನು ಮಾಡಿದ್ದಲ್ಲವಾ. ನಾಟಕದ ಸುರುವಿಗೇ ಹೇಳುತ್ತಾನಲ್ಲ, ಕಾಲ ನಿರವಧಯ: ವಿಪುಲಾಚ ಪೃಥ್ವೀ ಅಂತ. ಸಮಯ ಬೇಕಾದಷ್ಟಿದೆ. ಭೂಮಿಯೂ ವಿಶಾಲವಾಗಿದೆ. ಒಂದಲ್ಲ ಒಂದು ದಿನ ತನ್ನ ನಾಟಕವನ್ನೂ ಮೆಚ್ಚುವವರು ಬರುತ್ತಾರೆ ಎಂದು ಅವ ಹೇಳಿದ್ದಲ್ಲವಾ?

ಕೊನೆಗೂ ಕರುಣ ಏವರಸ: ಎಂದ ಅವನ ಉತ್ತರರಾಮಚರಿತವನ್ನು ಪಂಡಿತರು ಎತ್ತಿ ಹಿಡಿದರಲ್ಲ ಎಂದ ಅದ್ರಾಮ.

ಪಿಶಾಚಿಗಳಿಗೆ ಮನುಷ್ಯರ ಮಾಂಸ ಮಾರುವ ಸಂಗತಿ ಕಲ್ಪನೆ ಇರಬಹುದು. ಆದರೆ ಬಸವಣ್ಣ ಹೇಳ್ತಾನಲ್ಲ, ಅರಸನ ಹೆಣನಾದರೂ ಕೊಂಬವರಿಲ್ಲ, ಮೊಲದ ಹೆಣಕ್ಕಾದರೂ ಬೇಡಿಕೆ ಇದೆ ಅಂತ, ಎಂದ ಪೊಮ್ಮ.

ಅದ್ಯಾವುದು ವಚನ ಎಂದು ಅಪ್ಪಣ್ಣ ಕೇಳಿದಾಗ, ಮಗಳು ಹಾಡುವುದು ಕೇಳಿ ಬಾಯಿ ಪಾಠ ಆಗಿದೆ ಎಂದು ಪೊಮ್ಮ ಹೇಳಿದ.

ವ್ಯಾಧನೊಂದು ಮೊಲನ ತಂದರೆ,

ಸಲುವ ಹಾಗಕ್ಕೆ ಬಿಲಿವರಯ್ಯಾ.

ನೆಲನಾಳ್ದನ ಹೆಣನೆಂದರೆ,

ಒಂದಡಕೆಗೆ ಕೊಂಬರಿಲ್ಲ ನೋಡಯ್ಯಾ!

ಮೊಲನಿಂದ ಕಡುಕಷ್ಟ ನರನ ಬಾಳುವೆ!

ಸಲೆ ನಂಬೋ ನಮ್ಮ ಕೂಡಲ ಸಂಗಮ ದೇವನ.

ನೆಲವನ್ನು ಆಳಿದವನ ಹೆಣವೆಂದರೆ ಒಂದು ಅಡಕೆಗೂ ಕೊಂಬವರಿಲ್ಲ ಎಂಬುದು ಹಿಂದಿನ ಮಾತಾಯಿತು. ಈಗಿನ ವಿಜ್ಞಾನ ಯುಗದಲ್ಲಿ ಸಂಗತಿ ಬೇರೆಯಾಗಿದೆ ಎಂದ ಅದ್ರಾಮ. ಈಗ ಮೆಡಿಕಲ್ ಕಾಲೇಜುಗಳಿಗೆ ಹೆಣಗಳು ಬೇಕಲ್ಲ. ವೈದ್ಯಕೀಯ ವಿದ್ಯಾರ್ಥಿಗಳು ಕೊರೆದು ನೋಡುವುದು ಮತ್ತೇನನ್ನು?

ಯೂ ಮೀನ್ ಅನಾಟಮಿ ಪಾಠದ ಡಿಸೆಕ್ಷನ್. ನಮ್ಮ ಪಿಯುಸಿಯ ಬಯಾಲಜಿ ಹುಡುಗರು ಕಪ್ಪೆಕೊರೆದ ಹಾಗೆ, ಎಂದ ಪೊಮ್ಮ ಮುಂದುವರಿದು ಮೆಡಿಕಲ್ ಕಾಲೇಜುಗಳಿಗೆ ಹೆಣಗಳು ಬೇಕಾಗುವ ವಿಚಾರ ಸರಿ. ಆದರೆ ಅವರು ಅವನ್ನು ಕೊಂಡುಕೊಳ್ಳುತ್ತಾರೆ ಅಂತ ಯಾರು ಹೇಳಿದ್ದು ಎಂದು ಕೇಳಿದ.

ದುಡ್ಡಿಗೋ ಎಂತದು ಅಂತ ನನಗೆ ಗೊತ್ತಿಲ್ಲ. ಆದರೆ ಅವರು ಕಾನೂನು ಪ್ರಕಾರ ಕೊಟ್ಟ ಹೆಣಗಳನ್ನು ತೆಗೆದುಕೊಳ್ಳುತ್ತಾರೆ. ನನಗೆ ಮುನಿಸಿಪಾಲಿಟಿಯಲ್ಲಿ ಕೆಲಸದಲ್ಲಿರುವ ಶಗ್ರಿತ್ತಾಯರು ಹೇಳಿದ್ದು ಎಂದ ಅದ್ರಾಮನಿಗೆ, ಕಥೆ ಎಂತದು ಅಂತ ಪೊಮ್ಮ ಕೇಳಿದ.

ಈಗ ಕೆಲವು ತಿಂಗಳ ಹಿಂದೆ ವಿಂಡ್‌ಸರ್ ಮ್ಯಾನರ್ ಹೋಟೆಲ್ ಕೆಳಗಿನ ಗುಟ್ಟಳ್ಳಿ ಸಿಗ್ನಲ್ ಹತ್ರ ಒಂದು ಅನಾಥ ಭಿಕ್ಷುಕನ ಶವ ನೋಡಿದ್ದೆ ಅಂತ ಹೇಳಿದ್ದು ನೆನಪಿದೆಯಾ ಎಂದ ಅದ್ರಾಮನಿಗೆ; ಹೌದು ಎಂದ ಪೊಮ್ಮ.

ನಾನು ಅದನ್ನು ನೋಡಿ ಏನು ಮಾಡುವುದು ಅಂತ ತಿಳಿಯದೆ ನೂರು (100) ನಂಬರ್‌ಗೆ ಫೋನು ಮಾಡಿ ಪೋಲೀಸ್ ಕಂಟ್ರೋಲ್ ರೂಮ್‌ಗೆ ಹೇಳಿದೆ. ಅವರು ಬಿ.ಬಿ.ಎಂ.ಪಿ.ಗೆ ಹೇಳಿ ಹೆಣ ತೆಗೆಸಿದರು. ಕಾನೂನು ಮಹಜರು ಮುಗಿದ ಬಳಿಕ ಅದನ್ನು ಮೆಡಿಕಲ್ ಕಾಲೇಜಿಗೆ ಕೊಟ್ಟರು ಅಂತ ಶಗ್ರಿತ್ತಾಯರು ಹೇಳಿದ್ದು. ನನಗೆ ಬೇರೆ ಗೊತ್ತಿಲ್ಲ ಎಂದ ಅದ್ರಾಮ.

ಮಧ್ಯಾಹ್ನ ಊಟ ಆದ ಕೂಡಲೇ ಹೆಣಗಿಣ ಅಂತ ಎಂತದು ಮಾರಾಯರೆ ನಿಮ್ಮದು. ಬೇರೆ ಏನೂ ವಿಷಯ ಇಲ್ವಾ ಎಂದ ಅಪ್ಪಣ್ಣ. ಸಾಹಿತ್ಯದಲ್ಲಿ ಹೆಣ ಬಂದರೆ ಚಂದ. ನಿಜ ಜೀವನದಲ್ಲಿ ಕಂಡರೆ ಕೊಳಕ್ಕಾ ಎಂದು ಕುಟುಕಿದ ಪೊಮ್ಮ.

ಇದು ವೈಜ್ಞಾನಿಕ ಕಾಲ ಅಲ್ವಾ! ಹಾಗಾಗಿ ಗತಿ ಇಲ್ಲದ ಹೆಣಕ್ಕೂ ಡಿಮ್ಯಾಂಡ್ ಇದೆ. ನೆಲನಾಳ್ದನ ಹೆಣವನ್ನೂ ಒಂದಡಕೆಗೆ ಕೊಂಬವರು ಇಲ್ಲ ಎಂದಾಗ ನೆನಪಾಯಿತು. ಅಷ್ಟೇ ವಿಜ್ಞಾನದ ಮಹಿಮೆ ಮಾರಾಯ ಎಂದು ನಕ್ಕ ಅದ್ರಾಮ.

ಅಷ್ಟರಲ್ಲಿ 'ಸರ್ ಮ್ಯಾನೇಜರ್ ನೀವು ಊಟ ಮಾಡಿ ಬಂದಿರಾ ಅಂತ ಕೇಳಿದರು' ಎಂದು ಹೇಳಿದ ಹೆಣ್ಣು ಧ್ವನಿಯೊಂದು ಫೋನಿನ ಕಾನ್ಫರೆನ್ಸ್ ಕಾಲನ್ನು ಪ್ರವೇಶಿಸಿತು.

ಸರಿ ಕಣ್ರೋ ಬಾಸ್ ಬರ ಹೇಳಿದ್ದಾನೆ. ಸಿ ಯು ಫ್ರೆಂಡ್ಸ್ ಎಂದು ಹೇಳಿ ಅಪ್ಪಣ್ಣ ಫೋನ್ ಕಟ್ ಮಾಡಿದ.

✤

---


ಅಪರಂಜಿ ಹವ್ಯಾಸೀ ಲೇಖಕರು ಸೇರಿ
ನಡೆಸುತ್ತಿರುವ ಒಂದು ಸಾಹಸ.
ಇದಕ್ಕೆ ಜಾಹೀರಾತು ದೊರಕಿದರೆ ನಮ್ಮ ಕೆಲಸ
ಸುಗಮ. ಈ ನಿಟ್ಟಿನಲ್ಲಿ ತಾವು ಸಹಕರಿಸಲು
ಇಚ್ಛಿಸಿದರೆ ದಯವಿಟ್ಟು ವಿವರಗಳಿಗೆ
ನಮ್ಮನ್ನು ಸಂಪರ್ಕಿಸಿ:
koravanjiaparanji@gmail.com

# ಹಸಿರೂರಿನ ದ್ವಂದ್ವಗಳು

**- ಪಾಲಹಳ್ಳಿ ವಿಶ್ವನಾಥ್**

ಹಸಿರೂರು ಮೈಸೂರಿಗೆ ಹತ್ತಿರವೇ ಇರುವ ಪುಟ್ಟ ಊರು. ಹೆಸರೇ ಹೇಳುವಂತೆ ಎಲ್ಲೆಲ್ಲೂ ಹಸಿರು! ಕೆಲವು ವಿಶ್ರಾಮ ಧಾಮಗಳೂ ಹುಟ್ಟುಕೊಂಡಿದ್ದವು. ಅದಕ್ಕಿಂತ ಮುಖ್ಯವಾಗಿ ಆ ಊರು ಸಾಹಿತ್ಯಕ್ಕೆ ಮತ್ತು ಕ್ರಿಕೆಟ್ ಆಟಕ್ಕೆ ಖ್ಯಾತಿಯನ್ನು ಗಳಿಸಿದ್ದಿತು. ಅದಕ್ಕೆ ಕಾರಣ ಸುಂದರಯ್ಯ ದಂಪತಿಗಳು – ಮೀನಾಕ್ಷಿ ಸುಂದರಯ್ಯ ಮತ್ತು ಪತಿ ಶೇಷಾದ್ರಿ ಸುಂದರಯ್ಯ. ಮೀನಾಕ್ಷಿಯವರು ಮಹಾರಾಜ ಕಾಲೇಜಿನಲ್ಲಿ ಸಾಹಿತ್ಯದಲ್ಲಿ ಎಂ.ಎ. ಮಾಡಿದ್ದರು. ಅದೇ ಸಮಯದಲ್ಲಿ ಶೇಷಾದ್ರಿ ಸುಂದರಯ್ಯನವರು ವಿಶ್ವವಿದ್ಯಾಲಯಕ್ಕೆ ಕ್ರಿಕೆಟ್ ಆಡುತ್ತಿದ್ದರು. ಅಲ್ಲಿಯೆ ಅವರಿಬ್ಬರಿಗೂ ಪರಿಚಯವಾಗಿ ಅದು ಪ್ರೇಮದತ್ತ ತಿರುಗಿ ಮದುವೆಯಾಗಿದ್ದರು. ಕೆಲಸದ ಪ್ರಯುಕ್ತ ಭಾರತವೆಲ್ಲಾ ಸುತ್ತಾಡಿ ಕಡೆಗೆ ಹಸಿರೂರಿನಲ್ಲಿ ನೆಲಸಿದ್ದರು. ಮೈಸೂರು ಹತ್ತಿರ ಎನ್ನುವುದು ಅವರಿಗೆ ಮುಖ್ಯ ಆಕರ್ಷಣೆಯಾಗಿದ್ದಿತು. ಮೀನಾಕ್ಷಿಯವರು ಆ ಚಿಕ್ಕ ಊರಿನಲ್ಲಿ ಮೈಸೂರಿನ ಸಂಸ್ಕೃತಿಯನ್ನು ಬೆಳೆಸಬೇಕೆಂದು ಅಲ್ಲಿ ಸಾಹಿತ್ಯ ಸಂಘವನ್ನು ಸ್ಥಾಪಿಸಿದರು. ಮೈಸೂರಿನ ಹಲವಾರು ಪ್ರಾಧ್ಯಾಪಕರು ಹಸಿರೂರಿಗೆ ಬಂದು ಹೋಗುತ್ತಿದ್ದು ಅಲ್ಲಿನ ಸಾಹಿತ್ಯಸಂಘ ನಿಧಾನವಾಗಿ ಪ್ರಖ್ಯಾತಿಯಾಯಿತು. ವರ್ಷಕ್ಕೊಮ್ಮೆ ಹಸಿರೂರಿನ ಸಾಹಿತ್ಯ ಸಮ್ಮೇಳನವೂ ದೇಶದಲ್ಲೆಲ್ಲಾ ಖ್ಯಾತಿ ಗಳಿಸುತ್ತಿತ್ತು. ಹೀಗೆ ಹಸಿರೂರು ಸಾಹಿತ್ಯ ವಲಯಗಳಲ್ಲಿ ಮೇಲೆ ಹೋಗುತ್ತಿದ್ದ ಹಾಗೆ ಮತ್ತೊಂದು ವಲಯದಲ್ಲೂ ಹೆಸರು ಮಾಡಿತ್ತು. ಅದು ಕ್ರಿಕೆಟ್‌ನಲ್ಲಿ! ತಮ್ಮ ಪತ್ನಿ ಸಾಹಿತ್ಯಕ್ಕೆ ಪ್ರಚಾರ ಕೊಡುತ್ತಿದ್ದಂತೆ ಶೇಷಾದ್ರಿಯವರು ಅಲ್ಲಿ ಒಂದು ಕ್ರಿಕೆಟ್ ಅಕಾಡೆಮಿಯನ್ನು ಸ್ಥಾಪಿಸಿದರು. ಶೇಷಾದ್ರಿಯವರು ಎಲ್ಲ ಮಟ್ಟಗಳಲ್ಲೂ ಕ್ರಿಕೆಟ್ ಆಡಿದ್ದರು. ಹಲವಾರು ಟೆಸ್ಟ್ ಪಂದ್ಯಗಳಲ್ಲಿ ಸೆಂಚುರಿ ಭಾರಿಸಿ ಭಾರತದ ಜಯಕ್ಕೂ ಕಾರಣವಾಗಿದ್ದರು. ಅವರ ಬ್ಯಾಟಿಂಗನ್ನು ಜನ ಬಹಳ ಮೆಚ್ಚಿದ್ದರಂತೆ, ಅದೂ ಅವರ ಲೇಟ್ ಕಟ್ ವಿಶ್ವದಾದ್ಯಂತ ಖ್ಯಾತಿ ಗಳಿಸಿದ್ದಿತು. ಹೀಗೆ ಅಂತಹವರ ತರಬೇತಿಯಿಂದ ಕ್ರಿಕೆಟ್ ಅಕಾಡೆಮಿಯಲ್ಲಿ ತಯಾರಾದ ಹುಡುಗರು ಬೆಂಗಳೂರು ಮೈಸೂರುಗಳಲ್ಲಿ ಹೆಸರು ಮಾಡಿ ರಣಜಿ ಪಂದ್ಯಗಳಿಗೂ, ಒಮ್ಮೊಮ್ಮೆ ದೇಶದ ಟೀಮಿಗೂ ಆಯ್ಕೆಯಾಗುತ್ತಿದ್ದರು. ಸುಂದರಯ್ಯ ದಂಪತಿಗಳ ಮಧ್ಯೆ ಯಾವ ವೈಮನಸ್ಯಗಳಿಲ್ಲದಿದ್ದರೂ (ಹಸಿರೂರಿನ ಜನರು ಅವರನ್ನು ಆದರ್ಶ ದಂಪತಿಗಳೆಂದು ಪರಿಗಣಿಸುತ್ತಿದ್ದರು.) ಗಂಡ ಮತ್ತು ಹೆಂಡತಿಯರ ಶಿಷ್ಯ ವೃಂದಗಳ ಮಧ್ಯೆ ಪ್ರೇಮವೇನೂ ಇರಲಿಲ್ಲ. ಸಾಹಿತ್ಯದವರು ಕ್ರಿಕೆಟಿಗರನ್ನೂ ಕ್ರಿಕೆಟಿಗರು ಲೇಖಕರನ್ನೂ ಕಾಲು ಎಳೆಯುವುದು ನಡೆಯುತ್ತಲೇ ಇದ್ದಿತು. ಬೇಸಿಗೆಯ ಒಂದು ಸಂಜೆಯ ಸಮಯ. ಸಾಹಿತ್ಯ ಸಂಘದ ಕಟ್ಟಡದ ಹತ್ತಿರವೆ ಹಸಿರೂರು ಕ್ರಿಕೆಟ್ ಮೈದಾನ. ಸಾಹಿತ್ಯ ಸಂಘದ ಹೊರ ಅಂಗಣದಲ್ಲಿ ಸಭೆ ನಡೆಯುತ್ತಿತ್ತು. ಒಬ್ಬ ಯುವ ಲೇಖಕ ಸಭೆಯಲ್ಲಿ ನಿಂತು ರಬೀಂದ್ರನಾಥ್ ಟಾಗೂರರ ಕವಿತೆಗಳ ಬಗ್ಗೆ ಮಾತನಾಡುತ್ತಿದ್ದಾಗ ಒಂದು ಚೆಂಡು ಬಂದು ಅವನ ತಲೆಗೆ ತಾಕಿ ಅವನು ನೆಲದ ಮೇಲೆ ಬಿದ್ದು ಮೂರ್ಛೆ ಹೋದನು. ಆಗ ಚೆಂಡು ಹುಡುಕಿಕೊಂಡು ಬಂದವನು ಒಬ್ಬ ಸ್ಫುರದ್ರೂಪಿ ಯುವಕ. ಅಲ್ಲಿ ನೆರೆದಿದ್ದ ಎಲ್ಲರೂ ಈ ಯುವಕನನ್ನು ತರಾಟೆಗೆ ತೆಗೆದುಕೊಂಡರು. ಆದರೆ ಆ ಯುವಕ ಅಲ್ಲಿಯ ಇದ್ದ ಒಂದು ಯುವತಿಯನ್ನು ನೋಡುತ್ತಲೇ ಇದ್ದ.

ಈಗ ನಮ್ಮ ಕಥೆಯ ಮೂರು ಮುಖ್ಯ ಪಾತ್ರಧಾರಿಗಳ ಪರಿಚಯ ಮಾಡಿಕೊಳ್ಳೋಣ. ಮೊದಲು ಆ ಯುವತಿ ಯಾರು? ಅಲ್ಲಿ ನೆರೆದಿದ್ದ ಜನರಲ್ಲಿ ಈ ಯುವತಿಯನ್ನು ಬಿಟ್ಟು ಬೇರೆ ಯಾರೂ ಯಾವ ಸೌಂದರ್ಯ ಸ್ಪರ್ಧೆಯನ್ನು ಪ್ರವೇಶಿಸಿದರೂ ವಿಜೇತರಾಗುವ ಸಾಧ್ಯತೆ ಇರಲಿಲ್ಲ. ಅವಳೇ ಅದಿತಿ ಗೋಪಾಲ್. ಮೀನಾಕ್ಷಿಯವರ ಸೋದರ ಸೊಸೆ. ದೂರದ ಮುಂಬಯಿಯಲ್ಲಿ ಸಾಹಿತ್ಯದಲ್ಲಿ ಎಂ.ಎ. ಮಾಡುತ್ತಿದ್ದ ಹುಡುಗಿ ಬೇಸಿಗೆ ಸಮಯದಲ್ಲಿ ಹಸಿರೂರಿಗೆ ಬಂದಿದ್ದಳು. ಅತ್ತೆಯ ಪ್ರಭಾವದಿಂದ ಸಾಹಿತ್ಯವೇ ಪ್ರಪಂಚ ಎನ್ನುವ ಧೋರಣೆ ಅವಳದ್ದು. ಅದರಿಂದಲೇ ಏನೋ ಆ ಮೂರ್ಛೆಹೋದ ಯುವಕನಿಂದ ಅವಳು ಬಹಳ ಆಕರ್ಷಿತಳಾಗಿದ್ದಳು.

ಹಿಂದಿನ ವರ್ಷ ಹಸಿರೂರಿನ ಸಾಹಿತ್ಯ ಸಮ್ಮೇಳನಕ್ಕೆ ಬಂದಿದ್ದ ಆ ಯುವ ಲೇಖಕ ಮೀನಾಕ್ಷಿ ಸುಂದರಯ್ಯನವರ ಬಲವಂತದಿಂದ ಆ ಊರಿನಲ್ಲೇ ಉಳಿದುಕೊಂಡಿದ್ದ. ಹೇಗೋ 2-3 ಅತಿಥಿ ಲೇಖಕರಿಗೆ ಸಂಘದ ಆಯವ್ಯಯದಲ್ಲಿ ಅವಕಾಶ ಮಾಡಿಕೊಡಲಾಗಿದ್ದಿತು. ''ನೀವಿದ್ದರೆ ನಮ್ಮ ಸಾಹಿತ್ಯ ಸಂಘಕ್ಕೆ ಮೆರುಗು'' ಎಂದು ಮೀನಾಕ್ಷಿ ಹೇಳಿದಾಗ ಅವನು ಉಬ್ಬಿದ್ದರೂ ತೋರಿಸಿಕೊಳ್ಳಲಿಲ್ಲ. 'ನಿಮ್ಮ ಬಲಾತ್ಕಾರಕ್ಕೋಸ್ಕರ ಉಳಿಯುತ್ತೇನೆ' ಎಂದು ಉತ್ತರಕೊಟ್ಟಿದ್ದ ಅವನ ಹೆಸರು ಕಿಶನ್ ರಾಯ್. ಅವು ಅವನ ನಿಜ ಹೆಸರು ಅಲ್ಲವೆಂದು ಅಲ್ಲಿ ಕೆಲವರಿಗೆ ಮಾತ್ರ ತಿಳಿದಿದ್ದಿತು. ಅವನ ತಾಯಿತಂದೆಯರು ಅವನಿಗೆ ಕೃಷ್ಣರಾವ್ ಎಂದು ನಾಮಕರಣ ಮಾಡಿದ್ದರು. ಆದರೆ ಅವನು ಬರೆಯಲು ಶುರುಮಾಡಿದಾಗ ತನ್ನ ಹೆಸರನ್ನು ಬದಲಾಯಿಕೊಂಡಿದ್ದ. ಈಗ ಮೂರನೆಯ ವ್ಯಕ್ತಿ! ಅದಿತಿಯನ್ನೇ ನೋಡುತ್ತಿದ್ದ ಯುವಕನ ಹೆಸರು ಜಯಸಿಂಹ ಸುಂದರಯ್ಯನವರ ಕ್ರಿಕೆಟ್ ಅಕ್ಯಾಡೆಮಿಯಲ್ಲಿಯೇ ಕ್ರಿಕೆಟ್ ಕಲಿತು ಈಗ ಕರ್ನಾಟಕಕ್ಕೆ ರಣಜಿ ಪಂದ್ಯಗಳಲ್ಲಿ ಆಡುತ್ತಿದ್ದ. ಇಂದಲ್ಲ, ನಾಳೆ ಭಾರತಕ್ಕೂ ಆಡುವನು ಎಂಬ ಭರವಸೆ ಇದ್ದಿತು. ಅದಿತಿಯನ್ನೇ ನೋಡುತ್ತಿದ್ದ ಜಯಸಿಂಹ ಕ್ಷಣಗಳಲ್ಲೇ ಅವಳನ್ನು ಪ್ರೇಮಿಸಲೂ ಪ್ರಾರಂಭಿಸಿದ. ಒಟ್ಟಿಗೆ ಓಡಾಡಲು ಶುರುಮಾಡಿದರು.

ಅವರ ಭೇಟಿಯಾದ ಒಂದು ತಿಂಗಳ ನಂತರ ಹಸಿರೂರಿನ ಉದ್ಯಾನವೊಂದರಲ್ಲಿ ಇಬ್ಬರೂ ಕುಳಿತಿದ್ದರು. ಆಗ ಜಯಸಿಂಹ ಪ್ರಾರಂಭಿಸಿದ

''ಅದಿತಿ, ನಾನು ನಿನ್ನನ್ನು ಪ್ರೀತಿಸುತ್ತೇನೆ...''

''ಜಯಸಿಂಹ, ಮತ್ತೆ ಶುರು ಮಾಡಿದೆಯಾ? ಪ್ರೀತಿ ಒಂದೇ ಅಲ್ಲ ಇರೋದು ಪ್ರಪಂಚದಲ್ಲಿ''

''ಪ್ರೀತಿ ಎಲ್ಲವನ್ನೂ ಗೆಲ್ಲಬಹುದು''

''ನೋಡು ಜಯಸಿಂಹ, ನೀನು ಇಷ್ಟ ಆದರೆ ಮದುವೆ ಗಿದುವೆ ಎಲ್ಲಾ..''

''ಏಕೆ ಅದಿತಿ?''

''ನೀನು ತಪ್ಪು ತಿಳಿದುಕೋ ಬಾರದು''

''ಇಲ್ಲ ಹೇಳು''

''ನೋಡು, ನಾನು ಬಹಳ ಸಾಧಾರಣ ಹುಡುಗಿ''

''ಯಾರು ಹೇಳಿದರು ನಿನಗೆ? ನೀನು ಬಹಳ ಸುಂದರ..''

''ಏನೋ ಸ್ವಲ್ಪ ನೋಡೋಕೆ ಚೆನ್ನಾಗಿರಬಹುದು, ಸರಿ! ಆದರೆ, ನಾನು ಒಟ್ಟಿನಲ್ಲಿ ಸಾಧಾರಣ. ಆದರೂ ನನಗೆ ಬಹಳ ಆಶೆ ಆಕಾಂಕ್ಷೆಗಳಿವೆ. ಸಮಾಜದಲ್ಲಿ ನನಗೆ ಬಹಳ ಮೇಲೆ ಹೋಗಬೇಕೂಂತ ಆಸೆ ಇದೆ..''

''ನನ್ನ ಮದುವೆಯಾದರೆ..''

''ನಾನು ಸಾಧಾರಣ. ನಾನು ಮದುವೆಯಾಗುವ ವ್ಯಕ್ತಿಯೂ ಸಾಧಾರಣ ಆಗಿಬಿಟ್ಟಲ್ಲಿ... ಇಲ್ಲ ಅಂತಹ ಜೀವನ ನನಗೆ ಇಷ್ಟವಿಲ್ಲ''

''ಹಾಗಾದರೆ ನನ್ನನ್ನು...''

''ಹೌದು, ಈಗ ಹೇಳು ನೀನು ಈ ಜೀವನದಲ್ಲಿ ಏನಾದರೂ ಸಾಧಿಸಿದ್ದೀಯಾ? ಹೇಳು, ಪುಟ್ಟದಾದರೂ ಪರವಾಗಿಲ್ಲ... ಅಥವಾ ಮುಂದೆ ಏನಾದರೂ ಆಗುವ ಸಾಧ್ಯತೆ ಇದೆಯೇ?''

ಜಯಸಿಂಹ ಸ್ವಲ್ಪ ಯೋಚಿಸಿದ.

''ಹೌದು, ನಾನು ಇಂಡಿಯಾ ಟೀಂಗೆ ಆಯ್ಕೆಯಾಗಲಿಲ್ಲ... ಆದರೆ ರಣಜಿ ಟ್ರೋಫಿ ಆಡುತ್ತಿದ್ದೇನಲ್ಲ?''

''ನಿನ್ನ ಜೀವನವೆಲ್ಲಾ ಕ್ರಿಕೆಟ್ಟೇ ಆಯಿತು. ಅದೇ ದೊಡ್ಡ ತೊಂದರೆ. ಬೇರೆ ಏನಾದರೂ ಮಾಡಿದ್ದೀಯ? ಬಿಡು. ಇದೇನು ನಿನಗೆ ನಾನು ಮೊದಲನೆ ಸತಿ ಹೇಳ್ತಾ ಇದ್ದೀನಾ? ನನಗೆ ಇಷ್ಟವಾಗುವ ಮನುಷ್ಯನಿಗೆ ಸಾಹಿತ್ಯದಲ್ಲಿ ಇಷ್ಟವಿರುತ್ತದೆ. ಮನಸ್ಸು ಸೂಕ್ಷ್ಮವಾಗಿರಬೇಕು. ಸೆನ್ಸಿಟೀವ್ ಇರಬೇಕು ಕಣೋ''

''ಅದೇ ಆ ಕಿಷನ್ ರಾಯ್ ತರಹ...''

''ಹೌದು, ನೋಡುತ್ತಿರು. ಆತ ಬಹಳ ದೊಡ್ಡ ವ್ಯಕ್ತಿಯಾಗುತ್ತಾರೆ. ಪ್ರಪಂಚ ಆವರ ಮುಂದೆ ತಲೆ ಬಾಗಿಸುತ್ತದೆ''

''ಅದಿತಿ! ಅದು ಅವನ ನಿಜ ಹೆಸರೂ ಅಲ್ಲ. ಕೃಷ್ಣರಾವ್ ಅಂತ ಇದ್ದಿದ್ದ ಹೆಸರನ್ನು ಕಿಶನ್ ರಾಯ್ ಮಾಡಿಕೊಂಡಿದ್ದಾನೆ. ಬಂಗಾಲೀ ಲೇಖಕ ಅನ್ನುವ ಅಭಿಪ್ರಾಯ ಬರಲಿ ಎಂದು''

''ಅವನ ಸಾಹಿತ್ಯ ಈಗ ಕೊಲ್ಕತ್ತದಲ್ಲಿ ಚರ್ಚೆಯಾಗುತ್ತಿದೆಯಂತೆ. ಜೈಪುರ ಸಾಹಿತ್ಯ ಸಮ್ಮೇಳನದಲ್ಲೂ ಅವನ ಹೆಸರನ್ನು ಯಾರೋ ಹೇಳಿದರಂತೆ''

''ನಿನಗೆ ಯಾರು ಹೇಳಿದ್ದು. ಅವನೇ ಇರಬೇಕು!''

''ಯಾರು ಹೇಳಿದರೇನಂತೆ. ನಿನಗೆ ಬರೀ ಅಸೂಯೆ. ನೀನು ಸುಧಾರಿಸಬೇಕು. ಏನಾದರೂ ಪುಸ್ತಕ, ಗಿಸ್ತಕ ಓದು''

''ಸರಿ, ನಾನೂ ನಾಳೆಯಿಂದ ನಿಮ್ಮ ಸಾಹಿತ್ಯ ಸಂಘದ ಸಭೆಗಳಿಗೆ ಬರ್ತೀನಿ''

ಜಯಸಿಂಹ ಸಾಹಿತ್ಯ ಸಂಘವನ್ನೇನೋ ಸೇರಿದ. ಅಲ್ಲಿ ಒಂದು ತಿಂಗಳನ್ನೂ ಕಳೆದ ಮಧ್ಯದಲ್ಲಿ ಏನಾಯಿತು? ಮಹಾ ಗ್ರೀಕ್ ವಿದ್ವಾಂಸ ಅರಿಸ್ಟಾಟಲ್ ಹೇಳಿದಂತೆ ಒಂದು ಕಥೆ ಅಥವಾ ನಾಟಕದಲ್ಲಿ ಘೋರ ವಿಷಯಗಳನ್ನೆಲ್ಲಾ ಬಿಡಿಸಿ ಹೇಳಬೇಕಿಲ್ಲ ಅಥವಾ ಆಡಿ ತೋರಿಸಬೇಕಿಲ್ಲ. ಆದ್ದರಿಂದ ಆ ಒಂದು ತಿಂಗಳಲ್ಲಿ ಜಯಸಿಂಹ ಪಟ್ಟ ಕಷ್ಟವನ್ನು ನೀವೇ ಊಹಿಸಿಕೊಳ್ಳಬೇಕು. ಹಾಗೂ ಸ್ವಲ್ಪಮಾತ್ರ ಇಲ್ಲಿ ಹೇಳುವ ಪ್ರಯತ್ನ ಮಾಡುತ್ತೇವೆ. ಬಂಗಾಳದ

ಮಹಾ ಆಧುನಿಕ ಸಾಹಿತಿ ರೊಬೀಂದ್ರ ಭಟರ್ಜಿಯವರ ಕಾದಂಬರಿಗಳನ್ನು ಅವನು ಓದಿ ಅರ್ಥ ಮಾಡಿಕೊಂಡು ಚರ್ಚಿಸಬೇಕು ಎಂದು ಮೀನಾಕ್ಷಿ ಮೇಡಮ್ ಅವರ ಆಜ್ಞೆಯಾಗಿದ್ದಿತು. ಅವರ ಪ್ರತಿಯೊಂದು ಕಾದಂಬರಿಯೂ ಕಡೆಯ ಪಕ್ಷ 500 ಪುಟಗಳಿದ್ದವು. ಅಂದರೆ ಅವರ ಹತ್ತೂ ಕಾದಂಬರಿಗಳನ್ನು ಮುಗಿಸಬೇಕಿದ್ದರೆ 5000 ಪುಟಗಳನ್ನು ಓದಬೇಕಿತ್ತು. ಆದರೆ ಅವರ ಒಂದು ಕಾದಂಬರಿಯನ್ನೂ ಜಯಸಿಂಹ ಪೂರ್ತಿ ಓದಲಾಗಲಿಲ್ಲ... ಏಕೆಂದರೆ ಒಂದು ಪುಟ ಓದಿ ಮುಂದಿನ ಪುಟಕ್ಕೆ ಹೋಗುವುದು ಅವನಿಗೆ ಮಹಾ ಪ್ರಯತ್ನವಾಗಿದ್ದಿತು. ಆದ್ದರಿಂದ ಮೊದಲ 50 ಪುಟಗಳನ್ನು ಕೂಡ ಮುಗಿಸಲಾಗಲಿಲ್ಲ. ಇದಲ್ಲದೆ ಜಯಸಿಂಹನಿಗೆ ಸಂಘದಲ್ಲಿ ಅದಿತಿಯನ್ನು ಆಗಾಗ್ಗ ನೋಡಿದಾಗ ಖುಷಿಯಾಗುತ್ತಿದ್ದರೂ ಮುಂದಿನ ಕ್ಷಣದಲ್ಲಿಯೆ ಅವಳ ಜೊತೆ ಕಿಷನ್ ಕಾಣಿಸಿಕೊಳ್ಳುತ್ತಿದದ್ದು ಅವನಿಗೆ ತಡೆಯಲಾರದ ದುಃಖವಾಗಿತ್ತು. ಕಿಷನ್ ಮತ್ತು ಅದಿತಿ ಮದುವೆಯಾಗಬಹುದೆಂಬ ಗಾಳಿಸುದ್ದಿ ಬಂದ ನಂತರ ಜಯಸಿಂಹನ ಮುಖದಲ್ಲಿ ಸಂತೋಷವೇ ಅಳಿಸಿಹೋಯಿತು. ಇದೇ ಸಮಯದಲ್ಲಿ ರೋಬೀಂದ್ರ ಭಟರ್ಜಿಯವರು ಹಸಿರೂರಿಗೆ ಭೇಟಿ ಕೊಡುತ್ತಾರೆ ಎಂಬ ಸುದ್ದಿ ಬಂದಿದ್ದು ಸಾಹಿತ್ಯ ಸಂಘದಲ್ಲಿ ಎಲ್ಲರೂ ಖುಷಿಯಿಂದ ಇದ್ದರು.

ಅಂತೂ ರೊಬೀಂದ್ರ ಭಟರ್ಜಿ ಹಸಿರೂರಿಗೆ ಬಂದಾಗ ಅವರಿಗೆ ಸಿಕ್ಕ ಸ್ವಾಗತ ಅದ್ಭುತವಾಗಿತ್ತು. ಅವರ ಕಾರು ಊರಿನೊಳಗೆ ಬರುತ್ತಲೇ ಮೂರು ಜನ ನಾದಸ್ವರ ಊದುತ್ತ ಅವರನ್ನು ಸ್ವಾಗತಿಸಿದರು. ರೊಬೀಂದ್ರ ಭಟರ್ಜಿಯವರು ದೊಡ್ಡ ಠಾಗೂರರ ತರಹವೇ ದೊಡ್ಡ ಗಡ್ಡವನ್ನು ಬಿಟ್ಟಿದ್ದರು. ಅವರು ಮಾತನಾಡಿದಾಗ ಮಾತ್ರ ಬಾಯಿ ಎಂಬ ಅಂಗ ಅಲ್ಲೇಲ್ಲೋ... ಅಡಗಿರಬೇಕು ಎಂದು ಊಹೆ ಮಾಡಕೊಳ್ಳಬೇಕಿತ್ತು. ಕಣ್ಣುಗಳೂ ದಟ್ಟ ಹುಬ್ಬುಗಳ ಮಧ್ಯೆ ಕಳೆದು ಹೋಗಿದ್ದವು. ಹಸಿರೂರು ಸಾಹಿತ್ಯ ಪ್ರೇಮಿಗಳಿಗೇನೋ ಇದು ದೊಡ್ಡ ಹಬ್ಬವಾಗಿದ್ದಿತು. ಆದರೆ ಭಟರ್ಜಿಯವರು ಸುಸ್ತಾಗಿಬಿಟ್ಟಿದ್ದರು. ಕರ್ನಾಟಕದಲ್ಲಿ ಕಳೆದ 2 ವಾರಗಳಿಂದಲೂ ದಿನಕ್ಕೆ 2-4 ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸುತ್ತಿದ್ದರು. ಅವರಿಗೆ ಯಾವಾಗ ಕಲ್ಕತ್ತಾಗೆ ವಾಪಸ್ಸು ಹೋಗುತ್ತೇನೋ ಎನಿಸಿಬಿಟ್ಟಿತ್ತು. ಎಲ್ಲಿ ಹೋದರೂ ಆಶು ಲೇಖಕರ ಕಾಟವಂತೂ ಬಹಳ ಇದ್ದಿತು.

ಆ ದಿನದ ಕಾರ್ಯಕ್ರಮ ದೀಪ ಹತ್ತಿಸುವುದರ ಮೂಲಕ ಪ್ರಾರಂಭವಾಯಿತು. ಅಲ್ಲೇ ನಿಂತಿದ್ದ ಜಯಸಿಂಹನಿಗೆ ಈ ಮಹಾಲೇಖಕರ ಗಡ್ಡಕ್ಕೆ ಬೆಂಕಿ ಹಚ್ಚಿಕೊಂಡುಬಿಡುತ್ತೋ ಎಂಬ ಆತಂಕವಿದ್ದಿತು. ಸರಸ್ವತಿಸ್ತುತಿಯನಂತರ ಮೀನಾಕ್ಷಿ ಸುಂದರಯ್ಯನವರು ಭಟರ್ಜಿಯವರನ್ನು ಸ್ವಾಗತಿಸಿ ದೊಡ್ಡ ಭಾಷಣವನ್ನೇ ಕೊಟ್ಟರು. ಅದಾದ ಮೇಲೆ ಕೆಲವು ಯುವತಿಯರು ಭಟರ್ಜಿಯವರ ವಿವಿಧ ಕಾದಂಬರಿಗಳನ್ನು ಪರಿಚಯಿಸಿಕೊಟ್ಟರು. ಆನಂತರ ಮೀನಾಕ್ಷಿಯವರು ಕಿಷನ್ ರಾಯ್ ಅವರನ್ನು ಪರಿಚಯ ಮಾಡಿಕೊಡಲು ಪ್ರಾರಂಭಿಸಿದರು. ''ಇವರು ನಮ್ಮ ಊರಿನ ಖ್ಯಾತ ಯುವ ಕಾದಂಬರಿಕಾರರು. ನಿಮ್ಮ ಬಂಗಾಳದ ಪರಂಪರೆಯ ವಿದ್ಯಾರ್ಥಿ. ಆಗಲೇ ಹೆಸರು ಮಾಡಿದ್ದಾರೆ'' ಎಂದರು. ಆಗ ಕಿಷನ್ ರಾಯ್ ಎದ್ದು ಎಲ್ಲರಿಗೂ ವಂದಿಸುತ್ತ, ಬಗ್ಗುತ್ತಾ ''ಬಂಗಾಳದ ಅಮೋಘ ಸಂಸ್ಕೃತಿಗೆ ನಮನ ಮೊಷಾಯ್ ಭಟರ್ಜಿಯವರೇ, ನಿಮ್ಮಂತಹವರನ್ನು ನೋಡುವುದು ನನ್ನ ಸೌಭಾಗ್ಯ. ನನಗೆ ಬಂಗಾಲೀ ಸಾಹಿತ್ಯವೆಂದರೆ ಚಿಕ್ಕಂದಿನಿಂದಲೂ ಬಹಳ ಪ್ರೀತಿ. ನನ್ನ ಮೇಲೆ ಬಂಕಿಮ ಮುಖರ್ಜಿಯವರ ಪ್ರಭಾವ ಬಹಳವಿದೆ. ನನ್ನ ಮೊದಲ ಕಾದಂಬರಿ...''

ಅಷ್ಟರಲ್ಲಿ ರೊಬೀಂದ್ರ ಭಟರ್ಜಿಯವರ ಗಡ್ಡದೊಳಗಿಂದ, ಗಣಿಯೊಳಗಿಂದ ಅದಿರು ಹೊರಬರುವ ಹಾಗೆ, ಒಂದು ಗಂಭೀರ ಮಾತು ಹೊರಬಂದಿತು. ''ಬಂಕಿಮ್ ಮುಖರ್ಜಿ ನಾಟ್ ಗುಡ್ ಬೋಗಸ್!'' ಹಸಿರೂರಿನ ಸಾಹಿತ್ಯ ಪ್ರೇಮಿಗಳಿಗೆ ದಿಗ್ಭ್ರಮೆಯಾಯಿತು. ಇದೇನು ಬಂಕಿಮರನ್ನು ಬೋಗಸ್ ಅಂತ ಹೇಳುತ್ತಿದ್ದರಲ್ಲ. ಆದರೆ ಇಲ್ಲಿಗೆ ಬಂದು ಒಂದು ವರ್ಷದಿಂದ ಈ ಕಿಷನ್ ರಾಯ್ ಬಂಕಿಮರನ್ನು ಹೊಗಳುತ್ತಲೇ ಇದ್ದಾನೆ. ಅಂದರೆ ಅವನ ಮಾತೆಲ್ಲಾ ಸುಳ್ಳೆಂದು ತಿಳಿಯಿತು. ಇಂತಹವನನ್ನು ನಾವು ಏಕೆ ಪ್ರೋತ್ಸಾಹಿಸಿದೆವು? ಅದಿತಿಗೆ ಬೇಜಾರಾಗಿ ತಲೆಯಮೇಲೆ ಒಂದು ಕೈ ಇಟ್ಟುಕೊಂಡಳು. ತಕ್ಷಣ ಕಿಷನ್ ರಾಯ್ ಉರುಫ್ ಕೃಷ್ಣರಾವ್ ಚೇತರಿಸಿಕೊಂಡು'' ಅದು ನನ್ನ ಪೂರ್ವಾಶ್ರಮದ ಕಥೆ... ಚಿಕ್ಕವರಿದ್ದಾಗ ನಾವು ಎಷ್ಟೋ ತಪ್ಪು ಮಾಡುತ್ತೀವಲ್ಲವೇ? ಹೌದು, ಹಿಂದೆ ಬಂಕಿಮ ಮುಖರ್ಜಿಯವರ ಪ್ರಭಾವವಿದ್ದಿತು. ಆದರೆ ಅವರ ನಿಜ ಯೋಗ್ಯತೆ ನನಗೆ ತಿಳಿದ ನಂತರ ನಾನು ಅವರನ್ನು ತ್ಯಜಿಸಿದೆ. ಈಗ ನಾನು ಶರತ್ ಬ್ಯಾನರ್ಜಿಯವರ ಅಭಿಮಾನಿ. ನನ್ನ ಎಲ್ಲ ಕಾದಂಬರಿಗಳ ಮೇಲೂ ಅವರ ಅಗಾಧ ಪ್ರಭಾವವಿದೆ..'' ಇದನ್ನು ಕೇಳಿದ ಸಾಹಿತ್ಯ ಸಂಘದ ಸದಸ್ಯರು ಲೊಚಗುಟ್ಟಿದರು. ಹೌದು, ಪಾಪ, ಚಿಕ್ಕಂದಿನ ತಪ್ಪುಗಳು. ಈಗ ಈ ಯುವಕ ಸರಿಯಾದ ದಾರಿಗೇ ಬಂದಿದ್ದಾನೆ. ಅಷ್ಟರಲ್ಲಿ ರೊಬೀಂದ್ರ ಭಟರ್ಜಿಯವರಿಂದ ಮತ್ತೊಂದು ಮಾತು ಹೊರಬಂದಿತು ''ಶರತ್ ಬ್ಯಾನರ್ಜಿ ನಾಟ್ ಗುಡ್ ಬೋಗಸ್! ದೊಡ್ಡ ಬೋಗಸ್! ಬಂಕಿಮ ಮುಖರ್ಜಿಯವರಿಗಿಂತ ಕೆಟ್ಟ ಲೇಖಕ''. ಈಗ ಹಸಿರೂರಿನ ಸಾಹಿತ್ಯ ಪ್ರೇಮಿಗಳಿಗೆ ಮತ್ತೊಂದು ಪ್ರಹಾರ! ಈ ಬೋಗಸ್ ಶರತ್ ಬ್ಯಾನರ್ಜಿಯನ್ನು ಮೆಚ್ಚಿಕೊಂಡ ಕಿಷನ್ ರಾಯ್‌ನತ್ತ ಎಲ್ಲರೂ ತಿರುಗಿದರು. ಅವರುಗಳ ಕೈನಲ್ಲಿ ಟೊಮೇಟೋಗಳು ಇದ್ದಿದ್ದಲ್ಲಿ ಎಲ್ಲವೂ ಕಿಷನ್ ರಾಯ್‌ನತ್ತ ಪ್ರಯಾಣ ಮಾಡುತ್ತಿದ್ದವು ಎನ್ನುವುದರಲ್ಲಿ ಅತಿಶಯವೇನೂ ಇಲ್ಲ. ಈತ ನಮಗೆ ನಿಜವಾಗಿ ಮೋಸ ಮಾಡಿದ್ದಾನೆ. ಇವನು ನಿಜವಾಗಿಯೂ ಉಡಾಫೆ. ಮೇಡಮ್ ಮೀನಾಕ್ಷಿಯವರಂತೂ ಅವನನ್ನು ಕೊಲ್ಲುವ ತರಹವೇ ನೋಡುತ್ತಿದ್ದರು. ಇದನ್ನೆಲ್ಲಾ ವೀಕ್ಷಿಸಿದ ಕಿಷನ್ ರಾಯ್ ರೂಮಿನಿಂದ ಹೊರಹೋದನು. ಅದಿತಿ ಗೋಪಾಲ್ ತನ್ನ ಎರಡೂ ಕೈಗಳನ್ನು ತಲೆಯಮೇಲೆ ಇಟ್ಟುಕೊಂಡಳು. ರೊಬೀಂದ್ರ ಭಟರ್ಜಿಯವರು ತಮ್ಮ ಸಾಹಿತ್ಯ ವಿಮರ್ಶೆಯನ್ನು ಮುಂದುವರಿಸಿದರು. ''ಬಂಕಿಮ್ ಬೋಗಸ್, ಶರತ್ ಬೋಗಸ್, ರಬೀಂದ್ರನಾಥ್ ಠಾಗೂರ್ ಪರ್ವಾಯಿಲ್ಲ, ವುಡ್ ಹೌಸ್ ಪರ್ವಾಯಿಲ್ಲ, ಟಾಲ್ಸ್ಟಾಯ್ ಪರವಾಗಿಲ್ಲ, ಆದರೆ ಇವರೆಲ್ಲಾ ಬರೇ ಪರವಾಗಿಲ್ಲ ಅಷ್ಟೆ. ನಿಜವಾಗಿಯೂ ಮಹಾ ಲೇಖಕನೆಂದರೆ ನಾನು ಮಾತ್ರ ರೊಬೀಂದ್ರ ಭಟರ್ಜಿ!'' ಎಲ್ಲರೂ ಚಪ್ಪಾಳೆ ತಟ್ಟಿದ ನಂತರ ಮೀನಾಕ್ಷಿಯವರು ಭಟರ್ಜಿಯವರನ್ನು ಏನಾದರೂ ತಿಂದುಬರೋಣ ಎಂದು ಕರೆದುಕೊಂಡು ಹೋದರು.

ಆ ಕೋಣೆಯಲ್ಲಿ ಅದಿತಿ ಮಾತ್ರ ಉಳಿದಳು. ಕಳೆದು 15 ನಿಮಿಷಗಳಲ್ಲಿ ಅವಳ ಪ್ರಪಂಚ ತಲಕೆಳಗಾಗಿದ್ದಿತು. ಅದಿತಿ ಕಿಷನ್ ರಾಯನ್ನು ಲೇಖಕನಾಗಿ ಬಹಳ ಇಷ್ಟಪಟ್ಟಿದ್ದಳು. ಆ ಇಷ್ಟ ಪ್ರೀತಿಯತ್ತ ತಿರುಗುತ್ತಿರಬಹುದು ಎಂದು ಅವಳಿಗೆ ಅನ್ನಿಸಿತ್ತು. ಅದು ರೊಬೀಂದ್ರ ಭಟರ್ಜಿಯವರ ವಿಮರ್ಶೆಗೆ ಮುಂಚೆ. ಆದರೆ ಅವರ ಮಾತನ್ನು ಕೇಳುತ್ತ ಕಿಷನ್ ರಾಯ್‌ನ ನಿಜ ಬಂಡವಾಳ ಅವಳಿಗೆ ಅರಿವಾಯಿತು. ಹೌದು, ಇವನು ಮಹಾ ಉಡಾಫೆ. ನಾನೂ ಹುಚ್ಚಿ ಎಂದು ಕೊಂಡಳು. ಮುಂದೆ ಏನು ಮಾಡುವುದೆಂದು ಅವಳಿಗೆ ತಿಳಿಯಲಿಲ್ಲ.

ಕಾಫಿಯನ್ನು ಹೀರುತ್ತಿದ್ದ ರೊಬೀಂದ್ರ ಭಟರ್ಜಿಯವರನ್ನು ಮೀನಾಕ್ಷಿಯವರು ಕರ್ನಾಟಕದಲ್ಲಿ ನೀವು ಇನ್ನೇನು ನೋಡಬೇಕೆಂದಿದ್ದೀರಿ ಎಂದರು. ನಿಮ್ಮ ಊರಿನಲ್ಲೇ ನಾನು ಒಬ್ಬರನ್ನು ನೋಡಬೇಕಾಗಿದೆ ಎಂದು ಭಟರ್ಜಿ ಉತ್ತರ ಕೊಟ್ಟರು. ಯಾರವರು ಎಂದು ಕೇಳಿದ್ದಕ್ಕೆ ಭಟರ್ಜಿ ''ನಾನು ಸೋಂಡರೇಯ ಅವರನ್ನು ನೋಡಿ ಮಾತನಾಡಿಸಬೇಕು'' ಎಂದರು. ಮೀನಾಕ್ಷಿಯವರು ಆ ಹೆಸರಿನವರು ಈ ಊರಿನಲ್ಲಿ ಯಾರು ಇಲ್ಲವೆಂದು ಹೇಳಿದರು. ಚಟರ್ಜಿ ಮತ್ತೆ ''ಮಿಸ್ಟರ್ ಸೋಂಡರೇಯ ಅವರು ಇಲ್ಲೇ ಇದ್ದಾರೆ'' ಎಂದರು. ಆಗ ಜಯಸಿಂಹ ಮೇಡಮ್, ಅವರು ನಮ್ಮ ಸುಂದರಯ್ಯ ಸಾರ್ ಅವರ ಬಗ್ಗೆ ಕೇಳುತ್ತಿದ್ದಾರೆ.. ಅಲ್ಲವೆ ಎಂದ. ಹೌದು, ಖ್ಯಾತ ಕ್ರಿಕೆಟ್ ಆಟಗಾರ ಸೋಂಡರೇಯ ಎಂದು ಮತ್ತೆ ಒತ್ತಿ ಹೇಳಿದರು. ಭಟರ್ಜಿ ಜಯಸಿಂಹನ ಹತ್ತಿರ ಬಂದು ''ಸೋಂಡರೇಯ ಅವರು ಕ್ರಿಕೆಟ್ಟಿನಲ್ಲಿ ದಂತ ಕಥೆ... ಲೇಟ್ ಕಟ್‌ನಲ್ಲಿ ವಿಜಯ ಮರ್ಚೆಂಟರನ್ನೂ ಮೀರಿಸಿದ್ದರು'' ಆಗ ಜಯಸಿಂಹ ಹೌದು, ಆದರೆ ಅವರು ಈಗ ಇಲ್ಲಿಲ್ಲ. ಸಾಯಂಕಾಲ ಬರುತ್ತಾರೆ. ನೀವು ಹೇಗೂ ಇಂದು ರಾತ್ರಿ ಇಲ್ಲೇ ಇರುತ್ತೀರಲ್ಲವೇ ಎಂದು ಕೇಳಿದ. ಅದಕ್ಕೆ ಅವರು

''ಹೌದು, ಸೋಂಡರೇಯ ಅವರನ್ನು ನೋಡಲೇಬೇಕು.. ನಿಮ್ಮನ್ನೂ ಎಲ್ಲೋ ನೋಡಿದ್ದೇನಲ್ಲವೇ?''

''ಇರಬಹುದು, ನಾನು ಕಲ್ಕತ್ತಾದಲ್ಲಿ ಆಡಿದ್ದೇನೆ... ಆರು ತಿಂಗಳ ಹಿಂದೆ. ರಣಜಿ ಫೈನಲ್ ಪಂದ್ಯವಿತ್ತಲ್ಲ...'' ಎಂದು ಜಯಸಿಂಹ ಉತ್ತರಿಸಿದ.

''ಹೊ ಹೊ! ನೀವು ಜೋಸಿಂಹ! ಬಂಗಾಳ ವಿರುದ್ಧ ಸೆಂಚುರಿ ಬಾರಿಸಿದ ಜೋಸಿಂಹ. ನೀವೇ ಕೊರ್ನಾಟಕವನ್ನು ಗೆಲ್ಲಿಸಿದಿರಿ'' ಎಂದು ಅವರು ಜಯಸಿಂಹನನ್ನು ತಬ್ಬಿಕೊಂಡರು.

'ಹೌದು, ಏನೋ ಆಡಿದೆ ಸರ್' ಎಂದ ಜಯಸಿಂಹ.

''ಎಂತಹ ಮಹಾ ಪ್ರತಿಭೆ ನಿಮ್ಮದು! ಹೀಗೇ ಆಡಿದರೆ ನೀವು ಎಲ್ಲರನ್ನೂ ಮೀರಿಸಿಬಿಡುತ್ತೀರಿ. ಬನ್ನಿ ಮಾತನಾಡೋಣ'' ಎಂದು ಜಯಸಿಂಹನ ಭುಜದ ಮೇಲೆ ಕೈಹಾಕಿದರು.

''ಬನ್ನಿ ಸಾರ್, ನಮ್ಮ ಕ್ರಿಕೆಟ್ ಮೈದಾನಕ್ಕೆ ಕರೆದುಕೊಂಡು ಹೋಗುತ್ತೇನೆ'' ಎಂದ ಜಯಸಿಂಹ ಅವರ ಜೊತೆ ಹೊರಟ.

ಅದಿತಿ ಜಯಸಿಂಹನನ್ನೇ ನೋಡುತ್ತಿದ್ದಳು. ಅಂತಹ ದೊಡ್ಡ ಲೇಖಕರು ಜಯಸಿಂಹನನ್ನು ಅಪ್ಪಿಕೊಂಡಾಗ ಅವಳ ಜೀವನವೇ ಬದಲಾಯಿತು. ಹೋಗಿ ಹೋಗಿ ನಾನು ಯಾರನ್ನೋ ಪ್ರೀತಿಸುತ್ತಿದ್ದೆನಲ್ಲ ಎಂದು ತನ್ನನ್ನೇ ಬೈದುಕೊಂಡಳು! ಜಯಸಿಂಹನ ಜೊತೆಯೇ ಜೀವನ ಕಳೆದರೆ ಹೇಗಿರುತ್ತೋ? ಕ್ರಿಕೆಟ್ ಜಗತ್ತಿನಲ್ಲಿ ತಾರೆಯಾಗುವಂತಹವನು ಇವನು. ಅದಲ್ಲದೆ ನನ್ನನ್ನು ಪ್ರೀತಿಸುತ್ತಿದ್ದಾನೆ ಕೂಡ! ಅದಿತಿ ಜಯಸಿಂಹನತ್ತ ಬಂದು ''ನಾನು ನಿಮ್ಮಿಬ್ಬರ ಜೊತೆ ಬರಲೇ'' ಎಂದಳು. ಅದಕ್ಕೆ ಭಟರ್ಜಿ ಬನ್ನಿ, ಫೇರ್ ಲೇಡಿ ಆಲ್ವೇಸ್ ವೆಲ್ಕಮ್ ಎಂದರು. ಜಯಸಿಂಹ ಅದಿತಿಯನ್ನು ನೋಡಿ ಕಣ್ಣು ಮಿಟುಕಿಸಿದ.

*(ಕ್ಲಿಕಿಂಗ್ ಆಫ್ ಕತ್ ಬರ್ಟ್ – ಎಂಬ ವುಡ್ ಹೌಸರ ಕಥೆಯನ್ನು ಆಧರಿಸಿ)*

✤

**- ದಂನಆ**

- ಎ ಬಿ ಸಿ ಡಿ ಆಫ್ ಇಂಡಿಯ – ಎ ಅಂದರೆ ಆಸ್ಟ್ರಾಲಜಿ, ಬಿ ಅಂದರೆ ಬಾಲಿವುಡ್, ಸಿ ಅಂದರೆ ಕ್ರಿಕೆಟ್, ಡಿ ಅಂದರೆ ದೂರದರ್ಶನ.
- ಪುಕ್ಕಟೆ ಔಷಧಿ ಅಂದ್ರೆ ನನಗೂ ತಲೆನೋವು ಅಂದ್ರಂತೆ.
- ಸಾಗರವೇ ದೊರಕಿದ ಮೇಲೆ ಕೆರೆಯ ಬಗ್ಗೆ ಯೋಚಿಸಬೇಕೇಕೆ?

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಸ್ವಲ್ಪವೇ ಮಾಡಲು ಸಾಧ್ಯ ಎಂದುಕೊಂಡು ಏನೂ ಮಾಡದೇ ಇರುವುದಕ್ಕಿಂತ ದೊಡ್ಡ ತಪ್ಪು ಇನ್ನೊಂದಿಲ್ಲ.
- ಪೀಪಲ್ ಸೆ ನಥಿಂಗ್ ಈಸ್ ಇಂಪಾಸಿಬಲ್, ಬಟ್ ಐ ಡು ನಥಿಂಗ್ ಎವೆರಿಡೆ.
- ಮನುಷ್ಯ ಯಾವುದನ್ನು ನಂಬುತ್ತಾನೊ ಅದನ್ನು ಪವಿತ್ರಗೊಳಿಸುತ್ತಾನೆ.
- ನಿಮಗೆ ಕಬ್ಬು ಬೆಳೆಯ ಬಗ್ಗೆ ಪಿಎಚ್‌ಡಿ ಮಾಡಿದ್ದರೆ ನೀವು ಒಬ್ಬ ಪರಿಣಿತರಾಗುತ್ತೀರಿ. ಆದರೆ 40 ವರ್ಷಗಳಿಂದ ಕಬ್ಬು ಬೆಳೆಯುತ್ತಿರುವ ರೈತ ಪರಿಣಿತ ಎಂದು ಕರೆಯಿಸಿಕೊಳ್ಳುವುದೇ ಇಲ್ಲ.
- ಅನೇಕ ವೇಳೆ ನಮಗೆ ದಕ್ಕುವುದು ಮೆಡಿಕಲ್ ಕೇರ್ ಅಲ್ಲ, ಮೆಡಿಕಲ್ ಸ್ಕೇರ್.
- ಎಲ್ಲದಕ್ಕೂ ಸಾರಿ ಹೇಳುತ್ತಾ ಬಂದರೆ ಆ ಪದಕ್ಕೆ ಅರ್ಥವೇ ಇಲ್ಲದಂತಾಗುತ್ತದೆ.
- ಚಾಂಪಿಯನ್ಸ್ ಆರ್ ಮೇಡ್, ಯು ಹ್ಯಾವ್ ಟು ವರ್ಕ್ ಟು ಬಿಕಂ ಒನ್.
- 'ನನ್ನ ನಿಜವಾದ ಸ್ನೇಹಿತ ಯಾರು?'ಎಂದು ಕೇಳಲೇಬೇಡ. ಬದಲಿಗೆ, 'ನಾನು ಇನ್ನೊಬ್ಬರಿಗೆ ನಿಜವಾದ ಸ್ನೇಹಿತನೆ?' ಎಂದು ಕೇಳಿಕೊ.
- ವೈದ್ಯರು ಸಿಕ್ಕಿದರೂ ಸಾಯಲೇಬೇಕಾದವನ ಜೀವ ಉಳಿಸಲು ಸಾಧ್ಯವೆ?
- ಉಪದೇಶ ಮಾಡುವುದು ಸುಲಭ ಎಂದು ಯಾರು ಹೇಳಿದ್ದು? ನೀವು ಕಷ್ಟಪಟ್ಟಿದ್ದರೆ ಮಾತ್ರ ಅದು ಪರಿಣಾಮಕಾರಿಯಾಗಿರುತ್ತದೆ.
- ಎ ಹೆಲ್ತಿ ಔಟ್‌ಸೈಡ್ ಸ್ಟಾರ್ಟ್ಸ್ ಫ್ರಂ ದಿ ಇನ್‌ಸೈಡ್.
- ಯಾರೋ ಎಂದೋ ನೆಟ್ಟಿದ್ದರಿಂದ ಇಂದು ನೀವು ಆ ಮರದ ನೆರಳಿನಲ್ಲಿ ವಿಶ್ರಮಿಸಲು ಸಾಧ್ಯವಾಯಿತು.

✤

# ಹರಿಕೇನ್ ಕರೀಮಾ

**- ಸಿ.ಆರ್. ಸತ್ಯ**

ಇತ್ತೀಚೆಗೆ ಒಂದು ದಿನ ಸ್ವಲ್ಪ ಜಾಸ್ತಿಯಾಗಿಯೇ ಊಟ ಮಾಡಿ ಮಧ್ಯಾನ್ಹದ ನಿದ್ರೆಗೆ ರೆಡಿ ಆಗ್ತಿದ್ದೆ. ಅಷ್ಟರಲ್ಲೇ ನನ್ನ ಹೆಂಡತಿ ಓಡಿ ಬಂದು ರೀ, ಏಳಿ ಮೇಲೆ. ಇನ್ನೈದು ನಿಮಿಷದಲ್ಲಿ ಹರಿಕೇನ್ ಕರೀಮ ನಮ್ಮನೇನ ಅಪ್ಪಳಿಸುತ್ತೆ! ಅಂತ ಕೂಗಿದಳು. ನಾನು ಅಲ್ಲಮ್ಮ, ಹರಿಕೇನ್ ಹಾರ್ವೇ, ಇರ್ಮಾ ಅವೆಲ್ಲಾ ಕಳೆದ ತಿಂಗಳು ಅಮೇರಿಕಾಗೆ ಅಪ್ಪಳಿಸಿದ್ದು ನಿಜ. ಎಲ್ಲಾ ಬಿಟ್ಟು ಇಲ್ಲಿ–ನಮ್ಮ ಮನೇಮೇಲೆ – ಅಪ್ಪಳಿಸೋ ಹರಿಕೇನ್ ಯಾವುದು? ಅಂತ ಕೇಳಿದೆ.

ಅದಕ್ಕೆ ಅವಳು ನಿಮ್ಮ ಹತ್ತಿರ ಹರಟೆ ಹೊಡೆಯೋಕ್ಕೆ ಟೈಮ್ ಇಲ್ಲ. ಮೊದಲು, ಗೇಟ್ ಹೊರಗೆ ನಿಲ್ಲಿಸಿರೋ ಕಾರ್‌ನ ಶೆಡ್ ಒಳಗೆ ಇಡಿ. ಆಮೇಲೆ ಡ್ರಾಯಿಂಗ್ ರೂಮ್‌ನಲ್ಲಿ ಇರೋ ಫ್ಲವರ್ ವಾಜು, ಗಾಜಿನ ಪೇಪರ್ ವೈಟು, ನೀವು ಹೊಡೆದಿದ್ದ ಲೆಕ್ಚರ್‌ಗೆ ಯಾರೋ ಪುಣ್ಯಾತ್ಮರು ಕೊಟ್ಟಿದ್ದರಲ್ಲಾ – ಆ ಕೆಲಸಕ್ಕೆ ಬಾರದ ಮೆಮೆನ್ಟೋ – ಆಮೇಲೆ ಡೈನಿಂಗ್ ಟೇಬಲ್ ಮೇಲೆ ಇರೋ ಸೆರಾಮಿಕ್ ಕಪ್ಪು ಸಾಸರುಗಳು – ಇವುನ್ನೆಲ್ಲಾ ಭದ್ರವಾಗಿ ಒಳಗೆ ಎಲ್ಲಾದರೂ ಇಡಿ. ವರಾಂಡದಲ್ಲಿರೋ ನನ್ನ ಹೊಸಾ ಚಪ್ಪಲಿಗಳನ್ನ ಹಿಂದುಗಡೆ ಕಾರಿಡಾರ್‌ನಲ್ಲಿ ಇಟ್ಟು ಬನ್ನಿ. ಆಮೇಲೆ ನಿಮ್ಮ ಮಾತು ಅಂದಳು. ನನಗೆ ಆಶ್ಚರ್ಯ ಆಯ್ತು, ಯಾಕೋ ಗಾಬರೀನೂ ಆಯ್ತು. ಬೆಂಗಳೂರಿನಲ್ಲಿ ಸುಂಟರಗಾಳಿ ಏನೋ ಆಗೊಮ್ಮೆ ಈಗೊಮ್ಮೆ ಅನುಭವಿಸಿದ್ದ ನನಗೆ ಹರಿಕೇನ್ ಅಂದರೆ ಸ್ವಂತ ಅನುಭವ ಇರಲಿಲ್ಲ. ಏನಿದ್ರೂ ಟಿ.ವಿ.ನಲ್ಲಿ ನೋಡಿದ್ದು ಎಷ್ಟೋ ಅಷ್ಟೆ! ಎಷ್ಟು ವೇಗದಲ್ಲಿ ಬರ್ತಿದೆ? ಈಗ ಅದು ಎಲ್ಲಿದೆ? ಅಂತ ಕೇಳಿದೆ. ಮಾತು ನಿಲ್ಲಿಸಿ ಹೇಳಿದ್ದು ಮಾಡಿ ಅಂದರೆ ಅರ್ಥ ಆಗಲಿಲ್ಲವಾ? ಆಗಲೇ ನಮ್ಮ ರೋಡ್‌ಗೆ ಬಂದಿದೆ. ಈಗ ಟೆಲಿಫೋನ್ ಬಂತು! ಅಂತ ಅವಳು ಅಡುಗೆಮನೆ ಕಡೆ ಓಡಿದಳು.

ಇದಾಗಿ ಎರಡು ನಿಮಿಷ ಆಯ್ತು ಅಂತ ಕಾಣುತ್ತೆ. ನಮ್ಮ ಮನೆಯ ಗೇಟ್ ಹತ್ತಿರ ಢುಮ್! ಅಂತ ಶಬ್ದ ಬಂತು. ನಾವಿಬ್ಬರೂ ಹೊರಗೆ ಓಡಿ ಹೋಗಿ ನೋಡಿದ್ರೆ, ನಮ್ಮ ಕಾರ್‌ಗೆ ಇನ್ನೊಂದು ಕಾರ್ ಹಿಂದಿನಿಂದ ಜಜ್ಜಿದ್ದಲ್ಲದೆ, ನಮ್ಮ ಕಾರ್‌ನ ಗೇಟ್ ಕಡೆಗೆ ತಳ್ಳಿದ ಹಾಗೆ ಕಾಣಿಸ್ತು. ಗೇಟ್‌ನ ಒಂದು ಭಾಗ ಆಗಲೇ ಬಗ್ಗಿತ್ತು. ಆಗ ಆ ಇನ್ನೊಂದು ಕಾರಿನಿಂದ ಪ್ರಪಂಚದಲ್ಲಿ ಯಾವ ಯೋಚನೇನೂ ಇಲ್ಲದ ಹಾಗೆ ಸಂತೋಷದ ಮುಖ ಮಾಡಿಕೊಂಡು ಒಂದು ಧಡೂತಿ ಹೆಂಗಸು ಹೊರಗೆ ಬಂತು. ನನ್ನ ಹೆಂಡತೀನ ನೋಡಿದ ತಕ್ಷಣ ಹಲೋ ಶಾಲೀ, ಹೇಗಿದ್ಯೇ? ಸೋ ನೈಸ್ ಟು ಸೀ ಯು! ಅಂತ ಅವಳನ್ನ ತಬ್ಬಿಕೊಳ್ಳೋಕೆ ಓಡಿ ಬಂದಳು. ನನ್ನ ಹೆಂಡತಿ ಗಾಬರಿಯಿಂದ ಬಾರೇ ಕರೀಮಾ, ವೆಲ್ಕಮ್! ವೆಲ್ಕಮ್!! ಅಂತ ತಬ್ಬಿಸಿಕೊಳ್ಳೋಕ್ಕೆ ರೆಡಿ ಆಗ್ತಾ, ಅವಳಿಗೆ ಕೇಳದ ಹಾಗೆ ರೀ ಹುಷಾರು, ನಿಮ್ಮನ್ನೂ ತಬ್ಬಿಗೊಳ್ತಾಳೋ ಏನೋ ಅಂತ ಉಸುರಿದಳು. ನಾನು ಹಿಂದಕ್ಕೆ ಸರಿದೆ. ಈಗ ಅರ್ಥವಾಯ್ತು! ಹರಿಕೇನ್ ಕರೀಮ ಅಂದರೆ ಏನೂ ಅಂತ! ಅವರಿಬ್ಬರ ಪರಸ್ಪರ ಆಲಿಂಗನ ಆದಮೇಲೆ ನನ್ನ ಕಡೆ ಬಂದು, ಹೌ ಆರ್ ಯೂ ಬಡ್ಡೀ..? ಅಂತ ನನ್ನ ಎರಡೂ ಕೈಗಳನ್ನ ಭದ್ರವಾಗಿ ಹಿಡಿದುಕೊಂಡು ಕೈ ಕುಲುಕಿದಳು. ಆಗ ನನ್ನ ಎಡಗೈನ ಕಿರು ಬೆರಳಿನಿಂದ ಟಕ್! ಅಂತ ಶಬ್ದ ಬಂತು. ಎರಡು ತಿಂಗಳ ಹಿಂದೆ ಇಲಿ ಬೋನಿನಲ್ಲಿ ಕೈ ಸಿಕ್ಕಿಕೊಂಡು ಆ ಬೆರಳಿಗೆ ಆಗಿದ್ದ ಫ್ರಾಕ್ಚರ್ ಈಗ ಮತ್ತೆ ಆಯ್ತು ಅಂತ ಅರ್ಥವಾಯಿತು. ಒಳಗೆ ಬಾರೇ ಅಂತ ನನ್ನ ಹೆಂಡತಿ ಕರೀತಿದ್ದ

ಹಾಗೇ ಹರಿಕೇನು ಅವಸರದಲ್ಲಿ ಗೇಟ್ ಪಕ್ಕ ಆಗ ತಾನೇ ಲಾಲ್‌ಬಾಗ್ ಫ್ಲವರ್ ಶೋ ನಿಂದ ತಂದಿದ್ದ ಎರಡು ಪಪ್ಪಾಯಾ ಸಸಿಗಳಿದ್ದ ಪಾಟ್‌ಗಳಿಗೆ ಕಾಲು ತಾಕಿಸಿಕೊಂಡಳು. ಅವೆರಡು ಪಾಟ್‌ಗಳೂ ನೆಲ ಕಚ್ಚಿಕೊಂಡಿದ್ದನ್ನು ನೋಡಿ ಸಾರೀ ಕಣೇ ಅಂತ ಒಳಗೆ ನುಗ್ಗಿದ್ಲು. ನನ್ನ ಹೆಂಡತಿ ಪರವಾಗಿಲ್ಲ. ನಮಗೇನಾದರು ಡೆಂಗ್ಯೂ ಜ್ವರ ಬಂದರೆ ಪಪ್ಪಾಯಾ ಗಿಡದ ಎಲೆಗಳು ಒಳ್ಳೇದಂತೆ, ಅದಕ್ಕೆ ಅವನ್ನ ತಂದು ಇಟ್ಕೊಂಡಿದ್ವಿ. ಇಲ್ಲೀ ತನಕ ಜ್ವರದ ಲಕ್ಷಣಗಳೇನೂ ಇಲ್ಲ ಬಿಡು. ಅಂತ ಸಮಾಧಾನ ಹೇಳಿದ್ಲು. ಅವರಿಬ್ಬರೂ ಒಳಗೆ ಹೋದಾಗ ನಾನು ನನ್ನ ಕಾರ್ ಕತೆ ಏನೂ ಅಂತ ನೋಡಿದೆ. ಹಿಂದುಗಡೆ ಬಂಪರ್ ಮತ್ತು ಡಿಕ್ಕಿ ಡೋರ್ ಒಂದೊಂದು ದಿಕ್ಕಿಗೆ ತಿರುಗಿದ್ವು. ಸರಿ ಸುಮಾರು ಇದು ಐದು ಸಾವಿರ ರೂಪಾಯಿ ಬಾಬ್ತು ಬಂತು ಅಂತ ಲೆಕ್ಕ ಹಾಕಿ ಒಳಗೆ ಬಂದೆ.

ಡ್ರಾಯಿಂಗ್ ರೂಮ್‌ನಲ್ಲಿ ನನ್ನ ಹೆಂಡತಿ ಕೂತ್ಕೋ ಅನ್ನುತ್ತಲೇ ಅವಳು ಕೂತ್ಕೊಳ್ಳೋ ರಭಸದಲ್ಲಿ ಅವಳ ಪೋನಿಟೈಲು ಹಿಂದುಗಡೆ ಟಿ.ವಿ. ಟೇಬಲ್ ಮೇಲೆ ಇಟ್ಟಿದ್ದ ನನಗೆ ಯಾರೋ ಕೊಟ್ಟ ಮೆಮೆನ್ಟೋ (ಪಿಂಗಾಣಿಯಲ್ಲಿ ಮಾಡಿದ್ದ) ರಾಧಾ ಕೃಷ್ಣಗೆ ತಾಕಿ ಅದು ಕೆಳಗೆ ಬಿದ್ದು ಹತ್ತು ಚೂರಾಯ್ತು. ನಾನು ಮೆಲ್ಲಗೆ ಅವನ್ನ ಕಾಲಿನಿಂದ ಮೂಲೆಗೆ ತಳ್ಳಿದ್ದು ಅವಳ ಗಮನಕ್ಕೆ ಬರಲಿಲ್ಲ. ಹೇಗಿದೆ ದುಬಾಯ್ ಲೈಫು? ಎಷ್ಟು ದಿವಸಕ್ಕೆ ಬಂದಿದೀಯಾ? ಅಂತ ಶಾಲಿ ಕೇಳಿದಳು. ಒಂದು ವಾರಕ್ಕೆ ಬಂದೆ ಅಷ್ಟೆ ಕಣೆ, ಈ ಸಲ ನಿಮ್ಮ ಮನೇಲೆ ಇರೋಣ ಅಂತ ಪ್ಲಾನ್ ಮಾಡಿದ್ದೆ ಕಣೆ. ಆದರೆ ನಮ್ಮ ಅಣ್ಣ ಇಲ್ಲ ಈ ಸಲ ನೀನು ನಮ್ಮನೇಲೆ ಇರಬೇಕು ಅಂತ ಮೊಂಡು ಹಿಡಿದ. ಕೋರಮಂಗಲದಲ್ಲಿ ಇದಾನೆ. ಅಲ್ಲೇ ಇದೀನಿ ಅಂತ ಅಂದಳು. ಸೋ ಸ್ಯಾಡ್! ಅಂತ ಶಾಲಿ ಹೇಳಿದಳು (ಅವಳು ಸುಳ್ಳು ಹೇಳಿದರೆ ನನಗೆ ಅಷ್ಟು ತಿಳಿಯಲ್ವೆ?). ನಾನು ಮನಸ್ಸಿನಲ್ಲೇ ಸೋ ಹ್ಯಾಪೀ! ಅಂದುಕೊಂಡೆ. ಶಾಲೀ, ನಿನಗೆ ದುಬಾಯಿ ಡೇಟ್ಸು ಮತ್ತೆ ಹನಿ ತಂದಿದೀನಿ ಕಣೆ. ತೊಗೊಳ್ಳೆ. ಹನಿ ಎಷ್ಟು ಚೆನ್ನಾಗಿದೆ ಅಂತೀಯ, ತೋರಿಸ್ತೀನಿ ನೋಡು ಅಂತ ಬಾಟಲ್‌ನ ಮುಚ್ಚಳ ತೆಗೆಯೋಕ್ಕೆ ಹೋದಳು. ನನ್ನ ಹೆಂಡತಿ ಅಯ್ಯೋ, ಮುಚ್ಚಳ ಯಾಕೆ ತೆಗೀತೀಯಾ? ಬೇಡಾ ಕಣೆ, ಥ್ಯಾಂಕ್ಸ್! ಅಂತ ಹೇಳೊಕ್ಕೆ ಮುಂಚೇನೆ ಮುಚ್ಚಳ ತಗೆದು ನನಗೆ, ನನ್ನ ಹೆಂಡತಿಗೆ ತೋರಿಸಕ್ಕೆ ಬಗ್ಗಿದಳು. ಕೈನಿಂದ ಬಾಟಲ್ ಜಾರಿ ಹನಿ ಕಾರ್ಪೆಟ್ ಮೇಲೆ ಹರಡಿ ಕೊಂಡ್ತು. ಮೈ ಗಾಡ್, ಡೋಂಟ್ ವರಿ, ನಮ್ಮ ಅಣ್ಣನ ಮನೇಲೆ ಇನ್ನೂ ಎರಡು ಬಾಟಲ್‌ಗಳಿವೆ ಕಣೆ. ನಿನಗೊಂದು ಕೊಡೋಕ್ಕೆ ಹೇಳ್ತೀನಿ. ಅಂದ ಹಾಗೆ ನಿಮ್ಮ ಬಿಸಿನೆಸ್ ಹೇಗಿದೆ? ಅಂತ ನನ್ನ ಕೇಳಿದ್ಲು. ನಾನು ಏನೋ ನಡೀತಿದೆ. ಒಂದು ದಿವಸ ಪ್ರಾಫಿಟ್ ಅಂತ್ಕೊಂಡರೆ, ಮಾರನೇ ದಿವಸ ಲಾಸ್! ಅಪ್ ಎಂಡ್ ಡೌನ್ ಅಂದೆ (ನನ್ನ ಮನಸ್ಸಿನಲ್ಲಿ ಕಾರ್ ರಿಪೇರಿ ಖರ್ಚು ಬಗ್ಗೆ ಯೋಚನೆ ಇತ್ತು). ಸೋ ಫನ್ನಿ!! ಅಂತ ನಕ್ಕಿದ್ಲು. ನನ್ನ ಹೆಂಡತಿ, ಬಾರೇ ಡೈನಿಂಗ್ ಟೇಬಲ್‌ಗೆ ಹೋಗೋಣ. ಇವರು ಸ್ವಲ್ಪ ಕಾರ್ಪೆಟ್ ಕ್ಲೀನ್ ಮಾಡ್ತಾರೆ ಅಂತ ನನ್ನ ಕಡೆ ನೋಡಿದ್ಲು. ಸರಿ, ಆ ಕೆಲಸಕ್ಕೆ ಇಳಿದೆ. ನನ್ನ ಗಂಡಾನೂ ಅಷ್ಟೆ ಕಣೆ. ಕ್ಲೀನ್ ಮಾಡೋದರಲ್ಲಿ ಎಕ್ಸ್‌ಪರ್ಟು! ಅವರಿಗೆ ಬರೋದಕ್ಕೆ ಆಗಲಿಲ್ಲ. ಆಫೀಸ್ ಪ್ರೆಶ್ಶರು! ಅಂದಳು. ನಾನು ಮನಸ್ಸಿನಲ್ಲೇ ಅವನು ಬಂದಿದ್ದರೆ ಅವನಿಗೇ ಕ್ಲೀನ್ ಮಾಡೊಕ್ಕೆ ಹೇಳ್ತಿದ್ದೆ ಅಂದುಕೊಂಡೆ.

ನಮ್ಮ ಡೈನಿಂಗ್ ಟೇಬಲ್ ಜೊತೆ ಇರೋ ಆರು ಕುರ್ಚಿಗಳಲ್ಲಿ ಒಂದು ಕುರ್ಚಿಗೆ ಒಂದು ಕಾಲು ಮುರಿದುಹೋಗಿತ್ತು. ಅದರ ಮೇಲೆ ಮಾತ್ರ ಕೂತ್ಕೋಬೇಡಾ ಅಂತ ಶಾಲಿನಿ ಹೇಳೋಕ್ಕೆ ಮುಂಚೇನೆ, ಕರೀಮ ಅದೇ ಕುರ್ಚಿ ಮೇಲೆ ದೊಪ್ ಅಂತ ಕೂತ್ಲು. ಒಂದು ಸೆಕೆಂಡ್ ಏನೂ ಆಗಲಿಲ್ಲ. ಆಮೇಲೆ ಕುರ್ಚಿ ಕೆಳಗಿನಿಂದ ಸಿಡಿಲು ಬಡಿದ ಹಾಗೆ ಶಬ್ಧ ಬಂತು.

ಇವಳು ಮಗುಚಿಕೊಂಡು ಬಿದ್ದರೆ ನಾನು ಎಲ್ಲಿಂದ ಒಂದು ಟನ್ ಕ್ರೇನ್ ತರಿಸೋದು ಅಂತ ಯೋಚನೆಗೆ ಇಳೀತಿದ್ದೆ. ಅಷ್ಟರಲ್ಲೇ ಅವಳು ಬೀಳದ ಹಾಗೆ ಪಕ್ಕದಲ್ಲೇ ಇದ್ದ ವಾಶಿಂಗ್ ಮೆಶೀನ್‌ಗೆ ಕೈ ಕೊಟ್ಟು ಮೇಲಕ್ಕೆ ಎದ್ದೇ ಬಿಟ್ಲು! ಆದರೆ, ಪಾಪ, ನಮ್ಮ ವಾಶಿಂಗ್ ಮೆಶೀನ್‌ಗೆ ಭಾರ ತಡೆದುಕೊಳ್ಳೋಕ್ಕೆ ಆಗದೆ, ಅವಳ ಬದಲು ತಾನು ಬಿದ್ದು, ಅದರ ಬಾಗಿಲು ಹೊರಕ್ಕೆ ತೆಕ್ಕೊಂಡ್ತು. ಇನ್ನೂ ಮೆಶಿನ್ ಓಡ್ತಾನೆ ಇದ್ದಿದ್ದರಿಂದ, ಅದರ ಒಳಗೆ ಸುತ್ತು ಹೊಡೀತಿದ್ದ ಎರಡು ಬೆಡ್‌ಶೀಟ್‌ಗಳು, ಟವಲ್‌ಗಳು, ನನ್ನ ಹೆಂಡತಿ ಸೀರೆ–ಹೀಗೆ ಏನೇನೋ ಬಟ್ಟೆಗಳು ಹೊರಗೆ ಬರೋದಿರಲಿ, ಎರಡು ಬಕೆಟ್‌ಗಳಷ್ಟು ಸೋಪ್ ನೀರೂ ಹೊರಕ್ಕೆ ಚೆಲ್ಲಿತು. ಸರಿ, ನನ್ನ ಹೆಂಡತಿ ನನ್ನ ಕಡೆ ನೋಡಿ, ಸಾರಿಸೋ ಬಟ್ಟೆ ಎಲ್ಲಿದೆ ಅಂತ ತೋರಿಸಿದ್ಲು. ಸಾರಿ–ಪಾರಿ ಎಲ್ಲಾ ಆದಮೇಲೆ, ಕರೀಮ ನಮ್ಮ ಡೈನಿಂಗ್ ಟೇಬಲ್ ಮೇಲೆ ಇಟ್ಟಿದ್ದ ಕ್ರಾಕರಿ ಸೆಟ್ ಮೇಲೆ ಗಮನ ಹರಿಸಿದ್ಲು. ಏನೇ ಶಾಲೀ, ಇದು ಅನ್ ಬ್ರೇಕಬಲ್ ಸೆಟ್ ಏನೇ? ಅಂತ ಒಂದು ಬೌಲ್‌ನ ಪರೀಕ್ಷೆ ಮಾಡ್ತೀನಿ ಅಂತ ಕೈನಲ್ಲಿ ಹಿಡಿದುಕೊಂಡ್ಲು. ನಮ್ಮ ಜೊತೇಗೇ ಇಪ್ಪತ್ತು ವರುಷಗಳಿಗೂ ಹೆಚ್ಚಾಗಿ ವಾಸ ಮಾಡಿದ್ದ ಆ ಬೌಲ್‌ಗೆ ನಮ್ಮ ಮೇಲೆ ಸ್ವಲ್ಪಾನೂ ಕರುಣೇನೆ ಬೇಡವೇ? ಅವಳ ಕೈನಿಂದ ಜಾರಿ, ಫುಟ್ಬಾಲ್ ತರಹ ನೆಲದ ಮೇಲೆ ಉರುಳಿಕೊಂಡು, ನಮ್ಮ ಬೆಡ್ ರೂಮ್‌ಗೆ ಪ್ರಯಾಣ ಮಾಡಿ. ಅಲ್ಲಿದ್ದ ನಮ್ಮ ಮಂಚಕ್ಕೆ ಡಿಕ್ಕಿ ಹೊಡೆದು, ಹತ್ತು ಚೂರುಗಳಾಯಿತು. ಇನ್ನೊಂದು ರೌಂಡ್ ಸಾರಿ–ಪಾರಿ ಆಯ್ತು.

(ಈ ವೃತ್ತಾಂತವನ್ನು ಇಲ್ಲಿಗೇ ನಿಲ್ಲಿಸ್ತೀನಿ. ನಿಮಗೂ ಓದೋದಕ್ಕೆ ಬೋರ್ ಆಗಬಹುದು. ಹಾಗಾಗಿ, ಕೊನೇಗೆ ನಮಗೆ ಆದ ಡ್ಯಾಮೇಜ್ ಲಿಸ್ಟ್‌ನ ಮಾತ್ರ ಕೆಳಗೆ ಕೊಡ್ತಾ ಇದೀನಿ. ಇಷ್ಟೆಲ್ಲಾ ಆಗಿದ್ದು ಅವಳು ನಮ್ಮ ಮನೆಯಲ್ಲಿ ಕಳೆದ ಎರಡು ಗಂಟೆ ಕಾಲದಲ್ಲಿ ಮಾತ್ರ.)

ನಮ್ಮ ಕಾರ್‌ನ ಬಂಪರ್ ಮತ್ತು ಡಿಕ್ಕಿ ಡೋರ್ ರಿಪೇರಿ; ಎರಡು ಪಪ್ಪಾಯ ಸಸಿಗಳು ಎರಡು ಪಾಟ್‌ಗಳ ನಾಶ; ಕಾರ್ಪೆಟ್ ಡ್ರೈ ಕ್ಲೀನಿಂಗ್ ಚಾರ್ಜು; ಕ್ರಾಕರಿ ಸೆಟ್ ಬದಲಾವಣೆ; ವಾಶಿಂಗ್ ಮೆಶಿನ್‌ನ ಡೋರ್ – ಗ್ಯಾಸ್ಕೆಟ್ ಬದಲಾವಣೆ, ನಾನು ಇನ್ನೂ ಸಿಮ್ ಬದಲಾಯಿಸಿಲ್ಲ ಅಂತ ಯಾರಿಗೋ ಫೋನ್ ಮಾಡ್ತೀನಿ ಅಂತ ನನ್ನ ಫೋನ್ ತೊಗೊಂಡು, ಕೆಳಗೆ ಬೀಳಿಸಿದ್ದಕ್ಕೆ ಅದರ ಕ್ಯಾಮೆರ ಮತ್ತು ಬ್ಯಾಟರಿ ಬದಲಾವಣೆ; ಊಟ ಆದ ಮೇಲೆ ಟ್ರೇ ಮೇಲೆ ನನ್ನ ಹೆಂಡತಿ ಐಸ್ ಕ್ರೀಮ್ ತಂದರೆ, ಅಯ್ಯೋ, ನಾನು ತರ್ತೀನಿ ಕಣೆ ಅಂತ ಅವಳ ಕೈನಿಂದ ಕಿತ್ಕೊಳ್ಳೋಕ್ಕೆ ಹೋಗಿ, ಮೂರು ಐಸ್ ಕ್ರೀಮ್ (ಗ್ಲಾಸ್‌ದು) ಬೌಲ್‌ಗಳು ಬಿದ್ದು ನಾಶವಾಗಿದ್ದು; ಬಾರೇ, ಒಂದು ಸೆಲ್ಫಿ ತೊಗೋಳೋಣಾ ಅಂತ ನಮ್ಮ ಮೂರು ಜನರನ್ನೂ ಒಟ್ಟಿಗೇ ನಿಲ್ಲಿಸಿ, ಫೋಕಸ್ ಮಾಡ್ತೀನಿ ಅಂತ ನಮ್ಮ ಶೋಕೇಸ್‌ಗೆ ಡ್ಯಾಶ್ ಕೊಟ್ಟು, ಅದರ ಒಂದು ಗ್ಲಾಸ್ ಕ್ರ್ಯಾಕ್ ಆಗಿದ್ದು; ಹೊತ್ತಾಯಿತು ಬರ್ತೀನಿ ಕಣೆ ಅಂತ ಅಲ್ಲೇ ಇದ್ದ ನನ್ನ ಕಾರ್ ಕೀಗಳನ್ನ ತೊಗೊಂಡು, ಕಾರ್ ತನಕ ಹೋಗಿ, ಅಯ್ಯೋ ಸಾರಿ ಕಣೇ ಅಂತ ಮತ್ತೆ ಒಳಗೆ ಬಂದು ಅವಳ ಕಾರ್ ಕೀ ತೊಗೊಂಡು ಅವಸರದಿಂದ ನನ್ನ ಹೆಂಡತಿ ಹೊಸಾ ಚಪ್ಪಲಿಗಳನ್ನ ಹಾಕ್ಕೊಂಡು ಹೋಗಿದ್ದು – ನಮ್ಮ ಕಾರಿನ ಕೀಗಳ ಜೊತೆಗೆ; ಕೊನೆಯದಾಗಿ, ಕಾರ್ ಸ್ಟಾರ್ಟ್ ಮಾಡಿ ರಿವರ್ಸ್ ಗೇರ್ ಹಾಕೋ ಬದಲು ಫಸ್ಟ್ ಗೇರ್ ಹಾಕಿ, ಮೊದಲೇ ವಾಲಿದ್ದ ನನ್ನ ಕಾರ್‌ನ ಇನ್ನಷ್ಟು ವಾಲಿಸಿ, ಬೈ, ಬೈ ಅಂತ ಹೋಗಿದ್ದು.

ಈಗ ನಾನೂ ನನ್ನ ಹೆಂಡತೀನೂ, ಏನಾದರೂ ನಮ್ಮ ಸರ್ಕಾರ ಹರಿಕೇನ್ ಭಾಗ್ಯ ಅಂತ ಯಾವ ರೀತಿಯಲ್ಲಾದರೂ ನಮಗೆ ಸಹಾಯ ಮಾಡುತ್ಯೇ? ಅಂತಾ ಕಾಯ್ತಾ ಕೂತಿದೀವಿ.

✤

# ''ಯಾಕ್-ಗೆ ಶೇವ್ ಯಾಕೆ?''

**- ವಾಣಿ ಸುರೇಶ್**

**ಯಾ**ಕ್ ಅಂದರೇನೂಂತ ಗೊತ್ತು. ಶೇವಿಂಗ್ ಅಂದರೇನೂಂತ ಅಂತೂ ಸರಿಯೇ ಸರಿ. ಆದರೆ ಯಾರು ತಾನೇ ಯಾಕಿ-ಗೆ ಶೇವ್ ಮಾಡ್ತಾರೆ?! ಅಷ್ಟಕ್ಕೂ ಅದು ಒಂದು ಕಡೆ ಹಾಗೇ ನಿಂತ್ಕೊಂಡು ಚೌರ ಮಾಡಿಸಿಕೊಳ್ಳತ್ತೇ? ಅಂಥಾ ಸಾಹಸಕ್ಕೆ ಕೈ ಹಾಕುವ ಆಸಾಮಿಗಳು ಎಂಥಾ ಧೈರ್ಯಸ್ಥರಾಗಿರಬೇಕಲ್ವೇ? ಅಥವಾ ಮೀರಿ ಹಾಗೊಮ್ಮೆ ಅಷ್ಟು ದೊಡ್ಡ ಪ್ರಾಣೀಗೆ ಚೌರ ಮಾಡಕ್ಕೆ ಹೋದರೂ ಅವರಿಗೆ ಅದೆಷ್ಟು ಶೇವಿಂಗ್ ಜೆಲ್ಲು, ಬಿಸಿ ನೀರು ಬೇಕಾಗಬಹುದು? ಅದೂ ಅಲ್ಲದೇ ಯಾಕ್-ಗಳಿರೋ ಮೈನಸ್ ಡಿಗ್ರಿಯ ಆ ಶೀತಪ್ರದೇಶಗಳಲ್ಲಿ ಆಪಾಟಿ ಬಿಸಿ ನೀರಿರಲಿ ಸದ್ಯ, ತಣ್ಣೀರನ್ನೂ ಒದಗಿಸಿ ಪೂರೈಸಕ್ಕಾಗುತ್ತೇ? ಇಲ್ಲಾ ಏನಾದ್ರೂ ಬ್ಯಾಟರಿ ಆಪರೇಟೆಡ್ ಎಲೆಕ್ಟ್ರಿಕ್ ಶೇವರಿಂದ ಮಾಡ್ತಾರೋ? ಹಾಗೆ ಮಾಡಿದರೆ ಯಾವ ಕಾಲಕ್ಕೆ ತಾನೇ ಕೆರೆದು ಮುಗಿಸಕ್ಕೆ ಸಾಧ್ಯ? - ಅಂತೆಲ್ಲಾ ಪುಂಖಾನುಪುಂಖವಾಗಿ ಪ್ರಶ್ನೆಗಳು ನಿಮ್ಮ ಮನಸ್ಸಿನಲ್ಲಿ, ಬಡಪಾಯಿ ಗೆಸ್ಟ್ ಎದುರಿಗೆ ಕೂತಿರೋ ಅರ್ನಾಬ್ ಗೋಸ್ವಾಮಿಯ ಮನಸ್ಸಲ್ಲಿ ಏಳಕ್ಕಿಂತಲೂ ಹೆಚ್ಚಾಗಿ, ಏಳುಲ್ವೇ? ಆದರೆ ನಿಮ್ಮೆಲ್ಲಾ ಎಣಿಕೆಗಳೂ ತಪ್ಪೇ ಕಣ್ರೀ!

ಯಾಕೆ ಗೊತ್ತಾ? ''ಶೇವಿಂಗ್ ದ ಯಾಕ್'' ಅನ್ನೋದೊಂದು ಇಲ್ಲಿ ಅಮೇರಿಕನ್ ಇಂಗ್ಲಿಷಿನ ಈಡಿಯಮ್ ಅಂದರೆ ಐ ಮೀನ್ - ನಮ್ಮ ಶುದ್ಧ ಕನ್ನಡದಲ್ಲಿ - ಒಂದು ಪದಪುಂಜ, ಅಷ್ಟೇ! ಆದರೆ ನನಗೆ ತಿಳಿದ್ದಾಗೆ ನಮ್ಮ ಭಾಷೆಗಳಲ್ಲಿ ಈ ಈಡಿಯಮ್ಮಿರಲಿ ಯಾವ ಭಾಷಾ ಶಾಸ್ತ್ರಜ್ಞರು, ಕಾವ್ಯರೂಪಕಾಲಂಕಾರ ಪರಿಣತರಿಗೂ ಈ ಯಾಕ್-ನ ಸಮೃದ್ಧ ಕೂದಲಿನ ಮೇಲೆ ಅದ್ಯಾಕೋ ಅಷ್ಟಾಗಿ ಕಣ್ಣು ಬಿದ್ದ ಹಾಗನ್ನಿಸುಲ್ಲ. ನಮ್ಮ ಭಾರತವರ್ಷದ ದೇವಸ್ಥಾನಗಳಲ್ಲಿ, ಪೌರಾಣಿಕ ಸಿನೆಮಾ, ನಾಟಕಗಳ ರಾಜಮಹಾರಾಜರ ಆಸ್ಥಾನಗಳಲ್ಲಿ ಗಾಳಿ ಬೀಸಲು ಉಪಯೋಗಿಸುವ ಚಾಮರ ಹಾಗೂ ಹಿಂದೆಲ್ಲಾ ಮೋಟು ಜಡೆಯುಳ್ಳ ಹೆಣ್ಣುಮಕ್ಕಳ ಅತ್ಯಂತ ಮೆಚ್ಚಿನ ಪ್ರಸಾಧನವಾಗಿರ್ತಿದ್ದ ಚೌರಿ ತಯಾರಕರ - ವಿನಾ!

ಹೋಗಲಿ ಬಿಡಿ, ಈಗ ನಮ್ಮೂರಲ್ಲಿ ಬೆಚ್ಚಗೆ ಮನೆಯಲ್ಲೇ ಕೂತ್ಕೊಂಡು, ಹೇಗೆ ಯಾಕ್-ಗೆ ಶೇವ್ ಮಾಡಬಹುದು ಅಂತ ತೋರಿಸ್ತೀನಿ ಬನ್ನಿ. ನಮಗೆ ಸರ್ವೇಸಾಧಾರಣವಾಗಿ ಸಿಗೋ ಸಿಂಪಲ್ಲಾದ ಉದಾಹರಣೆಯನ್ನೇ ತೊಗೊಂಡರಾಯ್ತು.

ಮಸಲಾ, ಯಾಕ್-ಗೆ ನೀವು ಯಾವಾಗ ಬೇಕಿದ್ದರೂ ಚೌರ ಮಾಡಬಹುದಾದರೂ, ಅದಕ್ಕೆ ಪ್ರಶಸ್ತವಾದ ಮುಹೂರ್ತ ಮಾತ್ರಾ ಯಾವುದಾದರೂ ಪಬ್ಲಿಕ್ ರಜಾದಿನಗಳು ಅಥವಾ ಭಾನುವಾರಗಳು ಅಂತ ನನ್ನ ಅಭಿಪ್ರಾಯ.

ಈಗ ನೋಡಿ, ಅವತ್ತು ದಿನಗಟ್ಟಲೆ ಚಚ್ಚಿದ ಮಳೆ ನಿಂತು ಹಿತವಾದ ಬಿಸಿಲು ಶುರುವಾದ ಮೂರನೇ ದಿನ ಅಂತಿಟ್ಕೊಳ್ಳಿ.

ಬೆಳಗ್ಗೆಯಿಂದ ನಿಮ್ಮ ಮನೆಯಾಕೆ ಅಪರೂಪಕ್ಕೆ ಒಂದು ಚೂರೂ ಸಿಡುಕದೇ, ನೀವು ಕೇಳಿದಷ್ಟು ಸಲ ಸ್ಟ್ರಾಂಗ್ ಫಿಲ್ಟರಿನ ಕಾಫಿ ಮಾಡಿಕೊಟ್ಟಿದ್ದಲ್ಲದೇ, ಆಮೇಲೆ ಹದವಾದ




ಖಾರವಾಗಿದ್ದ ಗಟ್ಟಿ ಪುದೀನಾಚಟ್ನಿ ಜೊತೆಯಲ್ಲಿ, ಕೆಂಪು ಚಟ್ನಿ ಹಾಕಿದ ಬಿಸಿಬಿಸಿಯಾದ ಗರಿಗರೀ ಬೆಣ್ಣೆ ಮಸಾಲೆ ದೋಸೇನೂ ಮಾಡಿಕೊಟ್ಟು, ಮೇಲೆ ಮತ್ತಿನ್ನೊಂದು ಡೋಸ್ ಸ್ಟ್ರಾಂಗ್ ಕಾಫೀನೂ ಕೊಟ್ಬಿಟ್ಟು, ಸಂಜೆಯ ತನಕ ಬರಲ್ಲಾಂತ ಹೇಳಿ ಅವರ ಫ್ರೆಂಡ್ ಜೊತೆ ಮಂತ್ರಿ ಮಾಲ್ ಸುತ್ತಕ್ಕೆ ಹೋದರೂಂತ ಇಟ್ಕೊಳ್ಳಿ. ಮಗ ಕಾಲೇಜ್ ಟೂರಿಂದ ಇನ್ನೂ ಬಂದಿಲ್ಲ, ಮಗಳಂತೂ ಸಂಜೆ ಇರೋ ಅವಳ ಬೆಸ್ಟ್ ಫ್ರೆಂಡ್ ಮದುವೆಯ ಮೆಹೆಂದಿ ಪಾರ್ಟಿ ನೆಪ ಹಾಕೊಂಡು ಬೆಳಗಾಗೆದ್ದು ಊರಿಗೆ ಮುಂಚೆ ಹೋಗಿದ್ದಾಳೆ...

ಭಾರವಾದ ಹೊಟ್ಟೆ, ಮನೆಯಲ್ಲಿ ಪ್ರಶಾಂತ ವಾತಾವರಣ ಟಿ.ವಿ. ಹಾಕಕ್ಕೆ ಕರೆಂಟಿಲ್ಲ, ರಜಾ ದಿನವಾದ್ದರಿಂದ ಅವತ್ತು ಪೇಪರೂ ಇಲ್ಲ, ಒಟ್ನಲ್ಲಿ ಫುಡ್ ಕೋಮಾದಲ್ಲಿ ಮೂಗಿನವರೆಗೂ ಮುಳುಗಿರೋ ನಿಮ್ಮ ಮನಸ್ಸೂ ಸಹಾ ಆನಂದಮಯ ಕೋಶದಲ್ಲಿ ವಿಹರಿಸೋದಕ್ಕೆ ಹವಣಿಸ್ತಿದೆ... ಸೊ, ಅಲ್ಲೇ ಸೋಫಾ ಮೇಲೆ ಒರಗಿ, ಹೇಳೋರು ಕೇಳೋರು ಇಲ್ಲದ್ರಿಂದ ನಿಮಗೆ ಬೇಕಾದ ಹಾಗೆ ದಿಂಬುಗಳನ್ನು ಮಡಿಚಿಟ್ಕೊಂಡು ಹಾಗೇ ಸುಷುಪ್ತಿಗೆ ಜಾರಿ (ಅಂದರೆ ನಮ್ಮ ಕಸ್ತೂರಿ ಕನ್ನಡದಲ್ಲಿ – ತೂಕಡಿಸಿ) ಒಂದು ಸಣ್ಣ ನಿದ್ದೆ ತೆಗೀತೀರಿ... ಹೊರಗಡೆ ರಸ್ತೇಲಿ ಕ್ರಿಕೆಟ್ ಆಡ್ತಿದ್ದ ಪಕ್ಕದ ಫ್ಲ್ಯಾಟಿನ ಮಕ್ಕಳ್ಯಾರೋ ಗಟ್ಟಿಯಾಗಿ ಹೋ ಅಂತ ಕಿರಿಚಿದ ಶಬ್ದಕ್ಕೆ ಎಚ್ಚರ ಆಗತ್ತೆ. ಮನೆಯ ನಿಶ್ಯಬ್ದ, ಹದವಾದ ನಿದ್ದೆಯ ನಂತರ ಹಿತ ಅನ್ನಿಸತ್ತೆ. ಅಣ್ಣಾವರ ಕಾಲದ – ''ನಾನೇ ರಾಜಕುಮಾರ ಕನ್ನಡ ತಾಯಿಯ ಪ್ರೇಮದ ಕುವರ'' ಅನ್ನೋ ಹಾಡು ಬೇರೆ ಜ್ಞಾಪಕ ಬಂದು ಗುನುಗಕ್ಕೆ ಶುರು ಮಾಡ್ತೀರಿ..

ಆಗ ಇದ್ದಕ್ಕಿದ್ದ ಹಾಗೆ ಪ್ರಪಂಚದಲ್ಲಿರೋ ಪುರುಸೊತ್ತೆಲ್ಲಾ ನಿಮ್ಮನ್ನ ಆವರಿಸಿಕೊಂಡು ಹಾಗಾಗಿ ಎಲ್ಲಿಲ್ಲದ ಚೈತನ್ಯ ಉಕ್ಕಿ ಹರಿಯಕ್ಕೆ ಪ್ರಾರಂಭವಾಗತ್ತೆ. ಎಷ್ಟೋ ದಿನಗಳಿಂದ ಮಾಡ್ಬೇಕೂಂತಿದ್ದ ಕೆಲಸಗಳ ಲಿಸ್ಟಿಗೊಂದು ಗತ ಕಾಣಿಸಿಬಿಡ್ತೀನಿ ಇವತ್ತು ಅಂತಂದುಕೊಳ್ತೀರಿ! ಹೌದು, ಮಾಲಿ ಹನುಮಂತಪ್ಪ ಹದಿನೈದು ದಿನ ರಜ ಹಾಕಿ ಊರಿಗೆ ಹೋಗಿರೋದ್ರಿಂದ

ಲಾನ್ ಮೇಲೆ ವಿಕಾರವಾಗಿ ಎಲ್ಲೆಲ್ಲೂ ಸೊಂಪಾಗಿ ಬೆಳೆದಿರೋ ಕಳೆಗಳನ್ನ ಕಿತ್ತು ಹಾಕೋ ಕೆಲಸದಿಂದಲೇ ಯಾಕೆ ಶುರುಮಾಡಬಾರದೂನ್ನಿಸತ್ತೆ. ನೆಲ ಬೇರೆ ಹೀಗೆ ಒಂದೇ ಸಮ ಸುರಿದ ಈ ಮಳೆಯಿಂದ ಮೆದುವಾಗಿದೆ, ಕಷ್ಟವೂ ಆಗಲ್ಲ, ವ್ಯಾಯಾಮವೂ ಆಗತ್ತೆ, ಸುಮೀಗೂ ಖುಷಿಯಾಗುತ್ತೆ, ಅಂತನ್ಕೊತೀರಾ. ಆದರೆ ಶುರುಮಾಡಕ್ಕೆ ಮುಂಚೆ ಒಂದ್ಲೋಟ ಬಿಸಿ ಬಿಸಿಯಾಗಿ ಟೀ ಮಾಡ್ಕೊಂಡ್ರೆ ಚೆನ್ನ ಅಂತನ್ನಿಸಿ ಅಡಿಗೆ ಮನೆಗೆ ಹೋಗ್ತೀರಾ. ಒಲೆ ಮೇಲೆ ನೀರಿಟ್ಟು ಟೀ ಪುಡಿಯ ಡಬ್ಬ ತೆಗೆದಾಗ ಅದು ತಳ ಮುಟ್ಟಿರೋದು ಕಾಣಿಸುತ್ತೆ. ಬೇರೆ ಟೀ ಪ್ಯಾಕೆಟ್ ಎಲ್ಲಿಟ್ಟಿರಬಹುದೂನ್ತ ಸುತ್ತಮುತ್ತ ಕಣ್ಣಾಡಿಸ್ತೀರಾ. ಆಗಾ, ಹೋದವಾರ ತಾನೇ ತಂದಿಟ್ಟಿದ್ದ ಹೊಸ ಹಲ್ದಿರಾಮ್ ಆಲೂ ಭುಜಿಯಾದ ಹಿಂದಿಟ್ಟಿದ್ದ ಟೀ ಪ್ಯಾಕೆಟ್ ಕಾಣುತ್ತೆ. ಟೀ ಜೊತೆಗಿನ ಆಲೂ ಭುಜಿಯಾದ ಮಜವೇ ಬೇರೆ ಅಂತನ್ನಿಸಿ ಅದನ್ನ ಓಪನ್ ಮಾಡಕ್ಕೆ ನೋಡ್ತೀರಾ. ಅಯ್ಯೋ ಹಾಳಾದ್ದು ಪ್ಯಾಕೆಟ್ಟು, ಬರೀ ಕೈಯ್ಯಲ್ಲಿ ಎಷ್ಟು ಎಳೆದರೂ ಹರಿಯಲ್ಲ ಅನ್ನುತ್ತೆ. ಸರಿ ಅದನ್ನ ಓಪನ್ ಮಾಡಕ್ಕೆ ಅಡಿಗೆಮನೆಯಲ್ಲಿ ಕತ್ತರಿ ಹುಡುಕಕ್ಕೆ ಶುರು ಮಾಡ್ತೀರಾ. ಅದು ಸಿಗೋ ಹೊತ್ತಿಗೆ ಒಲೆ ಮೇಲಿನ ನೀರು ಕುದ್ದು ಆವಿಯಾಗಿರತ್ತೆ! ಥತ್ತೇರಿ ಅಂತ ಬೈಕೊಂಡು ಪಾತ್ರೆಗೆ ಮತ್ತೊಂದಿಷ್ಟು ನೀರು, ಹಾಲು ಸುರೀತೀರಿ. ಕೊನೆಗೊಮ್ಮೆ ಟೀ ಪ್ಯಾಕೆಟ್ಟನ್ನೂ ಓಪನ್ ಮಾಡಿ, ಅಂತೂ ಇಂತೂ ಟೀ ಮಾಡಿ, ಮಗ್ಗಿಗೆ ಬಗ್ಗಿಸಿಕೊಂಡು ಭುಜಿಯಾ ಕುರುಕ್ತಾ ಹೊರಟಾಗ, ಅಲ್ಲೇ ಡೈನಿಂಗ್ ಟೇಬಲ್ ಹತ್ತಿರ ಇದ್ದ ದೊಡ್ಡ ಕಂಚಿನ ಗಣೇಶನ ವಿಗ್ರಹದ ಕೆಳಗೆ ನಿಮ್ ಹೆಂಡತಿ ಹಿಂದಿನ ದಿನ ಸಂಜೆ ಬಂತೂಂತ ಹೇಳ್ತಿದ್ದ ಮುಖ್ಯವಾದ ಕಾಗದ ಪತ್ರಗಳಿದ್ದ ಕೊರಿಯರನ್ನ ಇಟ್ಟಿದ್ದು ಕಾಣತ್ತೆ. ಅದನ್ನ ಇಲ್ಲೇ ಬಿಟ್ಟರೆ ಇನ್ನು ನಾಳೆ ಆಫೀಸಿಗೆ ಹೊರಟಾಗ ಮರೆತರೆ ಸುಮ್ಮನೆ ಫಜೀತಿಯಾಗಬಹುದು ಅಂತ ನಿಮಗನ್ನಿಸಿ, ಒಂದು ನಿಮಿಷ ಅದನ್ನ ಬೆಡ್ ರೂಮಲ್ಲಿರೋ ನಿಮ್ಮ ಬ್ರೀಫ್ ಕೇಸ್ಗೆ ಹಾಕಿಬಿಡೋಣಾಂತ ತೊಗೋತೀರಾ. ರೂಮಿಗೆ ಹೋಗಿ ಅದನ್ನ ಭದ್ರವಾಗಿ ಬ್ರೀಫ್ ಕೇಸಲ್ಲಿಟ್ಟ ಮೇಲೆ, ಕಳೆ ಕೀಳಬೇಕೂಂತ ಹೊರಟಿದ್ದು ಜ್ಞಾಪಕಕ್ಕೆ ಬಂದು ಆಚೆ ಬರ್ತೀರಾ. ಅಲ್ಲೇ ನಿಲ್ಲಿಸಿದ್ದ ಹದಿನೈದು ದಿನದಿಂದ ತೊಳೆಯದ ಕಾರು ಕೊಳೆಕೊಳೆಯಾಗಿ ಕಾಣ್ಸತ್ತೆ. ಅಲ್ಲೇ ಪಕ್ಕದಲ್ಲಿದ್ದ ತೋಟದ ನಲ್ಲಿ ತಿರುಗಿಸಿ ಹಾಗೇ ಕಾರನ್ನೂ ವಾಶ್ ಮಾಡ್ಬಿಟ್ಟರಾಯ್ತೂಂತನ್ಕೊತೀರಾ. ಮೊದಲು ಕಾರೋ ಲಾನೋ? – ಅಂತ ಡಿಸೈಡ್ಮಾಡ್ತಿರುವಾಗ, ಹಾಗೇ ಕಾಂಪೌಂಡ್ ಮೇಲೆ ಕೆಟ್ಟಕೆಟ್ಟದಾಗಿ ಬೆಳೆದಿರೋ ಬೋಗನ್ವಿಲ್ಲಾನ್ನೂ ಯಾಕೆ ಒಂದಿಷ್ಟು ಕತ್ತರಿಸಿ ಬಿಸಾಕಬಾರದು? ಮೊನ್ನೆ ತಾನೇ ಕಾರ್ಪೊರೇಟ್ ಯೋಗ ವರ್ಕ್ ಶಾಪಲ್ಲಿ ಅವರು ಹೇಳಿರಲಿಲ್ಲವೇ – ''ಮನೆಯ ಕೈತೋಟದ ಬೇಲಿ, ಗಿಡ ಮುಂತಾದವುಗಳನ್ನು ಕತ್ತರಿಸೋದೂ ಒಂದು ರೀತಿಯ ಚೈತನ್ಯದಾಯಕ ಎಕ್ಸರ್ಸೈಸು. ಮರುದಿನ ಆಫೀಸಲ್ಲಿ ಕೆಲಸ ಮಾಡುವಾಗ ಅದು ನಿಮಗೆ ಬೇಡದೀದ್ದನ್ನ ಡಿಲೀಟ್ ಮಾಡೊಕ್ಕೆ ಹೊಸ ಉತ್ಸಾಹ ಬರಿಸುತ್ತೆ'' – ಅಂತಂದಿದ್ದು ಜ್ಞಾಪಕಕ್ಕೆ ಬರತ್ತೆ. ಸರಿ ಮತ್ತೆ ಮನೆ ಒಳಗೆ ಹೋಗ್ತೀರಾ – ಗಿಡ ಕತ್ತರಿಸೋ ಕತ್ತರೀ ತರಕ್ಕೆ. ಅದು ನಿಮಗೆ ಸಿಗುವಷ್ಟರಲ್ಲಿ, ನೀವು ಎಷ್ಟೋ ದಿನದಿಂದ ಹುಡುಕ್ತಿದ್ದ ಪುಟಾಣಿ ಟಾರ್ಚು, ನಿಮ್ಮ ಮಗ ಕಳೆದುಹಾಕಿದ್ದ ಅಂತ ಭಾವಿಸಿದ್ದ ಸ್ಕೂಟರ್ನ ಡೂಪ್ಲಿಕೇಟ್ ಕೀ ಇದ್ದಿದ್ದ ಹಳೇ ಕೀ ಬಂಚು, ತುಂಬಾ ದಿನಗಳಿಂದ ಯಾಕೋ ಕಾಣೆಯಾಗಿದ್ದು ಯಾರೋ ಪಾಪಿಗಳೂ ಮುದುರಿ ಮೂಟೆಕಟ್ಟಿ ಬಿಸಾಕಿದ್ದ ನಿಮ್ಮಿಷ್ಟದ ಆದರೆ ನಿಮ್ಮ ಹೆಂಡತಿಗೆ ಕಂಡರಾಗದಿದ್ದ ಆ ಗಿಣಿ ಹಸಿರು ಬಣ್ಣದ ನಿಮ್ಮ ಟೀ ಶರ್ಟು,

ಅಲ್ಲದೇ ಒಂದು ಹಳೇ ಕರೀ ಸ್ಕ್ರೂ ಡ್ರೈವರ್ರು ಸಹಾ ಸಿಗತ್ವೆ! ಅದಷ್ಟನ್ನೂ ಅದರದರ ಜಾಗಕ್ಕೆ ಸೇರಿಸೋದು ನಿಮ್ಮ ಆದ್ಯ ಕರ್ತವ್ಯವಾಗುತ್ತೆ. ಅಷ್ಟೊತ್ತಿಗೆ ಕರೆಂಟು ಬಂದಿದ್ರಿಂದ ಪಳ್ ಅಂತ ಮಿಂಚು ಹೊಡೆದ ಹಾಗೆ ದೀಪ ಹತ್ತಿಕೊಳ್ಳುತ್ತೆ. ಹಾಗೇ – ''ಓ ದೇವರೇ! ನಾಳೇನೇ ಸೋಮವಾರ, ಕೆ.ಇ.ಬಿ. ಬಿಲ್ ಕಟ್ಟೋಕ್ಕೆ ಕೊನೆ ದಿನ!'' – ಅಂತಲೂ ಹೊಳೆಯುತ್ತೆ. ತಕ್ಷಣ ಚೆಕ್ ಬರೆದಿಡದಿದ್ದರೆ ಅಷ್ಟೇ, ಸುಮ್ಮನೆ ತರಲೆ – ಅಂತ ಜ್ಞಾನೋದಯವಾಗಿ ಬ್ರೀಫ್ಕೇಸಲ್ಲಿರೋ ಚೆಕ್ ಬುಕ್ ತೊಗೊಳ್ಳಕ್ಕೆ ಮತ್ತೆ ರೂಮಿನ ಕಡೆ ಹೆಜ್ಜೆ ಹಾಕ್ತೀರಾ. ಆಗ ಥಟ್ ಅಂತ ಜ್ಞಾಪಕಕ್ಕೆ ಬರತ್ತೆ – ನಿನ್ನೆ ಶನಿವಾರ ಸಂಜೆ ದಿನಸಿ ಅಂಗಡಿಯೋನಿಗೆ ಚೆಕ್ ಬರ್ಕೊಟ್ಟ ತಕ್ಷಣ ಚೆಕ್ ಬುಕ್ಕನ್ನ ಕಾರಿನ ಗ್ಲೋವ್ ಕಂಪಾರ್ಟ್ಮೆಂಟಲ್ಲೇ ಇಟ್ಟು ಮರೆತಿರೋದು. ಸರಿ, ಮತ್ತೆ ಬೀಗದ ಕೈ ಗೊಂಚಲುಗಳನ್ನ ನೇತು ಹಾಕಿರೋ ಕಡೆ ಹೋಗ್ತಿರಾ. ಕಾರಿನ ಕೀ ತೊಗೊಂಡು ಹೊರಗೆ ಹೋಗಿ ಇನ್ನೇನು ಅದರ ಬಾಗಿಲು ಅನ್ ಲಾಕ್ ಮಾಡ್ಬೇಕೂ ಅನ್ನುವಾಗ ಸೊಂಪಾಗಿ ಅಷ್ಟೆತ್ತರ ಬೆಳೆದು ನಿಂತಿದ್ದ ಕಳೆಗಳೇ ಹೆಚ್ಚಾಗಿದ್ದ ಲಾನ್ ಕಣ್ಣಿಗೆ ಬೀಳತ್ತೆ. ಹಾಗೇ, ಎಲ್ಲಾದಕ್ಕಿಂತ ಮೊದಲು ಕಳೆ ಕೀಳಬೇಕೂಂತ ಹೊರಟಿದ್ದೂ ಜ್ಞಾಪಕಕ್ಕೆ ಬರುತ್ತೆ... ಹೌದಲ್ಲಾ ಟೀ ಕುಡಿದ ತಕ್ಷಣ ಮಾಡಬೇಕಾಗಿದ್ದ ಕೆಲಸವಲ್ಲವೇ ಇದು ಅಂತ ಹೊಳೆಯುತ್ತೆ. ತಕ್ಷಣ ''ಅರೆ ಟೀ ಎಲ್ಲಿ? ಕುಡೀಲೇ ಇಲ್ಲವಲ್ಲ'' ಅಂತ ನೆನಪಾಗಿ ಮತ್ತೆ ಅಡಿಗೆಮನೆಗೆ ಹೋಗ್ತೀರಾ. ಆದರೆ ಅಲ್ಲೆಲ್ಲಿದೆ ಅದು? ಕೊರಿಯರ್ರನ್ನ ಬ್ರೀಫ್‌ಕೇಸಲ್ಲಿಡಕ್ಕೆ ಹೋದಾಗ ಕೈಯ್ಯಲ್ಲಿದ್ದ ಮಗ್ಗನ್ನ ನಿಮ್ಮ ಮಂಚದ ಪಕ್ಕದ ಪುಟ್ಟ ಟೇಬಲ್ ಮೇಲಿಡಲಿಲ್ಲವೇ? ಅಯ್ಯೋ ದೇವಾ! ಮತ್ತೆ ರೂಮಿಗೆ ಹೋಗಿ ನೋಡಿದರೆ ಕಣ್ಣಿಗೆ ಬೀಳುತ್ತೆ – ಅಲ್ಲಿ ಆರಿ ಅಕ್ಷತೆಯಾಗಿ, ಕೆನೆ ಕಟ್ಕೊಂಡು ಕೂತಿದ್ದ ಅರ್ಧ ಕಪ್ಪಷ್ಟಿದ್ದ ಟೀ! ಛೆ ಅಂತ ಅದನ್ನು ಕುಡಿಯಕ್ಕೆ ಮನಸ್ಸಾಗದೇ ತಂದು ಸಿಂಕಿಗೆ ಸುರಿದು ಬರ್ತೀರಾ. ಇನ್ನೊಂದ್ಸಲ ಟೀ ಮಾಡ್ಕೊಳ್ಳೋವಷ್ಟು ತಾಳ್ಮೆ ಇರಲ್ಲ. ಇದ್ದಕ್ಕಿದ್ದ ಹಾಗೇ, ಯಾಕೋ ಎಷ್ಟೋ ಕೆಲಸ ಮಾಡಿ ತೀರಾ ಸುಸ್ತಾದ ಹಾಗಾಗಿ ಹುಶ್ ಸಾಕಾಯ್ತಪ್ಪಾ ಅನ್ನಿಸುತ್ತೆ... ಮತ್ತೆ ಸೋಫಾ ಹತ್ತಿರ ಹೋಗಿ ಅಡ್ಡಾದಿಡ್ಡಿಯಾಗಿ ಬಿದ್ದಿದ್ದ ದಿಂಬುಗಳನ್ನ ಇನ್ನೊಮ್ಮೆ ಇಷ್ಟ ಬಂದ ಹಾಗೆ ಮಡಿಚಿಟ್ಕೊಂಡು, ಇನ್ನೂ ಟೈಮಾಗಿಲ್ಲವಲ್ಲ, ಒಂದು ಘಳಿಗೆ ರೆಸ್ಟ್ ತೊಗೊಂಡು ಆಮೇಲೆ ಎಲ್ಲಾ ಕೆಲಸಾನೂ ಒಂದು ಕಡೆಯಿಂದ ಶುರು ಮಾಡಿದ್ರಾಯ್ತೂಂತ ಹಾಗೇ ಸೋಫಾ ಮೇಲೆ ಕಾಲು ಚಾಚ್ತೀರಾ.......

.... ನೋಡಿದ್ರಾ, ಅಂತೂ ಶೇವಿಂಗ್ ಜೆಲ್ಲು, ನೀರು – ನಿಡಿ ಏನೂ ಇಲ್ಲದೇನೇ ನೀವೂ ''ಯಾಕಿಗೆ ಶೇವ್'' ಮಾಡೇಬಿಟ್ರಲ್ಲಾ ಈಗ! ಹೇಗೆ ನಾವೆಲ್ರೂ ಒಂದಲ್ಲ ಒಂದು ರೀತೀಲಿ ಯಾಕ್ ಚೌರದ ಎಕ್ಸ್‌ಪರ್ಟ್‌ಗಳೇ ಅಂತ ಗೊತ್ತಾಯ್ತಲ್ಲ?.....

✤

---

## ಪುಟ್ಟ ಕತೆ

ಒಬ್ಬ ಬಡ ಹುಡುಗ ರಸ್ತೆಯಲ್ಲಿ ಬಣ್ಣ ಹಚ್ಚುವ ಪುಸ್ತಕ ಮಾರುತ್ತಿದ್ದ. ಶ್ರೀಮಂತನ ಮಗ ತನಗೆ ಆ ಪುಸ್ತಕ ಕೊಡಿಸು ಎಂದು ಅಪ್ಪನಿಗೆ ದುಂಬಾಲು ಬಿದ್ದ.

ತಂದೆ ಕೊಡಿಸಲಿಲ್ಲ.

ಆ ಇಬ್ಬರು ಮಕ್ಕಳೂ ಆ ರಾತ್ರಿ ಹಸಿದ ಹೊಟ್ಟೆಯಲ್ಲಿ ಮಲಗಿದರು.

# ದೆಹಲಿಯಲ್ಲಿ ದಾರಿ ತಪ್ಪಿದಾಗ...

**- ಗಣೇಶ್ ಹೆಗ್ಗಡೆ**

**ಕಾಮನ್ ರೂಮ್ ಕಹಾನಿ!**

**ಎಂ**ದಿನಂತೆ ಕಾಮನ್ ರೂಮಿನಲ್ಲಿ ರಾಯರ ಆಗಮನಕ್ಕಾಗಿ ಕಾದು ಕುಳಿತಿದ್ದ ನಾವು, ಅವರ ಬದಲಿಗೆ ಯಾರೊ ಗಡ್ಡಧಾರಿ ವ್ಯಕ್ತಿಯೊಬ್ಬರು, ಕರೀ ದಟ್ಟಿ ಪಂಚೆ, ಕರೀ ನಿಲುವಂಗಿ, ಕರೀ ಶಲ್ಯ ಹೊದ್ದು ಸಭೆಯೊಳಗೆ ಬಂದಿದ್ದನ್ನು ಕಂಡು ಅಚ್ಚರಿಗೊಂಡು ಎದ್ದು ನಿಂತು ಭಕ್ತಿಯಿಂದ ''ಸ್ವಾಮಿಯೇ ಶರಣಂ'' ಎಂದೆವು ಒಕ್ಕೊರಲಿನಿಂದ.

ಯಾವುದಕ್ಕೂ ಪ್ರತಿಕ್ರಿಯಿಸದ ಆ ವ್ಯಕ್ತಿ 'ಸ್ವಾಮಿಯೇ ಮರಣಂ' ಎನ್ನುತ್ತಾ, ಖಾಲಿಯಿದ್ದ ಅಧ್ಯಕ್ಷರ ಕುರ್ಚಿಯಲ್ಲಿ ಧೊಪ್ಪೆಂದು ಕುಕ್ಕರಿಸಿಕೊಂಡಿದ್ದನ್ನು ಕಂಡು ಬೆಚ್ಚಿಬಿದ್ದ ನಾನು ''ತಾವ್ಯಾರು ಮಹಾಸ್ವಾಮಿ?'' ಎಂದೆ ಅನುಮಾನದಿಂದ.

''ವಿಷ್ ಯು ಆಲ್ ಎ ಹ್ಯಾಪಿ ನ್ಯೂ ಇಯರ್'' ಅಧ್ಯಕ್ಷ ಪೀಠದಿಂದ ಹೊರಬಿದ್ದ ದನಿ ಬೇರಾರದ್ದೂ ಆಗಿರದೆ ನಮ್ಮ ರಾಯರದ್ದಾಗಿದ್ದುದು ಆತಂಕಕ್ಕೀಡು ಮಾಡಿ,

''ಸರ್, ಇದೇನಿದು ಆಶ್ಚರ್ಯ? ನಮ್ಮ ಕಣ್ಣುಗಳನ್ನು ನಾವೇ ನಂಬಲಾಗುತ್ತಿಲ್ಲವಲ್ಲ, ತಾವು ಬಿಳೀ ಖಾದಿ ಬಟ್ಟೆ ಬಿಟ್ಟು, ಬೇರಾವುದೇ ಬಣ್ಣದ್ದು ತೊಡುವವರಲ್ಲ, ದೇವರ ಅಸ್ತಿತ್ವದಲ್ಲೇ ನಂಬಿಕೆಯಿರದ ನೀವು ದಿಢೀರನೆ ಇಂದು ಅಯ್ಯಪ್ಪ ಸ್ವಾಮಿ ದರ್ಶನಕ್ಕೆ ಶಬರಿ ಮಲೆಗೆ ಹೊ...ರ...ಟಿ...ರು...ವು..ದು...''

''ಸ್ಟ್ಯಾಪಿಟ್'' ಎಂದು ಸಭೆಯನ್ನುದ್ದೇಶಿಸಿ ಗುಡುಗಿದ ಅವರು ನಂತರ ''ಸ್ಸಾರೀ'' ಎಂದು, ತಮ್ಮ ಬಟ್ಟೆಯತ್ತ ನೋಡಿಕೊಳ್ಳುತ್ತಾ, ಇದು ನಿಮ್ಮಾಣೆ, ಬಿಳೀ ಒರಿಜನಲ್ ಖಾದಿ ಬಟ್ಟೆ. ದಿಲ್ಲಿಯ ಧೂಳು ಹಾಗೂ ಹೊಗೆ ಮಿಶ್ರಿತ ವಾತಾವರಣದಿಂದ ಹೀಗಾಗಿರುವುದು ನಿಜಕ್ಕೂ ಒಂದು ದುರ್ದೈವ. ಬಿಳೀ ಬಣ್ಣ ಬರಕ್ಕೆ ಇನ್ನೂ ಐದಾರು ತಿಂಗಳು ಬೇಕು ಎಂದಿದ್ದಾನೆ ನಮ್ಮ ಡ್ರೈ ಕ್ಲೀನರ್.

''ಸಾರಿ ಸರ್, ಅಂದ್ಹಾಗೆ ತಾವು ತಮ್ಮ ಸೋದರಳಿಯನ ಮನೆಯ ಗೃಹಪ್ರವೇಶಕ್ಕೆಂದು ದಿಲ್ಲಿಗೆ ಹೋಗಿದ್ದರಲ್ಲವೆ? ಯಾವಾಗ ವಾಪಸ್ಸು ಬಂದ್ರಿ'' ಎಂದೆ.

''ನಿನ್ನೆ ಬೆಳಿಗ್ಗೆ'' ಎಂದ ಅವರು ತಮ್ಮ ಮುಂದಿರಿಸಿದ್ದ ಪ್ಲೇಟಿನಿಂದ ಎರಡು ಖಾರಾ ಗೋಡಂಬಿಯನ್ನು ಬಾಯಿಗೆಸೆದುಕೊಂಡು, ಶುಗರ್‌ಲೆಸ್ ಕಾಫಿ ಹೀರುತ್ತಾ, ''ದಿಲ್ಲಿಯಲ್ಲಿ ಒಂದು ಬೆಳಿಗ್ಗೆ ನಾನು ಹೆಚ್ಚು ಕಮ್ಮಿ ಕಳೆದೇ ಹೋಗಿದ್ದೆ. ಆ 'ಕಹಾನಿ' ಹೇಳಲೆ?'' ಎಂದು ಸಭೆಯನ್ನುದ್ದೇಶಿಸಿ ಕೇಳಿದರು. ನಾವೆಲ್ಲಾ ಕುರ್ಚಿಯನ್ನು ಮುಂದಕ್ಕೆಳೆದು ಕೊಂಡೆವು.

''ದಿಲ್ಲಿಯಲ್ಲಿ ನಾನು ಇದ್ದದ್ದು ಚಾಣಕ್ಯಪುರಿಯಲ್ಲಿ, ನಾನು ಹೋದ ಎರಡು ದಿವಸ ಎಲ್ಲವೂ ಚೆನ್ನಾಗಿಯೇ ಇತ್ತು... ಮಾರನೆಯ ದಿವಸ ಬೆಳಿಗ್ಗೆ 6ಕ್ಕೇ ಯಾಕೋ ಎಚ್ಚರವಾಗಿ ಹೋಯ್ತು. ಇದು ಬೆಂಗ್ಳೂರಿನಲ್ಲಿ ನನಗೆ ವಾಕ್‌ಗೆ ಹೋಗುವ ಸಮಯ. ಹೊರ ಹೊರಡಲು ತಯಾರಿ ನಡೆಸುತ್ತಿದ್ದ ನನ್ನನ್ನು ಕಂಡ ಸೋದರಳಿಯ ಕೊಂಚ ಭಯದಿಂದ ''ವಾಪಸ್ಸು ಬರಲು ನಿಮಗೆ ದಾರಿ ಗೊತ್ತಾಗುತ್ತಾ ಅಂಕಲ್? ಇದು ದೆಹಲಿ'' ಅಂದ. ''ಹೋಗುವ ದಾರಿ ನೆನಪಿಟ್ಟುಕೊಂಡರೆ ಬರುವ ದಾರಿ ಸಿಕ್ಕ ಹಾಗೆಯೆ...'' ಎಂದೆ. ''ಯಾವುದಕ್ಕೂ ಕೊಂಚ

ಹುಷಾರು ಅಂಕಲ್'' ಎಂದು ಬಾಗಿಲೆಳೆದುಕೊಂಡ. ಸೀದಾ ರಸ್ತೆಗಿಳಿದ ನನಗೆ ಚುಮುಚುಮು ಚಳಿಯ ಅನುಭವವಾಯ್ತು.''

ಕೊಂಚ ದೂರ ಕ್ರಮಿಸಿದ ಮೇಲೆ ಯಾಕೋ ಫುಟ್‌ಪಾತ್ ಯಾವುದು? ರಸ್ತೆ ಯಾವುದು? ಅನ್ನುವುದೇ ಕನ್‌ಫ್ಯೂಸ್ ಆಗಿ ಹೋಯ್ತು. ಜತೆಗೆ ಹೆವಿ ಟ್ರಾಫಿಕ್ ಬ್ಯಾರೆ. ಎಲ್ಲೆಲ್ಲೂ ಹೊಗೆ ಮತ್ತು ಧೂಳು ತುಂಬಿದ ವಾತಾವರಣ. ಸುಮಾರು ಆರೇಳು ಕಿಲೋ ಮೀಟರ್ ನಡೆದಿರಬೇಕು. ಯಾಕೋ ಅನುಮಾನಗೊಂಡು ದಾರಿ ಹೋಕರೊಬ್ಬರನ್ನು ''ಈ ದಾರಿ ಎಲ್ಲಿಗೆ ಹೋಗುತ್ತೆ?'' ಎಂದು ಇಂಗ್ಲೀಷ್‌ನಲ್ಲಿ ಕೇಳಿದಾಗ 'ಆಗ್ರಾಕ್ಕೆ' ಎಂಬುತ್ತರ ಕೇಳಿ ಜಂಘಾಬಲವೇ ಉಡುಗಿ ಹೋಯ್ತು. ಆ ಗಾಬರಿಯಲ್ಲಿ ಸೋದರಳಿಯನ ಮನೆಯ ಎಕ್ಸ್‌ಟೆನ್ಷನ್ ಹಾಗೂ ರಸ್ತೆಯ ಹೆಸರೇ ಮರೆತು ಹೋಗಿ, ವಾಪಸ್ಸು ಬರುವ ದಾರಿಯ ದಿಕ್ಕೇ ಗೋಚರಿಸಿದಂತಾಯ್ತು. ಅದೃಷ್ಟವಶಾತ್ ಅನತಿ ದೂರದಲ್ಲಿ ಚಾಯ್‌ವಾಲಾನ ಒಂದು ಗೂಡಂಗಡಿಯಿದ್ದುದು ಕಂಡು ಜೀವ ಮರಳಿ ಬಂದಂತಾಯ್ತು. ಹತ್ತಿರ ಹೋದಾಗ 40-45ರ ಒಬ್ಬ ತರುಣ ನನ್ನಂತೆಯೇ ದಾರಿ ತಪ್ಪಿ ಕಂಗಾಲಾಗಿ ನಿಂತಿದ್ದುದು ಕಂಡು ಬಂತು. ಬಿಳಿ ಜುಬ್ಬಾ ಪೈಜಾಮ ತೊಟ್ಟು ಕುರುಚಲು ಗಡ್ಡ ಬಿಟ್ಟಿದ್ದ ಆ ತರುಣ ನನ್ನನ್ನು ಕುರಿತು....

''ಅಂಕಲ್ ಸಫ್ದರ್‌ಜಂಗ್ ರೋಡ್ಸೆ ಮೈ ಆಯಾ ಹ್ಞೂಂ ವಾಪಾಸ್ ಜಾನೇ ಕೇಲಿಯೇ, ಪಥಾ ಬೂಲ್ ಗಯಾಹ್ಞೂಂ ಆಪ್ ಮದತ್ ಕರಿಯೆ'' ಎಂದ. ನಮ್ಮಿಬ್ಬರ ಬವಣೆ ಕಂಡು ಗಹಗಹಿಸಿ ನಕ್ಕ, ಆ ಚಾಯ್‌ವಾಲಾ ನಮ್ಮಿಬ್ಬರ ಕೈಗೆ ಬಿಸಿಬಿಸಿ ಚಹದ ಬಟ್ಟಲನ್ನಿತ್ತು ''ದಿಲ್ಲೀಮೆ ಯೆ ಪ್ರಾಬ್ಲಂ ಹೋತಾ ರಹತಾ ಹೈ, ಆಪ್ ಗಬರಾವ್‌ಮತ್. ಐಸಾಕರೋ ಆಪ್‌ದೋನೊ ಮೊಬೈಲ್ ನಿಕಾಲೋ ಜಿಪಿಎಸ್ ಆ್ಯಪ್ ದಾಲ್ಕೋ ಸೀದಾ ಘರ್ ವಾಪಸ್ ಚಲೋ. ಯೇ ಡಿಜಿಟಲ್ ಯುಗ್ ಹೈ'' ಅಂದ. ನಾನು ಸೋದರಳಿಯನಿಗೆ ಡಯಲ್ ಹಚ್ಚಿದೆ. ಆ ತರುಣ ಬ್ರಹ್ಮಚಾರಿ ಇರ್ಬೇಕು, ತನ್ನಮ್ಮನಿಗೆ ಫೋನ್ ಹಚ್ಚಿದ. ವಾಪಸ್ಸು ಬರುವಾಗ ಆ ತರುಣನನ್ನುದ್ದೇಶಿಸಿ ಇಂಗ್ಲೀಷಿನಲ್ಲಿ ''ದಿಲ್ಲಿಯ ಚಾಯ್‌ವಾಲಾಗಳು ಸಾಮಾನ್ಯರಲ್ಲ, ನಮಗೆ ದಾರಿ ತೋರಿಸಿದ ಹಾಗೆ ಇಡೀ ದೇಶಕ್ಕೆ ದಾರಿ ತೋರಿಸ್ತಾರೆ'' ಎಂದೆ.

ಯಾಕೋ ಆ ಹುಡುಗ ಮುಖ ಕಿವಿಚಿಕೊಂಡು ದಟ್ಟ ಹೊಗೆಯಲ್ಲಿ ಕರಗಿ ಹೋದ. ಈ ಮುಖವನ್ನು ಎಲ್ಲೋ ನೋಡಿರುವ ನೆನಪು ನನಗೆ.

''ಸರ್ ಆ ಹುಡುಗ ದಿಲ್ಲಿಯವನೇ ಇರ್ಬೇಕು ಅನ್ಸುತ್ತೆ. ತಾವೇನೊ ಹೊಸಬರು. ಆದ್ರೆ ಇಷ್ಟಕ್ಕೂ ಅವನು ದಾರಿ ತಪ್ಪಿದ್ದಾದ್ರೂ ಹ್ಯಾಗೆ?'' ನಾನು ಅನುಮಾನದಿಂದ ಕೇಳಿದೆ.

''ನನ್ನ ಊಹೆ ಪ್ರಕಾರ ಇಷ್ಟು ದಿವಸ ಅವನು ಅವರಮ್ಮನ ಕೈ ಹಿಡಿದೇ ನಡೆಯುತ್ತಿದ್ದ. ಅವತ್ತು ಅವರಮ್ಮನ ನಿರ್ದೇಶನದಂತೆ ಇಂಡಿಪೆಂಡೆಂಟಾಗಿ ಅವನು ರಸ್ತೆಗಿಳಿದಿದ್ದ. ಎನಿ ಡೌಟ್ಸ್?'' ಎಂದು ಕೇಳಿದರು ರಾಯರು.

''ನೋ ಸರ್ ಅಂದೆವು.''

ಕಥೆ ಮುಗಿಸಿದ ರಾಯರು ಸಭೆ ಬರಖಾಸ್ತು ಎಂದರು. ನಾವೂ ಎದ್ದೆವು, ದಾರಿಯಲ್ಲಿ ವಾಪಸ್ಸು ಬರುತ್ತಾ ಗಾಂಧಿ ಸರ್ಕಲ್ ಬಳಿ ಒಂದು ದೊಡ್ಡ ಫ್ಲೆಕ್ಸ್‌ನಲ್ಲಿ ಒಬ್ಬ ತರುಣನ ಫೋಟೋ ಇದ್ದುದು ಕಂಡು ಗಕ್ಕನೆ ನಿಂತ ರಾಯರು ''ಇವನೇ... ಇವನೇ... ಅವತ್ತು... ದಿಲ್ಲಿಯಲ್ಲಿ..'' ಎಂದು ಕಿರುಚಿಕೊಂಡರು. ಕೆಳಗೆ ಬೀಳದಂತೆ ನಾವೆಲ್ಲಾ ಗಟ್ಟಿಯಾಗಿ, ಅವರನ್ನು ಹಿಡಿದುಕೊಂಡೆವು.

✤

# ವಿಶ್ವರೂಪಿ ರಂಗಮ್ಮ

**- ವಾಣಿ ಮುರಳೀಧರ್**

**ನ**ಮ್ಮ ಸಮಾಜದಲ್ಲಿ ಸಲಹೆಗಳನ್ನು ನೀಡುವುದರಲ್ಲಿ ಬಹುತೇಕ ಜನರು ನಿಸ್ಸೀಮರು. ನಾನು ಪ್ರತಿ ಮುಂಜಾನೆ ಸಂಚಾರ ಹೋಗುವ ನಮ್ಮ ಮನೆ ಬಳಿ ಇರುವ ಪಾರ್ಕ್ ನನಗೆ ಎಷ್ಟೋ ಬಾರಿ ಸಲಹಾ ಕೇಂದ್ರವಾಗಿ ಕೆಲಸ ಮಾಡಿದೆ. ಅಲ್ಲಲ್ಲಿ ಹಾಕಿದ ಆಸನಗಳಲ್ಲಿ ಕುಳಿತ ವಿವಿಧ ವಯೋಮಾನದವರ ಅನೇಕ ಸಲಹೆಗಳು ನನ್ನ ಕಿವಿಗೆ ಬಿದ್ದಿದೆ.

ಇದೆಲ್ಲ ಸರಿ, ಆದರೆ ನಮ್ಮ ಮನೆಯ ಕೆಲಸ ಮಾಡುವ ರಂಗಮ್ಮನ ಜ್ಞಾನ ಭಂಡಾರ ಇವರೆಲ್ಲರನ್ನೂ ಮೀರಿದ್ದು ಎಂದು ಬಹುತೇಕ ಬಾರಿ ನನಗನಿಸಿದೆ. ಬಿ.ಇ. ಪದವೀಧರೆಯಾಗಿದ್ದರೂ, ಇವಳ ಮುಂದೆ ಎಷ್ಟೋ ಬಾರಿ ಸೋತಿದ್ದೇನೆ. ಬಹಳ ವರ್ಷಗಳಿಂದ ನಮ್ಮ ಮನೆಯ ಕೆಲಸಕ್ಕೆ ಬರುವ ರಂಗಮ್ಮ ಮನೆಯ ಸದಸ್ಯರಲ್ಲಿ ಒಂದಾದಂತಿದ್ದಾಳೆ.

''ಆಡು ಮುಟ್ಟದ ಸೊಪ್ಪಿಲ್ಲ ರಂಗಮ್ಮನಿಗೆ ತಿಳಿಯದ ವಿಷಯವಿಲ್ಲ'' ಎಂದರೆ ಖಂಡಿತ ತಪ್ಪಿಲ್ಲ!!! ಮನೆಯವರೆಲ್ಲ ತಮ್ಮ ಕೆಲಸಗಳಿಗೆ ಹೊರಟ ಸ್ವಲ್ಪ ಸಮಯಕ್ಕೆ ನಮ್ಮ ರಂಗಮ್ಮ ಹಾಜರ್! ಅವಳಿಗೆ ಸಮಯದ ಪರಿವೆಯೇಕೆ? ದಿನಕ್ಕೊಂದು ಸಮಯಕ್ಕೆ ಬಂದು ''ಇವತ್ತು ಮಂಗಳವಾರ ಕಂಡ್ರಕ್ಕ, ಶುಕ್ರವಾರ ಕಂಡ್ರಕ್ಕ'' ಎಂದು ನಾನು ಮರೆತರೂ ವಾರದ ಎಲ್ಲ ದಿನಗಳನ್ನೂ ಅವಳು ಬಿಡದೆ ನೆನಪಿಸುತ್ತಾಳೆ. ಅವಳ ರಜೆಗಳಿಗೆ ಯಾರದಾದರೂ ಮದುವೆ, ಪೂಜೆ, ತಿಥಿಗಳಿದ್ದೇ ಇರುತ್ತದೆ. ಯಾಕೆ ರಂಗಮ್ಮ ರಜೆ ಎಂದರೆ ''ಇಲ್ಲಕ್ಕೋ ನಮ್ಮ ಭಾವನವರ ಮಗಳ ಮದುವೆ'' ಅಂತಾಳೆ ಇವಳ ಭಾವ ಅಕ್ಕನಿಗೆ ಅಸಲಿಗೆ ಎಷ್ಟು ಜನ ಮಕ್ಕಳಿದ್ದಾರೆ ಎಂದು ಇದುವರೆಗೂ ನನಗೆ ತಿಳಿದಿಲ್ಲ!

ನಮ್ಮ ರಂಗಮ್ಮ ಒಂಥರಾ ಎಫ್‌ಎಮ್ ರೇಡಿಯೋ ಇದ್ದಂತೆ. ಬಂದಾಗ ಮಾತನಾಡಲು ಶುರು ಮಾಡಿದರೆ, ಕಡೆಗೆ ಕೆಲಸ ಮುಗಿಸಿ ಹೊರಡುವಾಗಲೂ ಬಾಗಿಲಲ್ಲಿ ನಿಂತು ಐದು ನಿಮಿಷ ಏನಾದರೂ ಕಥೆ ಹೇಳಿಯೇ ಹೋಗ್ತಾಳೆ. ಅವಳು ಹೊರಟು ಬಾಗಿಲು ಹಾಕಿದ ಮೇಲೆಯೇ ನಾನು ಉಸಿರು ಬಿಡುವುದು. ಅನೇಕ ಬಾರಿ ಅವಳ ರೇಡಿಯೋ ಆಲಿಸಲು ಆಗದೆ ದಿನಪತ್ರಿಕೆ ಹಿಡಿದು ಕೂರುತ್ತೇನೆ. ಆದರೆ ಅವಳಿಗೇನು ಹೆದರಿಕೆಯೇ? ನನ್ನ ಪಕ್ಕದಲ್ಲೇ ನಿಲ್ಲುತ್ತಾಳೆ. ಪತ್ರಿಕೆಯ ವಿಚಾರವನ್ನು ತಾನೇ ಹೇಳಲಾರಂಭಿಸುತ್ತಾಳೆ. ''ಗ್ಯಾಸ್‌ರೇಟ್ ಜಾಸ್ತಿ ಆಗ್ಯೆತಂತಕ್ಕ, ವರ್ಸ್ಕಕ್ಕೆ ಆರೇ ಸಿಲಿಂಡರಂತೆ, ಹಾಲು ರೇಟ್ ಎರಡು ರುಪಾಯಿ ಹೆಚ್ಚಾಗ್ಯೆತೆ'' ಹೀಗೆ ಪೆಟ್ರೋಲ್, ತರಕಾರಿ, ಬಂಗಾರ ಎಲ್ಲ ರೇಟಿನ ವಿವರ ಅವಳ ಬಾಯಲ್ಲೇ. ಒಮ್ಮೆ ವಿಚಾರ ತಿಳಿದರೆ ಮುಗಿಯಿತು ಮರೆಯುವುದೇ ಇಲ್ಲ, ಆದರೆ ಪ್ರತಿದಿನ ಪತ್ರಿಕೆ ಓದಿ, ಟಿವಿ ನೋಡಿ ಎಲ್ಲಾ ಮಾಡಿದರೂ ನನಗೆ ವಿಚಾರಗಳು ನೆನಪಿನಲ್ಲೇ ಇರುವುದಿಲ್ಲ, ನಮ್ಮ ಬೀದಿಯಲ್ಲಿ ಯಾರು ಸಿಕ್ಕರೂ ಸರಿ ಎಲ್ಲರೊಡನೆ ವಿಚಾರಗಳನ್ನು ಹರಟುವ ಅವಳ ಆತ್ಮವಿಶ್ವಾಸ ಶ್ಲಾಘನೀಯವಾದದ್ದು!!!



''ನನ್ನ ಗಂಡನ್ ಕುತ್ಗೆ ಪಟ್ಟಿ ಇಡ್ದು ಹೇಳಿದ್ದೀನಕ್ಕಾ ಎಲ್ಲಾ ರೇಟ್ ಜಾಸ್ತಿ ಆಗ್ಯೆತೆ ತಂದ್ ಹಾಕಿದ್ರೆ ಬೇಯಿಸ್ತೀನಿ ಇಲ್ಲಾಂದ್ರೆ ಇಲ್ಲಾ ಅಂತ.'' ಹೀಗೆ ಗಂಡನನ್ನು ಏಕವಚನದಲ್ಲಿ ಮಾತನಾಡಿಸೋ ಧೈರ್ಯ ನನಗೇಕಿಲ್ಲ ಎಂದು ಎಷ್ಟೋ ಬಾರಿ ಯೋಚಿಸಿದ್ದೇನೆ. ''ಅಲ್ಲಾ ರಂಗಮ್ಮಾ ನಿನ್ನ ಗಂಡ ಅಷ್ಟು ಕುಡೀತಾನೆ ಆರೋಗ್ಯಾನೂ ಹಾಳು ದುಡ್ಡೂ ಹಾಳು ಯಾರ ಕೈಲಾದ್ರೂ ಬುದ್ಧಿ ಹೇಳಿಸ್ಬಾರ್ದಾ'' ಎಂದಿದ್ದಕ್ಕೆ ಅಯ್ಯೋ ಬಿಡಕ್ಕಾ ಕಟ್ಕೊಂಡೀವ್ನಿ ಸಾಯಗಂಟ ಅನ್ನ ಹಾಕ್ತೀನಿ'' ಅಂದುಬಿಡೋದೇ!!

ಇವಳಿಗೇಕೆ ಪೆದ್ದಿಯಂತೆ ಸಲಹೆ ಕೊಟ್ಟೆ ಎಂದು ನನ್ನ ನಾನೇ ತಿದ್ದಿಕೊಂಡಿದ್ದಿದೆ.

ನಾವು ಯಾರಿಗಾದರೂ ಏನಾದರೂ ಸಲಹೆಗಳನ್ನು ಕೊಡುವ ಮುಂಚೆ ನೂರು ಬಾರಿ ಯೋಚಿಸುತ್ತೇವೆ. ಆದರೆ ನಮ್ಮ ರಂಗಮ್ಮ ಅದಕ್ಕೆ ತಲೆಯೇ ಕೆಡಿಸಿಕೊಳ್ಳುವುದಿಲ್ಲ. ನಮ್ಮ ಮನೆಯ ಸಂಸಾರ ತಾಪತ್ರಯದಿಂದ ಹಿಡಿದು ಅಡುಗೆ, ಆರೋಗ್ಯದವರೆಗೆ ತನಗೆ ತೋಚಿದ ಸಲಹೆಗಳನ್ನು ಕೊಡುತ್ತಲೇ ಇರುತ್ತಾಳೆ. ಅಪ್ಪಿತಪ್ಪಿ ಅವಳ ಮುಂದೆ ಕೆಮ್ಮಿದರೆ ಆಯುರ್ವೇದ, ಯುನಾನಿ ಹೀಗೆ ಎಲ್ಲ ಔಷಧಿ ಪದ್ಧತಿಗಳ ನೂರು ಪಟ್ಟಿಗಳು ಅವಳ ಬಾಯಲ್ಲಿ ನಲಿಯುತ್ತಿರುತ್ತದೆ. ''ಸೀತ ಜ್ವರಕ್ಕೆಲ್ಲ ನಾನ್ ಹೆದ್ರಲ್ಲಕ್ಕೋ ನಮ್ ಮನೀನಾಗೆ ಎಲ್ರಿಗೂ ಔಷಧಿ ನಾನೇ ಕೊಡೋದು.'' ರಂಗಮ್ಮನ ಈ ಮಾತು ಕೇಳಿದಾಗ ಇಷ್ಟು ಓದಿ ನನ್ನ ತಮ್ಮ ಏಕೆ ವೈದ್ಯನಾದ? ನಮ್ಮ ರಂಗಮ್ಮನೇ ಸಾಕಿತ್ತಲ್ಲ ಈ ಪ್ರಪಂಚಕ್ಕೆ ಎಂದೆನಿಸುತ್ತದೆ. ನಾನೆಂದೂ ಅವಳ ವೈದ್ಯ ಪದ್ಧತಿ ಅನುಸರಿಸುವುದಿಲ್ಲವಾದರೂ, ಅವಳು ಮಾತ್ರ ಬಿಡುವುದೇ ಇಲ್ಲ. ''ನಾ ಯೇಳ್ದಂಗೆ ಮಾಡಿದ್ಯಾ ಅಕ್ಕಾ'' ಎಂದು ಪ್ರತಿದಿನ ವಿಚಾರಣೆ ನಡೆಸಿ, ನನ್ನ ಕೆಮ್ಮು ಶೀತದ ಜೊತೆಗೆ ತಲೆನೋವೂ ಕೊಡುತ್ತಾಳೆ!!!

ಬೆಳಗಿನ ಸಮಯ ನಾನು ಟಿವಿ ಹಾಕುವುದು ಬಿಟ್ಟಿದ್ದು ಈ ಮಹಾತಾಯಿಯಿಂದಲೇ! ಒಮ್ಮೆ ದ್ವಾದಶ ರಾಶಿಗಳ ಗೋಚಾರ ಫಲ ಬಿತ್ತರವಾಗುತಿತ್ತು. ಅಂದು ನನ್ನ ರಾಶಿಯ ಫಲ ಚೆನ್ನಾಗಿಯೇ ಇದ್ದರೂ ರಂಗಮ್ಮ ನನ್ನ ಹಿಗ್ಗಾ ಮುಗ್ಗಾ ಆಡಿಸಿಬಿಟ್ಟಳು!!! ಕಸವನ್ನು ಗುಡಿಸುತ್ತಿದ್ದವಳು ತಕ್ಷಣ ಪೊರಕೆ ಕೆಳಗೆ ಹಾಕಿ ಕುಳಿತೇ ಬಿಟ್ಟಳು. ''ಅಕ್ಕಾ ನನ್ನ ಎರಡನೆಯ ಮಗನದೂ ಇದೇ ರಾಸಿ, ಅವ್ನ ಜಾತ್ಕ ನೋಡಿರೋವ್ರು ಇವ್ನು ಮಹಾರಾಜ ಇದ್ದಂಗೆ ಇರ್ತಾನೆ''

ಅಂತ ಶುರು ಮಾಡಿದವಳು ಅವಳ ತಾಯಿ, ತಂದೆ, ಅಣ್ಣ, ಅಕ್ಕ ಕಡೆಗೆ ಅವಳ ಊರವರ ಎಲ್ಲ ಜಾತಕಗಳೂ ನನ್ನ ತಲೆಯಲ್ಲಿ ನರ್ತನ ಶುರು ಮಾಡಿದವು. ಅಂದು ಅವಳು ಕೆಲಸ ಮುಗಿಸಿ ಹೊರಟಾಗ ನನ್ನ ರಾಶಿಯ ಫಲದ ಮೇಲೆ ನನಗೇ ಸಿಟ್ಟು ಬಂದಿತ್ತು.

ನಮ್ಮ ಮನೆಯ ಮುಂದಿನ ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚು. ಆಗಾಗ ಹಣಾಹಣಿ ನಡೆಯುತ್ತಿದ್ದರೂ ನಾನೆಂದೂ ತಲೆಕೆಡಿಸಿಕೊಳ್ಳುವ ಗೋಜಿಗೆ ಹೋಗುವುದಿಲ್ಲ. ತನ್ನ ಎಫ್‌ಎಮ್ ರೇಡಿಯೋ ಮುಗಿಸಿ ಹೊರಟ ರಂಗಮ್ಮ ಗೇಟಿನ ಬಳಿಯೇ ಥಟ್ಟನೆ ನಿಂತಳು. ಮತ್ತೇನಪ್ಪಾ ಇವಳದು ಎಂದುಕೊಂಡೆ. ನೋಡಿದರೆ ಎರಡು ದೊಡ್ಡ ಕಾರುಗಳು ಮುಖಾಮುಖಿ ಇಬ್ಬರಿಗೂ ಜಾಗವಿಲ್ಲ, ತನ್ನ ಜ್ಞಾನ ಭಂಡಾರವನ್ನು ತೆರೆದೇ ಬಿಟ್ಟಳು ನಮ್ಮ ರಂಗಮ್ಮ!! ಊರವರ ಉಸಾಬರಿ ಇವಳಿಗೇಕಪ್ಪಾ ಎಂದು ನೋಡುವಷ್ಟರಲ್ಲಿ ''ಅಣ್ಣಾ ನೀ ಈ ಕಡೀಕ್ ಬಾ ಜಾಗ ಐತಿ ಆ ಕಡಿ ಈ ಕಡಿ'' ಅಂತ ಎರಡೂ ಕಾರನ್ನು ಕಳುಹಿಸಿಯೇ ಬಿಟ್ಟಳು. ಭಲಾ! ರಂಗಮ್ಮಾ ನೀನು ಟ್ರಾಫಿಕ್ ಪೊಲೀಸೂ ಆಗಿಬಿಟ್ಯಾ ಎಂದುಕೊಂಡೆ.

ಅಷ್ಟರಲ್ಲಿ ಮೋರಿ ಬಾಚುವ ಸಿಂಗಣ್ಣ ಬಂದ. ಹಗಲೂ ರಾತ್ರಿ ಭೇದವಿಲ್ಲದೆ ಕುಡಿಯುವ ಅವನನ್ನು ಮಾತಾಡಿಸೋಕೆ ನನಗೆ ಬೇಜಾರು. ''ಇವತ್ತ್ಯಾಕೋ ಬಂದೆ ನಾಳೆ ಬಾ. ಅಣ್ಣಾನೂ ಮನೇಲಿರ್ತಾರೆ ಅವ್ರೇ ದುಡ್ಡು ಕೊಡ್ತಾರೆ'' ಅಂದೆ. ಅವನಿಗೆ ತಿಳಿಯಿತೋ ಇಲ್ಲವೋ ತೂರಾಡುತ್ತಾ ಅಲ್ಲೇ ನಿಂತಿದ್ದ. ಕದಲುವ ನಿಶಾನೆಯೇ ತೋರಿಸಲಿಲ್ಲ. ಇದನ್ನು ನೋಡುತ್ತಿದ್ದ ರಂಗಮ್ಮನಿಗೆ ರೇಗಿಹೋಯಿತು. ''ಯೋ ಸಿಂಗಣ್ಣ ಒಂದ್ಸಾರಿ ಯೇಳಿದ್ರೆ ಅರ್ಥ ಆಗಕ್ಕಿಲ್ವಾ. ನಾಳೆ ಬಾ. ಅಣ್ಣಾನೂ ಮನೇಲಿರ್ತಾರೆ ಅವ್ರತ್ರ ದುಡ್ಡುಯಿಸ್ಕೋ. ಅಲ್ಲಾ ಬೆಳ್ ಬೆಳ್ಗೇನೇ ಕುಡ್ದು ಬಂದಿದ್ದೀಯಲ್ಲಾ ನಿನ್ ಜನ್ಮಕ್ಕೆ ನಾಚ್ಕೆ ಇಲ್ವಾ.. ನಡೀ'' ಅಂತ ಸಿಂಗಣ್ಣನ ಜನ್ಮಜಾಲಾಡಿ ಕಳುಹಿಸಿದಳು. ಸಿಂಗಣ್ಣ ಹೊರಡುತ್ತಿದ್ದಂತೆ ನಮ್ಮ ಸೊಪ್ಪಿನವನು ಬಂದ. ಅಲ್ಲೇ ನಿಂತಿದ್ದ ರಂಗಮ್ಮ ನನ್ನ ವ್ಯಾಪಾರ ನೋಡುತ್ತಿದ್ದಳು. ಕಡೆಗೆ ತಲೆಕೆಟ್ಟು ಅವಳೇ ವ್ಯಾಪಾರಕ್ಕಿಳಿದಳು. ''ಬಿರೇ ಹುಲ್ಲುಕಡ್ಡಿ ಕಟ್ಟಿ ಒಂದಂದು ಕಟ್ಟು ದಪ್ಪ ಮಾಡ್ತೀರ. ತೆಗಿದ್ರೆ ಏನಿರಲ್ಲಾ'' ಎಂದು ಸೊಪ್ಪಿನವನ್ನೂ ಬಿಡದೆ ಒಂದಂದು ಕಟ್ಟಿಗೂ ಎರಡು ರೂಪಾಯಿ ಕಡಿಮೆ ಮಾಡಿಸಿಕೊಟ್ಟಳು!! ''ಇಷ್ಟೊಂದು ಸೊಪ್ಪು ನಂಗೆ ಬೇಡ ರಂಗಮ್ಮಾ. ನೀನು ಸ್ವಲ್ಪ ತಗೊಂಡುಹೋಗು ಎಂದರೆ ಅಯ್ಯೋ ಫ್ರಿಜ್ ಐತಲ್ಲಾ ಮಡಿಕ್ಕೋ ಮುದ್ದೆಸಾರ್‌ಗೆ, ಪಲ್ಯಕ್ಕೆ ಹಾಕು'' ಅಂತ ದೊಡ್ಡ ಅಡಿಗೆ ಪಟ್ಟಿಕೊಟ್ಟು, ''ನಾನು ಬರ್ಲಾ ಅಕ್ಕ'' ಎಂದು ಹೊರಟು ನನ್ನ ಕಡೆ ನೋಡಿದಾಗ ರಂಗಮ್ಮ ಅಂದು ನನಗೆ ''ವಿಶ್ವರೂಪಿಯಾಗಿ'' ಕಂಡಳು.

✤

## ಯಾರಿಗೆ?

ಈ 10 ರೂ ಹುಂಡಿಗೆ ಹಾಕು ತಾಯಿ ಮಗನಿಗೆ ಹೇಳಿದಳು ಮಂದಿರದಲ್ಲಿ. ದೇವರ ಬಳಿ ಸಾಕಷ್ಟಿದೆ ಎಂದು ಮಗ ಆ ಹಣವನ್ನು ಹೊರಗಿದ್ದ ಭಿಕ್ಷುಕನ ತಟ್ಟೆಗೆ ಹಾಕಿದ.

# ನಮ್ ದೇಶ್ದ ಗುಪ್ತಚಾರಿಗಳು!

**- ಇ.ಆರ್. ರಾಮಚಂದ್ರನ್**

ಅಜ್ಜಿ ಹಳೇ ಪುಸ್ತಕವನ್ನಿಡುವ ಕಪಾಟಿನಲ್ಲಿ ಏನೋ ಹುಡುಕುತ್ತಿದ್ದರು. ಲಲಿತ ಸಹಸ್ರನಾಮದ ಪುಸ್ತಕ, ಹಳೇ ಒಂದೆರೆಡು ಕನ್ನಡಕ, ಆಯುರ್ವೇದ ಚೂರ್ಣ, ಲ್ಯಾಪ್‌ಟಾಪ್, ಸ್ಮಾರ್ಟ್ ಫೋನ್, ಸಾಫ್ಟ್‌ವೇರಿನ ಸಿಡಿ, ಡೌನ್ಲೋಡ್ ಮಾಡಲು ಕೇಬಲ್ ಇತ್ಯಾದಿ.... ಎಲ್ಲಾ ಹೊರಗೆ ಬಿದ್ದಿತ್ತು. ಅವ್ರು ಹುಡುಕುತ್ತಿದ್ದದ್ದು ನೋಡಿ ಇದು ಯಾವುದೋ ದೊಡ್ಡ ರಾಜಕೀಯ ಅಥವಾ ಬಿಸನೆಸ್ ಕುಳ ಮನೆಗೆ ಐಟಿ ರೈಡು ನಡೀತಿದೆ ಅನ್ನುಸ್ತು.

**2017ರ ಪುರುಷೋತ್ತಮ ಮತ್ತು ರಾಮನಾಥ ಅವರ ಸಾಹಸಗಳು!**

''ಏನು ಹುಡುಕ್ತಿದ್ದೆ ಅಜ್ಜಿ? ನಿನ್ನ ಸಾಮಾನೆಲ್ಲಾ ಚೆಲ್ಲಾಪಿಲ್ಲಿಯಾಗಿ ಬಿದ್ದಿದೆ? ಹಳೆ 500, 1000 ನೋಟುಗಳು ಇನ್ನು ಒಳಗೆ ಬಚ್ಚಿಟ್ಟ್ಯಾ, ಏನು ಕಥೆ?''

''ನಿನ್ನ ತಲೆ! ಅದೆಲ್ಲಾ ಆಗ್ಲೇ ಆಯ್ತಲ್ಲೋ! ನಮ್ಮ ನರಸಿಂಹಯ್ಯನವರ ಪತ್ತೇದಾರಿ ಪುಸ್ತಕ ಹುಡುಕ್ತಿದ್ದೆ. ಅದು ಯಾವ ಕಾಲದಲ್ಲಿ ಇಟ್ಟಿದ್ನೋ? ಎಲ್ಲಿ ಸಿಗುತ್ತೆ ಈಗ?''

''ಅಜ್ಜಿ! ಐ ಕಾನ್ಟ್ ಬಿಲೀವ್ ಇಟ್! ಇಷ್ಟು ವರ್ಷವಾದ ಮೇಲೆ ನಗಾರಿ ನರಸಿಂಹಯ್ಯನ ಪುಸ್ತಕ ಹುಡುಕ್ತಿದ್ಯಾ? ಏನಾದ್ರೂ ತರ್ಲೆ ಮಾಡಿ ಸಿಕ್ಕಾಕ್ಕೊಂಡಿದಿಯಾ? ಪುರುಷೋತ್ತಮ ಮತ್ತು ರಾಮನಾಥ ಅಲ್ವಾ ಅದರಲ್ಲಿ ಬರೋ ಪತ್ತೇದಾರರು?''

''ಹಾಂ! ಈಗ ಜ್ಞಾಪಕಕ್ಕೆ ಬಂತು! ಮರ್ತೇ ಹೋಗಿತ್ತು... ಅವ್ರ ಹೆಸರಿಗೋಸ್ಕರವೇ ಪುಸ್ತಕ ಹುಡುಕ್ತಿದ್ದೆ. ನನಗನ್ನುಸುತ್ತೆ.. ಈಗ್ಲೂ ಆ ತರಹ ಪತ್ತೇದಾರ್ರು ನಮ್ಮೆದುರಿಗೇ ಓಡಾಡ್ತಿದಾರೇನೋ ಅಂತ ಅನ್ನುತ್ತೆ ಕೆಲವು ಸಲ.''

''ಯಾರಜ್ಜಿ?''

''ಸ್ವಲ್ಪ ತಡ್ಕೋ! ಹೇಳ್ತಿನಿ... ಅವ್ರು ಯಾವಾಗ ಎಲ್ಲಿ ಏನು ಮಾಡ್ತಾರೆ ಅಂತ ಯಾರಿಗೂ ಸುಳಿವೂ ಸಿಗೊಲ್ಲ... ಅವ್ರು ಮಾಡಿದ್ಮೇಲೆ ಎಲ್ಲಾರು ಕಣ್ ಕಣ್ ಬಿಡ್ತಾರೆ..''

''ಬಿ ಕ್ಲಿಯರ್ ಅಜ್ಜಿ..''

''ಕಳ್ತನವೋ ಖೂನಿಯೋ ಆದ್ರೆ ಪತ್ತೇದಾರ್ರು ಅದನ್ನ ಪತ್ತೆ ಹಚ್ತಾರೆ... ಇವ್ರು ಡಿಫ್ರೆಂಟು.. ಯಾವಾಗ ಏನು ಮಾಡ್ತಾರೋ, ಎಲ್ಲಿ ಕಿತಾಪತಿ ಮಾಡ್ತಾರೇಂತ ಯಾರಿಗೂ ಸುಳಿವೇ ಸಿಗೊಲ್ಲ...''

''ಅಜ್ಜಿ! ಈಗ್ಲೂ ಒಗಟ್ನಲ್ಲೆ ಮಾತಾಡ್ತಿದೀಯ...''

''ಅವ್ರು ಮಾಡಿದ್ದು, ಒಂದಾ, ಎರಡಾ..... ನಮಗೆ ಡಿಮನಿಷನ್ ಬರುತ್ತೇಂತ ಯಾರಿಗೂ ಗೊತ್ತೇ ಆಗ್ಲಿಲ್ಲ ನೋಡು.. ಇದ್ದಕ್ಕಿದ್ದಂತೆ ತಲೆ ಮೇಲೆ ಸಿಡಿಲು ಹೊಡ್ದ ಹಾಗೆ ಆಯ್ತು.''

''ಡಿ-ಮಾನಿಟೈಜೇಷನ್ ಬಗ್ಗೆ ಹೇಳ್ತಿದೀಯಾ ಅಜ್ಜಿ ? ಹೌದು... ಕಣ್ಣ ಹಾಕೋ ಹಾಗೆ ರಾತ್ರೋ ರಾತ್ರಿ ಮಾಡಿದ್ರು... ಒಂದು ಸುಳಿವೂ ಇರ್ಲಿಲ್ಲ.. ಎಷ್ಟೋ ಜನ ರಾತ್ರಿನೇ ಓಡ್ಹೋಗಿ ಚಿನ್ನ ಬೆಳ್ಳಿ ಖರೀದಿ ಮಾಡಿದ್ರು.. ಏಟಿಎಮ್‌ಗೂ ಓಡ್ಹೋಗಿ ಕೋಟ್ಯಾಂತರ ರೂಪಾಯಿ ಅಷ್ಟು ಹಳೇ ನೋಟು ಹಾಕಿ ಬಂದ್ರು.''

''ವರ್ಷಾನುಗಟ್ಲೆ ಶೇಖರಿಸಿಟ್ಟಿದ್ದ ಕಪ್ಪು ಹಣ ಹೊರಗೆ ತೆಗೆಯಲು ಮಾಡಿದ ಮಾಸ್ಟರ್ ಪ್ಲಾನ್ ಅದು. ಆಮೇಲೆ ಬಂತು ನೋಡು ಸರ್ಜಿಕಲ್ ಸ್ಟ್ರೈಕ್.....''

''ಹೌದಜ್ಜಿ! ಅದು ಕೂಡಾ ಒಂದು ಹುಳುಕ್ಕೂ ಗೊತ್ತಿರಲಿಲ್ಲ.... ಕ್ಲೂನೇ ಇರ್ಲಿಲ್ಲವಲ್ಲ?... ನಮ್ಮ ಮೀಡಿಯಾನವ್ರು ಗವರ್ನಮೆಂಟಿಗೆ ದಿನಾ ಬೈತಿದ್ರು...... ಬಳೆ ತೊಡಿಸ್ಬೇಕು ಹಾಗೆ ಹೀಗೆ ಅಂತ ಕಿರಿಚಾಡ್ತಿದ್ರು...... ನಮ್ಮ ಸೇನೆಯವರು ಒಂದೇ ರಾತ್ರಿ ಪಾಕಿಸ್ತಾನಕ್ಕೆ ಹೋಗಿ ಟೆರರಿಸ್ಟ್ರನ್ನ ಅವರ ಕ್ಯಾಂಪುಗಳನ್ನ ಧ್ವಂಸ ಮಾಡಿ ಬಂದ್ರು.. ಎಲ್ಲಾರೂ ಬೆಳಿಗ್ಗೆ ಏಳುವಷ್ಟರಲ್ಲಿ ಹೋಗಿ ಮುಗಿಸಿ ಬಂದ್ರು... ಅದನ್ನು ವಿಡಿಯೋ ಕೂಡ ಮಾಡಿ ಎಲ್ಲಾರಿಗೂ ತೋರಿಸಿದ್ದಾಯಿತು.''

''ಅದಿರ್ಲಿ.. ಮೊನ್ನೆ ಮೊನ್ನೆ ತನಕ ನಮ್ಮ ರಾಷ್ಟ್ರಪತಿ ಲಾಲ್‌ಕೃಷ್ಣ ಅಧ್ವಾನಿ ಆಗಬಹುದು, ಇನ್ನೊಂದು ಕಡೆ ಸುಷ್ಮ ಸ್ವರಾಜ್ ಆಗಬಹುದು ಅನ್ನುವ ಸುದ್ದಿ ಎಲ್ಲಾ ಕಡೆ ಹರಡಿಸಿ ಯಾರಿಗೂ ಹೊಳೆಯದ, ಗೊತ್ತಿಲ್ಲದ ಹೆಸರು ಕೋವಿಂದ್ ಅವರನ್ನು ರಾಷ್ಟ್ರಪತಿಯಾಗಿ ಆರ್ರಿಸ್ದ್ರಲ್ಲೋ.. ಹೀಗೇ ಆದ್ರೆ ಮುಂದೆ ನಮ್ಮ ಗತಿ ಏನು ಅಂತ ಎಲ್ಲಾ ರಾಜಕಾರಣಿಗಳು 'ಗೋವಿಂದಾ, ಗೋವಿಂದಾ' ಅಂತ ಬೊಬ್ಬೆ ಹಾಕ್ತಿದಾರೆ!''

''ಎಲ್ಲಾರಿಗೂ ಮತ್ತೆ ಮತ್ತೆ ಶಾಕ್ ಹೊಡೀತಾ ಇದೆ! ಕೋವಿಂದ್‌ರು ಇದ್ದ ಜಾಗ ಪಾಟ್ನ, ಡೆಲ್ಲಿಯಿಂದ ಸುಮಾರು ದೂರ. ಆದ್ರೂ ಅಲ್ಲಿಗೆ ಯಾವಾಗಲೋ ಹೋಗಿ ಮಾತು ಕಥೆ ಮುಗಿಸಿ, ಅದನ್ನು ಯಾರಿಗೂ ತಿಳಿಯದ ಹಾಗೆ ಬಚ್ಚಿಟ್ಟು, ಕೊನೆಗೆ ಅವ್ರೇ ಗುಟ್ಟು ರಟ್ಟು ಮಾಡಿದ್ರು... ಆದ್ರೆ ಇದಕ್ಕೂ ಪತ್ತೇದಾರಿಗೂ ಏನು ಸಂಬಂಧ ಅಜ್ಜಿ?''

''ಕಳ್ತನ, ಕೊಲೆ ಆದ್ರೆ ಪತ್ತೇದಾರ್ರು ಕಳ್ಳನ್ನ ಹುಡುಕಿ, ಹಿಡಿದು ಪೋಲಿಸ್ಗೆ ಕೊಡ್ತಾರೆ... ಇಲ್ಲಿ ಇವ್ರು ಒಂದು ಹುಳಕ್ಕೂ ಗೊತ್ತಿಲ್ದ ಹಾಗೆ ಇಬ್ಬರೇ ಇದೆಲ್ಲಾ ಮಾಡ್ತಿರೋದು! ಇವರಿಬ್ಬರೂ ಜೊತೆಗೆ ಇದ್ದದ್ದೇ ನೋಡಿಲ್ಲ... ಒಬ್ಬರಂತೂ ಭಾರತದಲ್ಲಿರೋದೇ ಕಡಿಮೆ! ಇನ್ನೊಬ್ರು ಆಸಾಮಿ ಭಾರತದಿಂದ ಹೊರಗಡೆ ಹೆಜ್ಜೇನೇ ಹಾಕಿಲ್ಲ! ಯಾವಾಗ ಒಟ್ಟಿಗೆ ಸೇರ್ತಾರೋ ದೇವ್ರಿಗೇ ಗೊತ್ತು.''

''ಇದೆಲ್ಲಾನೂ ಮಾಡ್ತಿರೋದು ಇಬ್ಬರು ಅಂತ ಹೇಗೆ ಹೇಳ್ತಿಯಾ?''

''ಇದೀಗ ಬಿಹಾರ್ನಲ್ಲಿ ಭ್ರಷ್ಟಾಚಾರಿ ರಾಜಕಾರಣಿ ಕುಟುಂಬದಿಂದ ತಪ್ಪಿಸ್ಕೊಳ್ಳೋಕೆ ಅಲ್ಲಿನ ಮುಖ್ಯಮಂತ್ರಿ ನಿತೀಷ್ ಕುಮಾರ್ ರಾತ್ರೋ ರಾತ್ರಿ ರಿಸೈನ್ ಮಾಡಿ ಬೇರೆ ಮಂತ್ರಿಮಂಡಲ ಕಟ್ಟಿದ್ರು, ಅದಕ್ಕೂ ಇವ್ರೇ ಕಾರಣ ಅನ್ಸುತ್ತೆ!''

''ಹಾಗಂತಿಯಾಜ್ಜಿ?''

''ಮತ್ತೇನು? ನನಗೆ ಅನ್ಸುತ್ತೆ.. ನಮ್ಮ ದೇಶದ ಭವಿಷ್ಯ ಇವರಿಬ್ಬರ ಕೈಲಿ ಸುಮಾರು ಕಾಲ ಇರುತ್ತೆ ಅನ್ಸುತ್ತೆ. ಬೇನಾಮಿ ಹೆಸರಿನಲ್ಲಿ ಮನೆ ಮಠ ಕಟ್ಟುಕೊಂಡಿದ್ದವರಿಗೆ ಇವರಿಬ್ಬರು ಸಿಂಹ

ಸ್ವಪ್ನ ಆಗ್ತಾರೆ, ನೋಡ್ಕೊ. ಆಗ್ಲೆ ಜನಧನ ಅಕೌಂಟಿಗೆ, ಕಳ್ಳ ನೋಟುಗಳನ್ನು ಹಾಕಿದವ್ರಿಗೆ, ಹಾಕಿಸ್ಕೊಂಡವ್ರಿಗೆ ಗ್ರಹಚಾರ ಬಿಡಿಸ್ತಿದಾರೆ... ಇನ್ನು ಮುಂದೆ ಬೇರೆಯವರ ಹೆಸರಿನಲ್ಲಿ ಮನೆ ಬರೆದು ಇಟ್ಟವ್ರಿಗೆ ಬರೆ ಹಾಕ್ತಾರೆ!''

''ಇವ್ರು ಯಾರು ಅಜ್ಜಿ? ಇಬ್ಬರೂಂತ ಹೇಗೆ ಹೇಳ್ತಿಯಾ?''

''ಅವ್ರಲ್ಲಿ ಒಬ್ರು 56 ಇನ್ನೊಬ್ರು 112.. ಇನ್ನೂ ಜಾಸ್ತಿ ಇದ್ರೂ ಇರ್ಬಹುದು. ಅವ್ರು ಜೊತೆಲಿದ್ದಾಗ ಇಬ್ಬರೂ ನಗ್ತಾ ಇರೋದನ್ನ ನೋಡ್ತಿವಿ ಟೀವೀಲಿ. ಸುತ್ತಮುತ್ತ ಯಾರ್ಗೂ ಅರ್ಥವಾಗದ ನಗು. ಅದು ಗುಜರಾತಿ ನಗು!''

''ಕಳ್ರಗೆ ಜೈಲಲ್ಲಿ ಕೊಡೋ ನಂಬರೋ, ಕಾನ್ಸ್ಟೇಬಲ್‌ಗೆ ಕೊಡ್ತಾರಲ್ಲ ಹಾಗಿದೆ ನೀನು ಕೊಟ್ಟಿರೋ ನಂಬರ್!'' ಅವ್ರು ಪತ್ತೇದಾರ್ರಲ್ಲಾ ಅಂತೀಯಾ! ಹಾಗಾದ್ರೆ ಬೇರೆ ಏನು ಅವ್ರು?''

''ಎಲ್ಲವನ್ನೂ ಗುಪ್ತವಾಗಿ ಮಾಡೋವ್ರು..... ನಮ್ಮೂರ ಗುಪ್ತಚಾರಿಗಳು!''

''ನಮ್ ದೇಶ್ದ ಗುಪ್ತಚಾರಿಗಳು ಅನ್ನಜ್ಜಿ!''

✤

---

## ದೇವರ ಕೆಲಸ

ತಾತನ ಜತೆ ಮೊಮ್ಮಗಳು ಕುಳಿತಿದ್ದಳು. ತಾತನ ಸುಕ್ಕುಗಟ್ಟಿದ ಮುಖ ನೋಡುತ್ತಿದ್ದಳು. ಅವನ ಮುಖದ ಮೇಲೆ ಕೈ ಆಡಿಸಿದಳು. ನಂತರ ತನ್ನ ಮುಖದ ಮೇಲೆ ಕೈ ಆಡಿಸಿದಳು. ವ್ಯತ್ಯಾಸ ಗೊತ್ತಾಗಿ ಆಶ್ಚರ್ಯವಾಯಿತು.

ತಾತ, ನಿನ್ನನ್ನು ಯಾರು ಮಾಡಿದ್ದು? ಎಂದು ಕೇಳಿದಳು.

ದೇವರು ಮಾಡಿದ್ದು ಪುಟ್ಟಿ, ತುಂಬಾ ಹಿಂದೆ, ಎಂದ ತಾತ.

ನನ್ನನ್ನು ಯಾರು ಮಾಡಿದ್ದು?

ಅದೇ ದೇವರೇ.. ಅವನದೇ ಕೆಲಸ.

ಓ! ಹಾಗಿದ್ದರೆ ಅವನ ಕೆಲಸ ಇಂಪ್ರೂವ್ ಆಗ್ತಿದೆ ಅಲ್ವಾ? ಎಂದು ಕೇಳಿದಳು.

# ಮೀನುಗಳೂ ಮಾತನಾಡುವಂತಿದ್ದರೆ..

**- ನಂನಾಗ್ರಾಜ್**

### ಸ್ಟಿಂಕ್ಸ್ ಲೈಕ್ ಫಿಶ್

ಅಯ್ಯೋ, ಅಯ್ಯೋ ಮೀನಿನ ವಾಸನೆ - ದುರ್ನಾತ ಎಂದು ಮೂಗೆಳೆಯುತ್ತೀರಾ? ನಾವು ನಮ್ಮ ಆವಾಸ ಸ್ಥಾನದಲ್ಲಿದ್ದಾಗ ವಾಸನೆ ಸುತಾರಾಂ ಇರೋದಿಲ್ಲ ತಾನೆ? ಗಾಳ ಹಾಕಿಯೋ ಅಥವಾ ಬಲೆ ಬೀಸಿಯೋ ಕೃತ್ರಿಮದಿಂದ ನಮ್ಮನ್ನು ಹೊರಕ್ಕೆಳೆದು ವಾತಾವರಣಕ್ಕೆ ಎಕ್ಸ್‌ಪೋಸ್ ಮಾಡಿ ದುರ್ವಾಸನೆ ಎನ್ನುತ್ತೀರಲ್ಲಾ, ಕ್ರೂರಿಗಳು. ನಂತರ ನಮ್ಮನ್ನು ಶುದ್ಧಿಮಾಡಿ, ಮಸಾಲೆಗಳನ್ನು ಹಾಕಿ ಬಗೆ ಬಗೆಯಾದ ರುಚಿ ರುಚಿ ಖಾದ್ಯಗಳನ್ನು ತಯಾರಿಸಿ ಬಾಯಿ ಚಪ್ಪರಿಸಿಕೊಂಡು ತಿನ್ನುತ್ತೀರ ಎಂತಹ ವಕ್ರ ಬುದ್ಧಿ! ನಾವು ಸತ್ತಮೇಲೂ ನಿಮ್ಮ ನಾಲಿಗೆಗೆ ರುಚಿಸಿ ಹೊಟ್ಟೆಗೆ ಹಿತ ತರುತ್ತೇವೆ. ನೀವು?

### ಡ್ರಿಂಕ್ಸ್ ಲೈಕ್ ಫಿಶ್

ಮೀನಿನ ಹಾಗೆ ಕುಡಿಯುತ್ತಾನೆ ಎಂದು ಅಲ್ಲಗೆಳೆಯುತ್ತೀರ. ಕುಡಿಯುವುದು ಎಂದರೆ ಏನೆಂದೇ ನಮಗೆ ಗೊತ್ತಿಲ್ಲ. ಏಕೆ ಈ ಅಸಂಬದ್ಧ ಹೋಲಿಕೆ. ಕಂಠಪೂರ್ತಿ ಕುಡಿದಿದ್ದರೆ ಫಿಲ್ಲಡ್ ಟು ದಿ ಗ್ರಿಲ್ಸ್ ಅನ್ನುತ್ತೀರ ಇದು ಅತಿ ಆಯ್ತು.

### ಸಂಥಿಂಗ್ ಫಿಶಿ

ಯಾವುದಾದರೂ ಸನ್ನಿವೇಶ/ವ್ಯವಹಾರ ಅನುಮಾನಸ್ಪದವಾಗಿ ಕಂಡುಬಂದಾಗ ಸಂಥಿಂಗ್ ಫಿಶಿ ಅಂತ ಪಿಸುಗುಟ್ಟೀರ. ನೇರ, ಸರಳ ಹಾಗೂ ಪ್ರಮಾಣಿಕವಾಗಿ ಜೀವಿಸುವ ಜಲಚರಗಳು ನಾವು ಭೂಮಿಯ ಮೇಲೆ ದುರ್ಬುದ್ಧಿಗಳಿಂದ ಏರ್ಪಡುವ ಅನುಮಾನಾಸ್ಪದ ಸನ್ನಿವೇಶಗಳಿಗೆ ನಮ್ಮ ಹೆಸರನ್ನೇಕೆ ಜೋಡಿಸುತ್ತೀರ?

### ಬಿಗ್ ಫಿಶ್ ಈಟಿಂಗ್ ಸ್ಮಾಲ್ ಫಿಶ್

ನಿಮ್ಮಲ್ಲಿನ ಬೃಹತ್ ಕಾರ್ಪೊರೇಷನ್‌ಗಳು ತಮ್ಮದೇ ಆದ ವಿವಿಧ ಕಾರಣಗಳಿಗೆ ಸಣ್ಣಸಣ್ಣ ಕಂಪನಿಗಳನ್ನು ಕಬಳಿಸಿದಾಗ ದೊಡ್ಡ ಮೀನು ಚಿಕ್ಕ ಮೀನನ್ನು ತಿಂದ ಹಾಗೆ ಎಂದು ವ್ಯಾಖ್ಯಾನ ಮಾಡುತ್ತೀರ. ನಮ್ಮಲ್ಲಿ ಕೆಲವೊಮ್ಮೆ ಅನಿವಾರ್ಯತೆಯಿಂದ ಹಾಗಾಗಬಹುದು ನಿಮ್ಮದೇನು ತಕರಾರು? ನಿಮ್ಮಂತಹ ನಿರ್ದಯಿ ಹಾಗೂ ಸ್ವಾರ್ಥಿಗಳ ಹೊಟ್ಟೆ ತುಂಬಿಸುವುದಕ್ಕಿಂತ ನಮ್ಮದೇ ಕುಲದ ದೊಡ್ಡಣ್ಣರ ಹೊಟ್ಟೆ ತುಂಬಿಸುವುದು ಎಷ್ಟೋ ಮೇಲು ಏನಂತೀರಾ?

### ಫಿಶಿಂಗ್ ಫಾರ್ ಸಂಥಿಂಗ್

ಯಾವುದಾದರೂ ಸನ್ನಿವೇಶ / ಸಂದರ್ಭ ಹಿಡಿತಕ್ಕೆ ಸಿಗದೇ ನೀವು ತಡಕಾಡುತ್ತಿರುವಾಗ ಆ ಪರಿಸ್ಥಿತಿಯನ್ನು ನಮಗೆ ಹೋಲಿಸುತ್ತೀರ. ಇರಬಹುದು ನಿಮ್ಮ ಗಾಳದಲ್ಲಿರುವ ಹುಳದ ಆಸೆಗೆ, ಮೇಲಾಗಿ ಆಹಾರಕ್ಕಾಗಿ ತಿನ್ನಲು ಯತ್ನಿಸಿ ಸಿಕ್ಕಿಬಿದ್ದು ಸಾಯುತ್ತೇವೆ. ಆದರೆ ಆ ಗಾಳದ ಇನ್ನೊಂದು ತುದಿಯಲ್ಲಿ ದೊಡ್ಡದೊಂದು ಹುಳ ಇರುವುದೆಂಬ ಕಲ್ಪನೆ ಸಹ ನಮಗಿರುವುದಿಲ್ಲ!

**ಫಿಶ್ ಸ್ಟೋರೀಸ್**

ಲೆಕ್ಕವಿಲ್ಲದಷ್ಟು ಸಮಯ ಹಾಳು ಮಾಡಿಕೊಂಡು ಆಗೊಮ್ಮೆ ಈಗೊಮ್ಮೆ ನಮ್ಮನ್ನು ನೀವು ಹಿಡಿದಾಗ ನಿಮ್ಮ ಮನೆಯವರಲ್ಲಿ, ಸ್ನೇಹಿತರಲ್ಲಿ ನಮ್ಮ ಆಕಾರವನ್ನು 10 ಪಟ್ಟು ಹೆಚ್ಚಿಸಿ ಹೇಳಿ ಜಂಭ ಕೊಚ್ಚಿಕೊಳ್ಳುತ್ತೀರ ಬಂಡವಾಳವಿಲ್ಲದ ಬಡಾಯಿಗಳು! ಬರಿಗೈಯಲ್ಲಿ ಮನೆಗೆ ವಾಪಸ್ಸು ಹೋಗಲು ಇರುಸುಮುರುಸಾಗಿ ಒಂದೆರಡು ಮೀನುಗಳನ್ನು ಖರೀದಿಸಿಕೊಂಡು ಹೋದ ಸಂದರ್ಭಗಳೇನು ಕಮ್ಮಿ ಇಲ್ಲ ಅಲ್ವೇ?

**ಸ್ಕೂಲ್ ಆಫ್ ಫಿಶ್**

ಆನೆಗಳಿಗೆ 'ಹರ್ಡ್ ಆಫ್ ಎಲಿಫೆಂಟ್ಸ್' ಪಕ್ಷಿಗಳಿಗೆ 'ಫ್ಲಾಕ್ ಆಫ್ ಬರ್ಡ್ಸ್' ಅಂತೀರ. ನಮ್ಮನ್ನು 'ಸ್ಕೂಲ್ ಆಫ್ ಫಿಶ್' ಅಂತೀರ. ಏನು ಕಾಮೆಡೀನಾ? ನಾವು ಶಾಲೆಗೆ ಹೋಗುವುದಿಲ್ಲ, ಹೌದು, ಹೋಗಬೇಕಾಗಿಲ್ಲ ರೀ. ಬುದ್ಧಿವಂತಿಗೆ ನಮ್ಮ ರಕ್ತದಲ್ಲಿಯೇ ಇದೆ. ನಮ್ಮನ್ನು ಪ್ರಧಾನ ಆಹಾರವಾಗಿ ಸೇವಿಸುವವರು ಸೇವಿಸದಿರುವವರಿಗಿಂತ ಬುದ್ಧಿವಂತರಾಗಿರುತ್ತಾರೆ ಎಂಬುದು ಎಳ್ಳಷ್ಟು ಸಂಶಯವಿಲ್ಲದೆ ಸಾಬೀತಾಗಿದೆ. ಆಗ್ಗಾಗ್ಗೆ ಮೀನು ತಿನ್ನುವುದರಿಂದ ಅವರುಗಳು ಬುದ್ಧಿವಂತರಾಗಿದ್ದಾರೆ ಎಂದು ವೋಡ್‌ಹೌಸ್ ಸಾರಿ ಸಾರಿ ಹೇಳುತ್ತಿದ್ದ. ಶಕ್ತಿಯುತವಾಗಿಟ್ಟಿರಲು ನಿಮ್ಮ ಮಕ್ಕಳಿಗೆ ಕಾಡ್ ಲಿವರ್ ಆಯಿಲ್ (ಮೀನಿನ ಎಣ್ಣೆಯನ್ನು) ಕೊಡುತ್ತೀರಲ್ಲವೇ? ಹ್ಹಿ ಹ್ಹಿ ಹ್ಹಿ...

**ಫಿಶಿಂಗ್**

ಹಲವಾರು ವಿಧಗಳಲ್ಲಿ ನಮ್ಮನ್ನು ಪರಿಹಾಸ, ಅಣಕು ಮಾಡುತ್ತಿದ್ದಾಗ್ಯೂ ನಮ್ಮನ್ನು ಹಿಡಿಯುವ ಕ್ರಿಯೆ ನಿಮಗೊಂದು ಕ್ರೀಡೆ ಹಾಗೂ ಹವ್ಯಾಸ ಅದಕ್ಕಾಗಿ ಗಂಟೆಗಟ್ಟಲೆ ಸಮಯವನ್ನು ಪೋಲು ಮಾಡುತ್ತೀರ. ಹೆಚ್ಚುಕಮ್ಮಿ ನೀವು ನಿಸರ್ಗದ ಜೊತೆಯೇ ಲೀನವಾಗಿ ಬಿಡುವಷ್ಟು! ಅಪ್ಪಿ ತಪ್ಪಿ ನಮ್ಮಲ್ಲಿ ಒಬ್ಬಿಬ್ಬರು ಯಾವಾಗಲೊಮ್ಮೊಮ್ಮೆ ಸಿಕ್ಕಿ ಬೀಳುತ್ತೇವೆ ಅಷ್ಟೆ ಸೋಂಬೇರಿತನದ ಪರಮಾವಧಿ!

**ಫಿಶ್ ಔಟ್ ಆಫ್ ವಾಟರ್**

ಪರಿಚಯವಿಲ್ಲದ ಸಂದರ್ಭ, ಸನ್ನಿವೇಶಗಳನ್ನು ನಿಭಾಯಿಸಲು ನೀವು ಅಶಕ್ತರಾದಾಗ **ಫಿಶ್ ಔಟ್ ಆಫ್ ವಾಟರ್** ಎಂದು ಹೇಳಿಕೆ ಕೊಡುತ್ತೀರಿ. ನಿಮ್ಮ ಈ ದುಸ್ಥಿತಿಗೆ ನಮ್ಮನ್ನು ಏಕೆ ಎಳೆಯುತ್ತೀರ? ನೈಸರ್ಗಿಕವಾದ ಆವಾಸಸ್ಥಾನದಲ್ಲಿ ನಾವು ಆರಾಮವಾಗಿದ್ದೇವೆ. ನಮ್ಮನ್ನು ಬಲವಂತವಾಗಿ ಅದರಿಂದ ಹೊರಗೆ ಹಾಕಿದರೆ ನಮಗೆ ಪರಿಚಯವಿಲ್ಲದ, ಸೂಕ್ತವಲ್ಲದ ಪರಿಸರಕ್ಕೆ ಏಕಾಏಕಿ ಹೊಂದಿಕೊಳ್ಳಲು ಸಾಧ್ಯವಿಲ್ಲದೆ ವಿಲಿವಿಲಿ ಎಂದು ಒದ್ದಾಡುತ್ತೇವೆ. ಅದರಲ್ಲಿ ಅತಿಶಯವೇನು? ಪ್ರಾಣಿಗಳ ಹಾಗೆ ನೀವುಗಳೇನು ನೈಸರ್ಗಿಕ ಈಜುಗಾರರಲ್ಲ ಕೆಲವರು ಕಷ್ಟಪಟ್ಟು ಈಜು ಕಲಿಯುತ್ತೀರಿ. ಮಿಕ್ಕವರೋ, ನಾಲ್ಕಡಿ ನೀರಲ್ಲಿ ಬಿದ್ದಾಗ ವಿಲಿವಿಲಿ ಎಂದು ಒದ್ದಾಡಿ ಕೈ, ಕಾಲು, ಬಾಯಿ ಕೂಡ ಬಡಿದುಕೊಂಡು ಅರಚುತ್ತೀರ ಹ ಹ್ಹ ಹ್ಹಾ! ಆಗ ನಾವೇನು ನಿಮ್ಮನ್ನು 'ಮಣ್ಣಿನಿಂದ ಹೊರಬಂದ ಮನುಷ್ಯ' ಎಂದು ಪರಿಹಾಸ್ಯ ಮಾಡುತ್ತೇವೆಯೇ?

✤

# ಇಂಟರೆಸ್ಟಿಂಗ್ ಇಂದ್ರ

**- ಗುಂಡುರಾವ್ ದೇಸಾಯಿ**

**ಕ**ಳೆದ ಎರಡು ವರ್ಷಗಳಿಂದ ಇಂದ್ರನ ಬಗ್ಗೆ ಸ್ಪೆಸಿಫಿಕ್ಕಾಗಿ ತಿಳಕೊಳ್ಳಲಿಕ್ಕೆ – ಮಾಡಲಿಕ್ಕೆ ಪ್ರಯತ್ನ ಮಾಡತಾ ಇದ್ದೀನಿ, ಸಾಧ್ಯವಾಗಲಿಲ್ಲ. ಅದಕ್ಕೆ ವಿಶ್ವಗುರು ಗೂಗಲ್‌ನಲ್ಲಿ ಸಿಗಬಹುದೇನೋ ಅಂತ ಸರ್ಚ್ ಮಾಡಿದ್ರೂ ಅವನ ಬಗ್ಗೆ ವಿಶೇಷವಿರದೆ ಶೇಷ ವಿಷಯಗಳೇ ಸಿಗತಾ ಇವೆ. ನನಗಂತೂ ಎಲ್ಲಾ ಕಾಲಕ್ಕೂ ಸಲ್ಲುವ ಪಕ್ಕಾ ಡಿಪ್ಲೋಮ್ಯಾಟ್ ವ್ಯಕ್ತಿ ಅಂದ್ರ ಇಂದ್ರ. ಇವನ ಲೈಫು, ಲೈಫ್‌ಸ್ಟೈಲೇ ಸ್ಪೆಷಲ್ಲು, ವೆರಿ ಇಂಟರೆಸ್ಟಿಂಗು. ಈ ಕಾಲದ ರಾಜಕಾರಣಿಗಳ ತರಹ ಸದಾ ಅಧಿಕಾರ, ಅಂತಸ್ತು, ವೈಭೋಗದಲ್ಲಿರಬೇಕೆಂದು ತಲ್ಲಣಿಸುವ ಆ ವ್ಯಕ್ತಿಯ ವ್ಯಕ್ತಿತ್ವ ವಂಡರ್ಫುಲ್.

ಇಂದ್ರ ಅದಿತಿ ಕಶ್ಯಪರ ಮಗ. ಸುರೇಶ, ದೇವೇಶ, ಸುರೇಂದ್ರ, ದೇವೇಂದ್ರ, ಸುರಪತಿ, ಶಚಿಪತಿ, ವಾಸವ, ಶಕ್ರ, ಪುರಂದರ ನಾಮಾಂಕಿತ, ದೇವತೆಗಳ ರಾಜ, ಮಳೆ ಹಾಗೂ ಮಿಂಚುಗಳ ಅಧಿದೈವ, ಸ್ವರ್ಗಾಧಿಪತಿ, ವೈಭೋಗ ವಿಲಾಸಿ. ಒಂದೇ ಮಾತಿನಲ್ಲಿ ಹೇಳಬಹುದಾದರೆ ನಮ್ಮ ಹಾಗೂ ನಮ್ಮ ಸುತ್ತಮತ್ತಲಿನಲ್ಲಿ ಕಾಣುವ ವ್ಯಕ್ತಿತ್ವದೊಳಗೊಬ್ಬ. (ಇಂದ್ರ ಒಂದು ಪದವಿ. ಪ್ರಬಂಧದಲ್ಲಿ ಪ್ರಸ್ತಾಪಿತ. ಇಂದ್ರನಿಗಿಂತಲೂ ಮನ್ವಂತರಕ್ಕೊಬ್ಬರಂತೆ ಐದು ಮಂದಿ ಇಂದ್ರರೂ ಆಗಿಹೋಗಿದ್ದಾರಂತೆ. ಆದರೆ ಎಲ್ಲೂ ಅವರ ಪರಿಪೂರ್ಣ ಮಾಹಿತಿ ಸಿಗಲ್ಲ. ಕೆಲವೆಡೆ ಹದಿನಾಲ್ಕು ಮಂದಿ ಇಂದ್ರರೂ ಆಗಿಹೋಗಿದ್ದಾರೆಂದು ತಿಳಿಯುತ್ತದೆ.) ಈ ಬುದ್ಧಿಜೀವಿಗಳು ಏನು ಹೊಡಕೊಂಡ್ರು ನಾನು ರಾಮಾಯಣ, ಮಹಾಭಾರತ, ಭಾಗವತನ ಪ್ರೀತಿಸ್ತೀನಿ. ಅಲ್ಲಿರುವ ಪಾತ್ರಗಳು ಹಿಂದೆ, ಇಂದು, ಮುಂದು ಕಾಣುವ ಪಾತ್ರಗಳೆ. ಅದು ನಡದಾಡೋ ಇಲ್ಲ ಕಟ್ಟಿಕೊಂಡು ಏನಮಾಡಬೇಕಾಗ್ಯಾದ. ಆದರೆ ಅಧ್ಯಯನ ಮಾಡಿದ್ರೆ ಬದುಕನ್ನು ಬದಲಿಸಿಕೊಳ್ಳಬಹುದಲ್ಲ, ಇರಲಿ ಇಂದ್ರನ ವಿಷಯವೂ ಹಾಗೆ. ನನ್ನ ಸೀಮಿತ ತಿಳುವಳಿಕ್ಯಾಗ ಇವ ಒಳ್ಳೆ ಕೆಲಸ ಮಾಡಿದ್ದಂತೂ ಕಾಣೆ. ಸದಾ ಕುರ್ಚಿ ಬಗ್ಗೆ ಚಿಂತಿ ಮಾಡುವಂತಹ ಕ್ಯಾಂಡಿಡೇಟು. ಏನಾದ್ರೂ ಎಡವಟ್ಟು ಮಾಡಿಕೊಳ್ಳೋದು, ಸೋತು ಹೈಕಮಾಂಡಿನ ಹತ್ತಿರ ಓಡಿಹೋಗೋದು. ಅವರ ರೆಕಮೆಂಡ ಮ್ಯಾಲೆ ಮತ್ತೆ ಕುರ್ಚಿ ಹಿಡಿಯೋದು.

ಪುರಾಣದ ಇತಿಹಾಸದಾಗ ಈತ ಮಾಡಿದ ಅನಾಹುತ, ಕೆಟ್ಟ ಕಾರ್ಯ ನೋಡಿದ್ರ ಹೇಸಿಗೆ ಬರದೆ ಇರದು. ಮಾಡಬಾರದ್ದನ್ನೆಲ್ಲ ಮಾಡಿ ದಕ್ಕಿಸಿಕೊಂಡ ವ್ಯಕ್ತಿ. ಥೇಟು ಈಗಿನ ಪವರಫುಲ್ ರಾಜಕಾರಣಿಗಳ ತರಹ. ಬ್ರಹ್ಮ, ವಿಷ್ಣು, ಮಹೇಶ್ವರ ಅದೇನು ನೋಡಿ ಇವನ ಸಹಾಯಕ್ಕ ಬರೋರು ಅವರಿಗೆ ಗೊತ್ತು. ಹಿರಣ್ಯಕಶಪು ಸ್ವರ್ಗನ್ನ ಆಕ್ರಮಿಸಿದಾಗ ಆತನ ಹೆಂಡತಿಯನ್ನ ಕಿಡ್ನಾಪ ಮಾಡಿ ಹೊಟ್ಟೆಯಲ್ಲಿ ಅವನಂತವನು ಬೆಳೆಬಾರದಂತ, ಹೆಣ್ಣು ಎಂಬುದನ್ನು ಗಮನಿಸದೆ ದರದರ ಎಳೆದುಕೊಂಡು ಹೋದ ವ್ಯಕ್ತಿ. ಅಲ್ಲಿ ಹುಟ್ಟಾವ ಪ್ರಹ್ಲಾದ ದೇವಾಂಶ ಸಂಭೂತ. ನೀನು ಚಿಂತೆ ಮಾಡಬೇಡ ನಾನು ಗರ್ಭದೊಳಗಿನ ಕೂಸಿನ ಮನಸ್ಸು ಟರ್ನ ಮಾಡ್ತಿನಿ ಅಂತ ನಾರದ ಕರಕೊಂಡು ಹೋಗಿ ಹರಿಭಕ್ತಿ ತಿಳಿಸಿ ಹರಿಭಕ್ತ ಜನಿಸಿ ಅಪ್ಪಗ ಕಂಟಕ ಆಗುವ ಹಾಗೆ ಮಾಡಿದ.

ಪಕ್ಕದಲ್ಲಿ ವಲ್ಲಭೆ ಶಚಿದೇವಿ, ಆಸ್ಥಾನದಾಗ ರಂಭೆ, ಊರ್ವಶಿ, ಮೇನಕೆ, ತಿಲೋತ್ತಮೆ ಒಂದ ಎರಡ ಎಷ್ಟು ಮಂದಿ ಇದ್ದರೂ ಎಷ್ಟು ಭೋಗದ ಚಟ ಅನ್ನಬೇಕು. ಅದೂ ಗುರುಪತ್ನಿ

ಮೇಲೆ ಕಣ್ಣು ಹಾಕೋದೆ. ಅಹಲ್ಯೆಯ ಸೌಂದರ್ಯಕ್ಕೆ ಮಾರುಹೋದ ಇಂದ್ರ ಮಾಡಿದ್ದಾದ್ರೂ ಎಂತಾ ಕುತಂತ್ರ. ಕೋಳಿ ರೂಪಾದಾಗ ಹೋಗಿ ಮಧ್ಯರಾತ್ರಿನ ಕೂಗಿ ಗೌತಮನ ಎಬ್ಬಿಸಿ, 'ಅಯ್ಯೋ ಬೆಳಗಾಯ್ತು' ಅಂತ ತಿಳಿದು ನದಿಗೆ ಆಹ್ನಿಕ ಕರ್ಮಾದಿಗಳ ಸಲುವಾಗಿ ತೆರಳಿದಾಗ ಮೆಲ್ಲಗ ಗೌತಮನ ರೂಪದಲ್ಲಿ ಬಂದು ಕೆಲಸ ಸಾಧಿಸಿ ಹೋದ. ಇನ್ನೂ ಬೆಳಗಾಗಿಲ್ಲ ಎಂದರಿತ ಗೌತಮ ಮನೆಗೆ ಬಂದು ಮಲಗಿಕೊಳ್ಳಲು ನಿದ್ದಿ ಹತ್ತದೆ ಅಹಲ್ಯೆಯ ಮೇಲೆ ಕೈಹಾಕಿದಾಗ 'ಏನ್ರಿ ನಿಮ್ಮದು ಮತ್ತೇನಾ?' ಅಂದದಕ್ಕೆ ಸಿಟ್ಟಿಗೆದ್ದು ಪೂರ್ವಜ್ಞಾನದಿಂದ ಅರಿತ ಗೌತಮ ಮಾಡಿದ್ದಾರೂ? ಏನನ್ನು? ಅಹಲ್ಯೆಗೆ ಕಲ್ಲಾಗೆಂದು ಶಾಪಕೊಟ್ಟ, ಪಾಪ ಆಕೆ ಮಾಡಿದ ತಪ್ಪಾದರೂ ಏನೂ...? ಮೋಸಹೋದದ್ದಕ್ಕಾಗಿ ಮತ್ತೆ ಶಾಪದಿಂದ ಮೋಸ ಹೋಗಬೇಕಾಯಿತು. ನನಗನಸ್ತಾದ ಈ ಅಹಲ್ಯೆ, ಸೀತಾ, ದ್ರೌಪದಿ, ತಾರಾ, ಮಂಡೋಧರಿ ಇವರಿಗೆಲ್ಲ ಪಂಚಪತೀವ್ರತೆಯರ ಹೆಸರು ಬರಬೇಕಾದ್ರೆ ಇವರು ಪತಿಗಳ ಕಿರುಕುಳ ತಡೆದುಕೊಂಡದಕ್ಕಾಗಿಯೇನೊ? ಗೌತಮ ಇಂದ್ರಗ ಸಹಸ್ರಾಕ್ಷ ಅಂತ ಏನೋ ಶಾಪಕೊಟ್ಟನಂತ. (ಕಾಮುಕನಾಗಿ ಮೋಸದಿಂದ ಭೋಗಿಸಿದ ನಿನ್ನ ಮೈತುಂಬಾ ಶಿಶ್ನಗಳೆ ಆಗಲಿ ಎಂದು ಶಾಪವಿಟ್ಟನಂತೆ) ಹಾಂಗ ಆಗಿದ್ರ ಅವನ್ನ ಯಾರು ಸ್ವರ್ಗದಾಗ ಇಟ್ಟುಕೊಳ್ಳಬಾರದಾಗಿತ್ತು. ಪುರುಷ ಪ್ರಧಾನ ಸಮಾಜ ಅಲ್ವಾ? ಆ ಶಾಪನ ಸಹಸ್ರ ಕಣ್ಣುಗಳು ಅಂತ ಚೇಂಜು ಮಾಡಿದ್ರೇನೊ? ಸಹಸ್ರಾಕ್ಷ ಅಂತ ಬೇರೆ ಬಿರುದು ಆ ಮಹಾರಾಯಾಗ.

ನಮ್ಮ ಈಗಿನ ನಾಯಕರು ಪಕ್ಷ ಸೋತರ ಆಸೆ ಇದ್ರೂ ಅನಿವಾರ್ಯಕ್ಕಾದ್ರೂ ಬಿಟ್ಟು ಕೊಡತಾರ ಇಲ್ಲದೆ ಇದ್ರ ಹೊರಗ ಅಟ್ಟತಾರಲ್ಲ! ಆದರೆ ದೇವೇಂದ್ರ ಕಾಯಾವಾಚಾಮನಸಾ ಕನಸು ಮನಸ್ಸಿನಲ್ಲೂ ಕುರ್ಚಿಬಿಟ್ಟುಕೊಡಬೇಕು ಅಂತ ಮನಸ್ಸು ಮಾಡಿದವನಲ್ಲ. ತನ್ನ ಪ್ರತಿಸ್ಪರ್ಧಿಗಳು ಹುಟ್ಟಿದಾಗಲೆಲ್ಲಾ ತನ್ನ ಸಿಬ್ಬಂದೀನ ಕಳಿಸಿ ತಪಸ್ಸು ಹಾಳುಮಾಡಿಯೋ? ರಂಭೆ, ಊರ್ವಶಿ, ಮೇನಕೆ ಮೊದಲಾದ ಅಪ್ಸರೆಯನ್ನು ಕಳಿಸಿ ಮನಸ್ಸನ್ನು ಚಂಚಲಗೊಳಿಸಿಯೋ? ಹೈಕಮಾಂಡರಿಗೆ ಒಸೂಲಿ ಹಚ್ಚಿಯೋ? ಕುರ್ಚಿ ಗಟ್ಟಿಮಾಡಿದ್ದಂತೂ ಸತ್ಯ. ಹಿಂದಕ ನೂರ ಯಾಗ ಮಾಡಿದವರಿಗೆ ಇಂದ್ರ ಪದವಿ ಸಿಗುತ್ತಿತ್ತಂತೆ. ಪೃಥುಚಕ್ರಿ ಅನ್ನೋ ರಾಜ ತೊಂಬತ್ತೊಂಬತ್ತು ಯಾಗ ಮಾಡಿದ ಮ್ಯಾಗ ಇಂದ್ರಗ ಪುಕುಪುಕು ಸ್ಟಾರ್ಟ ಆಯ್ತು. ಅವ ನೂರನೇ ಯಾಗಕ್ಕ ಕೈ ಹಚ್ಚಿದಾಗ ಇಂದ್ರಗ ಹೊಟ್ಟಿ ಕೆರೆಕ ಸ್ಟಾರ್ಟ ಆತು. ಯಜ್ಞ ಹಾಳ ಮಾಡಬೇಕು ಅಂತ ಯಾಗದ ಕುದರೆನ್ನ ಕಿಡ್ನಾಪ್ ಮಾಡಿದ. ಅತ್ರಿ ಮುನಿಗೆ ಗೊತ್ತಾತು. ಕೊಲ್ಲು ಎಂದ ರಾಜಗ. ಪೃಥು ಮಗನ್ನ ಕಳಿಸಿದ. ಅಂಜಿಕೊಂಡ ದೇವೇಂದ್ರ ಜಟಿಯನ್ನು ಧರಿಸಿ, ವಿಭೂತಿಯನ್ನು ಧರಿಸಿ ಮಹಾತ್ಮನಂತೆ ವೇಷ ತೊಟ್ಟಾಗ ಮಗ ಕೊಲ್ಲಲು ಅಂಜಿದ. ಅತ್ರಿ 'ಅವನ ಕಳ್ಳ ಹೊಡಿ ಅಂಜಬ್ಯಾಡ' ಅಂದ. ಇಂದ್ರ ಹೆದರಿ ಆ ವೇಷ ಕಳಚಿ ಕುದರೆ ಬಿಟ್ಟು ಓಡಿ ಹೋದ. ಯಾಗ ಏನ ಮುಂದುವರಿತು ಆದರ ಇಂದ್ರಗ ನಿದ್ದೆ ಹತ್ತಲಿಲ್ಲ. ಅವ ಮಾಯೆಯಿಂದ ಕತ್ತಲು ಕವಿಯೋ ಹಾಂಗ ಮಾಡಿ ಕುದರೇನ ಮತ್ತೆ ಕಿಡ್ನ್ಯಾಪ್ ಮಾಡಿದ. ಅತ್ರಿ ಮುನಿ ಇವಂದೆ ಕೆಲಸ ಅಂತ ಪತ್ತೆಹಚ್ಚಿ ಪೃಥುನ ಮಗನ್ನ ಬೆನ್ನಟ್ಟು ಎಂದು ಆದೇಶಿಸಿದ. ಈ ಬಾರಿ ಇಂದ್ರ ಕೈಯಲ್ಲಿ ಕಪಾಲ ಡಮರುಗಳನ್ನು ಧರಿಸಿದ ಕಾಪಾಲಿಕನಂತೆ ಕಾಣಿಸಿಕೊಂಡ. ಆದರೆ ಅತ್ರಿ ಮುನಿ 'ನೀನು ಮರುಳಾಗಬೇಡ, ಹೊಡಿ ಬಿಡಬೇಡ' ಎಂದಾಗ ಉಳಿಗಾಲವಿಲ್ಲವೆಂದು ಇಂದ್ರ ತನ್ನ ವೇಷವನ್ನು, ಕುದರೆಯನ್ನು ತೊರೆದು ಮಾಯವಾದ. ಇವ ಮಾಡಿದಾಂಗ ಈಗಿನವರು 'ಮಹಾತ್ಮ' ಎಂಬ ಭ್ರಾಂತಿ ಹುಟ್ಟಿಸಿ ಜನರನ್ನು ಮರಳು ಮಾಡತಾರಲ್ಲ, ಒಮ್ಮೊಮ್ಮೆ ಜನರ ಕೈಗೆ,

ಮಾಧ್ಯಮದವರಿಗೆ ಸಿಕ್ಕಿಹಾಕಿಕೊಂಡು ಗೂಸಾ ತಿಂತಿರತಾರಲ್ಲ ಅಂತಹ ಜನಾಂಗದ ಸೃಷ್ಟಿಕರ್ತನು ನಮ್ಮ ಇಂದ್ರ. ಆತ ಹಿಂದ ಮಾಡಿದ್ದನ್ನ ಇವರು ಮಾಡಕತಾರ.

ಎರಡು ಸಾರಿ ಯಜ್ಞನ ಹಾಳಮಾಡಕ ಸ್ಕೆಚ್ ಹಾಕಿದ ಇಂದ್ರನ ಬಗ್ಗೆ ಪೃಥುವಿಗೆ ಎಷ್ಟು ಸಿಟ್ಟು ಬರಲಿಕ್ಕಿಲ್ಲ. ತೊಂಬತ್ತೊಂಬತ್ತು ಸಕ್ಸಸ್‌ಫುಲ್ ಯಾಗ ಮಾಡಿ ಸಿಕ್ಕಾಪಟ್ಟೆ ಪವರ್ ಪಡೆದಿದ್ದ ಪೃಥು ಬಿಲ್ಲು ಹಿಡಿದು ಬಾಣಬಿಡಾಕ ರೆಡಿಯಾದ. ''ಬೇಡಪ್ಪ ಈಗಾಗಲೆ ನಿನ್ನ ಕೀರ್ತಿಯ ಬೆಳಕಾಗ ಸತ್ತಂಗಾಗ್ಯಾನ. ನಾವು ನಮ್ಮ ಮಂತ್ರದಿಂದ ಅವನ್ನ ಸೆಳೆದು ಅಗ್ನಿಗೆ ಆಹುತಿ ನೀಡತಿವಿ'' ಅಂತ ನೆರೆದ ಋಷಿಗಳು ಯಾಗ ಸುರು ಹಚ್ಚಿಕೊಂಡ್ರು. ಇಂದ್ರ ಹೈಕಮಾಂಡಗ ಫೋನ ಹಾಯಿಸಿದ. ಬ್ರಹ್ಮ ಪ್ರತ್ಯಕ್ಷನಾಗಿ ''ಋಷಿಗಳಿಗೆ ನೂರಕ್ಕ ಒಂದು ಕಡಿಮೆ ಇರೊ ಯಾಗ ಮಾಡಿ ಇವ ಅವನಿಗಿಂತಲೂ ಹಿರಿಯನಾಗ್ಯಾನ. ಇಂದ್ರ ಅಪಕೀರ್ತಿಯಿಂದ ಸತ್ತಾಂಗ ಆಗ್ಯಾನ. ಸತ್ತವನ್ನ ಮತ್ತೆ ಸಾಯಿಸೋದು ಸರಿ ಅಲ್ಲ'' ಅಂತ ಹೇಳಿ ''ಪೃಥು ಮೋಕ್ಷಾಪೇಕ್ಷಿ ಹಾಗಾಗಿ ಈ ಯಾಗ ನಿಲ್ಲಿಸಿ'' ಎಂದು ಮನವೊಲಿಸಿ ಇಂದ್ರನ ಬಚಾವ ಮಾಡಿ, ''ಮಗನ ನಿನ್ನ ಹಣೆಬರಹನ ಇಷ್ಟಾತು, ಅಡ್ಡಬಿದ್ದು ಕ್ಷಮೆ ಕೇಳು'' ಅಂತ ಈಗಿನ ಪಿಕ್ಚರನ್ಯಾಗ ಸೋತ ವಿಲನ್‌ನ ಹಿರೋನ ಪಾದಕ್ಕ ಬೀಳಸ್ತಾರಲ್ಲ ಹಾಂಗ ಅಡ್ಡಬೀಳಿಸಿ ಕಾಂಪ್ರಮೈಜ್ ಮಾಡಿಸಿ ಸೀಟ್‌ನ ಸೇಫ್ ಮಾಡಿದ.

ದೇವೇಂದ್ರ ಸ್ವರ್ಗಾಧಿಪತಿ ಅಷ್ಟ ಕೈಯಲ್ಲಿ ಏನು ಆಗದಾವ. ಸಂಕಟ ಬಂದಾಗ ವೆಂಕಟರಮಣ ಅನ್ನೋ ಮಾತು ಇಂದ್ರನಿಗೆ ಸೇರಿಸಿ ಇಟ್ಟಿದ್ದೇನೊ. ಶೂರಪದ್ಮಾಸನ ಅನ್ನೊ ರಾಕ್ಷಸನಿಂದ ನೆಟ್ಟಗ ಪತ್ನಿ ಶಚಿದೇವಿನ ರಕ್ಷಿಸಿಕೊಳ್ಳದ ಶೂರ.. ಆಗಲೂ ಕಾಪಾಡಕ ಹರಿ ಬರಬೇಕಾತು. ಮಹಿಷಾಸುರ ಭಿಕಾರಿ ಮಾಡಿದಾಗಲೂ ಕಾಪಾಡಕ ಆದಿಶಕ್ತಿ ಬರಬೇಕಾಯಿತು. ಹಿಂಗ ಒಂದು ಸಾರಿ ಸೊಕ್ಕಿನಾಗ ಹೆಂಡತಿ ಜೊತಿ ಕುಳಿತು ಮೆರಿತಿರಬೇಕಾದ್ರೆ ಆಸ್ಥಾನದಾಗ ದೇವಗುರು ಬ್ರಹಸ್ಪತಿಗಳು ಬಂದ್ರು. ಮದ ಮುಚ್ಚಿತ್ತು. ಗುರುಗಳು ಬಂದ್ರು ಕ್ಯಾರೆ ಅನ್ನಲಿಲ್ಲ. ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಅಂತ ಸುಮ್ಮನೆ ಹೇಳಿಲ್ಲ. ಇವರು ದಾರಿಬಿಟ್ರು. ತಪ್ಪು ಗೊತ್ತಾಗಿ ಗುರುಗಳಿಗಾಗಿ ತಡಕಾಡಿದ. ಅಷ್ಟೊತ್ತಿಗೆ ರಾಕ್ಷಸರಿಗೆ ಗೊತ್ತಾಗಿ ಸ್ವರ್ಗದ ಮೇಲೆ ಅಟ್ಯಾಕ ಮಾಡಿ ಕಬ್ಜಾ ಮಾಡಿಕೊಂಡ್ರು. ಹೈಕಮಾಂಡ ಬಳಿ ಹೋದ ''ಗುರುದೂಷಣೆ ಮಾಡಿದಕ್ಕಾಗಿ ನಿನಗ ಈ ಪರಿಸ್ಥಿತಿ ಬಂದದ. ಅವರನ್ನ ಜಯಿಸಬೇಕಾದರ ಒಬ್ಬ ಗುರು ಬೇಕು. ವಿಶ್ವರೂಪ ಅಂತ ಮಹಾತಪಸ್ವಿ ಇದ್ದನ ಅವನ್ನ ಗುರುವಾಗಿ ನೇಮಕ ಮಾಡಿಕೊಳ್ಳಿ. ಆತ ರಾಕ್ಷಸಿಯ ಮಗ, ಸಹಜವಾಗಿ ಅವರಿಗೆ ಪಕ್ಷಪಾತಿಯಾಗಿರತಾನ. ಕಾರ್ಯವಾಸೆ ಕತ್ತೆಕಾಲು ಹಿಡಿದುಕೊಳ್ಳಲೇಬೇಕು ಸಹಿಸಿಕೊಳ್ಳಬೇಕು'' ಎಂದು ಹೇಳಿದ. ಪುರೋಹಿತ ವೃತ್ತಿ ನೀಚಕಾರ್ಯ, ಬ್ರಹ್ಮ ತೇಜಸ್ಸನ್ನು ನಾಶ ಮಾಡತ್ತೆ ಅಂತ ಗೊತ್ತಿದ್ರೂ ವಿಶ್ವರೂಪ ಹಿರಿಯರು ಬಂದು ಕೇಳುತ್ತಿದ್ದಾರೆ ಎಂಬುದಕ್ಕೆ ಅಸ್ತು ಅಂದ. 'ನಾರಾಯಣ ಕವಚ' ಎಂಬ ಮಂತ್ರವಿದ್ಯೆಯಿಂದ ದೇವತೆಗಳ ಸಂಪತ್ತನ್ನೆಲ್ಲ ಪುನಃ ಕೊಡಿಸಿದ. ವಿಶ್ವರೂಪನ ಅಪ್ಪ ದೇವಕುಲದವ, ಅಮ್ಮ ದಾನವ ಕುಲದಾಕಿ. ಹವಿಸ್ಸು ಕೊಡುವಾಗ ದೇವತೆಗಳ ಹೆಸರನ್ನು ಕೂಗಿ ಒಳಗೊಳಗ ತನ್ನ ತಾಯಿಯವರ ಕಡೆಗೂ ಕೊಡತಿದ್ದ. ಇದು ಇಂದ್ರಗ ಗೊತ್ತಾತು. ಆಪತ್ಕಾಲದಲ್ಲಿ ಗುರುವಾಗಿ ಕಾಪಾಡಿದವನು ಎಂಬ ಕನಿಷ್ಠ ಮುಲಾಜಿ ಇಲ್ಲದೆ ಗುರುವನ್ನೇ ಕತ್ತರಿಸಿದ. ಈ ಸುದ್ದಿ ವಿಶ್ವರೂಪನ ಅಪ್ಪಗ ಗೊತ್ತಾತು. ಒಳ್ಳೆಯದನ್ನು ಮಾಡಿದ ಮಗನಿಗೆ ಎರಡು ಬಗೆದ ಇಂದ್ರನ ಬಿಡಬಾರದೆಂದು ಯಾಗ ಕೈಗೊಂಡು ವೃತಾಸುರನನ್ನು ಸೃಷ್ಟಿಸಿದ. ಅವಾ ಅಟ್ಟಾಡಿಸಿಕೊಂಡು ಬಂದ. ಮತ್ತೆ ಇವ ಹೈಕಮಾಂಡ ಕಡೆ ನಡೆದ. ಹರಿ ಬೈದು ''ನಿಜವಾದ ಭಕ್ತ ನನ್ನನ್ನು ಹೊರತು ಏನನ್ನು

ಬೇಡುವುದಿಲ್ಲ. ನಿನಗ ಬುದ್ಧಿ ಇಲ್ಲ, ನನಗ ಬಿಡುಗಡೆ ಇಲ್ಲ. ಅವನ್ನ ಕೊಲ್ಲೋದು ನನ್ನಿಂದ ಆಗದ ಕೆಲಸ. ನೀನೆ ಕೊಲ್ಲಬೇಕು ಅದಕ್ಕ ನೀನು ದಧೀಚಿ ಹತ್ರಹೋಗು. ಆತನ ಅಸ್ತಿ ಬೇಡು ವಿಶ್ವಕರ್ಮನ ಸಹಾಯದಿಂದ ವಜ್ರಾಯುಧ ಮಾಡಿಸಿಕೊಂಡು ಅವನನ್ನು ಇರಿ ಆಗ ಅವ ಸಾಯ್ತನ'' ಅಂತ ಹೇಳಿದ್ರು. ಬಹುಶಃ ''ನಿನ್ನ ಟೈಮುಗಿಯಾಕ ಬಂದದ ನಿನ್ನ ಹುದ್ದೆಯಿಂದ ನಿರ್ಗಮಿಸು'' ಎಂದು ಹೇಳಿದಾಂಗ ಇತ್ತೇನೊ? ಆದರ ಖೊಡಿ ಇಂದ್ರಗ ಬದುಕೊ ಆಸಿ. ಮಹಾನ್ ಗುರುಗಳಾದ ದಧೀಚಿ ಹತ್ರ ತಾನು ಬದುಕೊ ಸಲುವಾಗಿ ದೇಹದ ಮೂಳೆ ಬೇಡಿದ. ದಧೀಚಿಗೆ ನಗು ಬಂತು. ದೇಹದ ಮಹತ್ವ ತಿಳಿಸಿದ ಅರ್ಥ ಆಗಲಿಲ್ಲ, ಸ್ವಾರ್ಥ ಮಿಗಿಲಾಗಿತ್ತು. ದೇಹ ತ್ಯಜಿಸಿದ. ಅವರ ಮೂಳೆಯಿಂದ ವಜ್ರಾಯುಧ ರೆಡಿ ಆತು. ಕೈಯಲ್ಲಿ ಹಿಡಿದ. ಇಂದ್ರನಲ್ಲಿ ಮಹರ್ಷಿ ತೇಜಸ್ಸು ಹೊಕ್ಕಂತು. ರಾಕ್ಷಸರನ್ನ ಅಟ್ಟಾಡಿಸಿ ಹೊಡದ್ರು. ವೃತಾಸುರ 'ಅವರನ್ನ ಯಾಕ ಬೆನ್ನು ಹತ್ತಿರೋ ನನ್ನತ್ರ ಬಾ' ಅಂತ ದೇವತೆಗಳನ್ನೆಲ್ಲ ಹಣ್ಣುಗಾಯಿ ನೀರುಗಾಯಿ ಮಾಡಿದ. ಇಂದ್ರನ ಐರಾವತಕ್ಕೆ ಕುಕ್ಕಿದ, ಓಡಿಹೋಯಿತು. ಇಂದ್ರನಿಗೂ ಇಕ್ಕಿದ ಆದರೂ ಗುರುಹತ್ಯೆ, ಬ್ರಹ್ಮ ಹತ್ಯೆ ಮಾಡಿದ ಮಹಾಪಾಪಿಯೊಂದಿಗೆ ಯುದ್ಧ ಮಾಡಲು ಅಸಹ್ಯವೆನಿಸಿತು. ವಜ್ರಾಯುಧದಿಂದ ದೂರವಾಗಿ ಗದ್ಗದತನಾಗಿ ನಿಂತ ಇಂದ್ರನಿಗೆ ತನ್ನನ್ನು ಸಂಹರಿಸಲು ಹೇಳಿದ. ಇಂದ್ರ ಕೈಕಾಲು ಕತ್ತರಿಸಿದ. ವೃತಾ ಐರಾವತ ಹಾಗೂ ಇಂದ್ರನನ್ನು ಒಂದೇ ತುತ್ತಿಗೆ ನುಂಗಿದ. ನಾರಾಯಣ ಕವಚ ಮಂತ್ರ ಸಿದ್ಧಿ ಪಡೆದಿದ್ದರಿಂದ ವಜ್ರಾಯುಧದಿಂದ ಹೊಟ್ಟೆ ಬಗೆದು ಇಂದ್ರ ಹೊರ ಬಂದ. ಇಷ್ಟು ಕಥಿ. ಈ ಕಥೆಗ ನಿಜವಾದ ಹಿರೋ ಯಾರು? ನನಗಂತೂ ವೃತಾಸೂರನ ಕಾಣ್ತಾನ. ಇಂದ್ರ ಪಕ್ಕಾ ಸ್ವಾರ್ಥಿ ಸಮಯಸಾಧಕನಾಗಿ ಕಾಣ್ತಾನ.

ಸೇಮ್ ಕೇಸು ಬ್ರಹ್ಮಸ್ಪತಿಗೆ ಆದಂಗ ದುರ್ವಾಸರಿಗೂ ಆತು. ಆನೆ ಮೇಲೆ ಕುಳಿತು ಬರತಿದ್ದ ಇಂದ್ರನ ಕಂಡ ದುರ್ವಾಸರು ಆಶೀರ್ವಾದಪೂರ್ವಕವಾಗಿ ಕೊರಳಲ್ಲಿದ್ದ ಹಾರವನ್ನು ಇಂದ್ರನಿಗೆ ಕೊಟ್ಟರು. ಇವ ಮಾಡಿದ್ದೇನು ಸೊಕ್ಕು ಮತ್ತು ಅಸಡ್ಡೆಯಿಂದ ಆನೆಯ ನೆತ್ತಿಯ ಮೇಲೆ ಎಸೆದ. ಅದು ಕೆಳಗೆ ಬಿದ್ದಾಗ ಆನಿ ಹೊಸಗಿ ಹಾಕಿತು. ಮೊದಲೇ ದುರ್ವಾಸರು. ಕೇಳಬೇಕೆ. ಕ್ರೋಧದಿಂದ 'ನಿನ್ನ ಅಧಿಕಾರ, ಐಶ್ವರ್ಯ ಹಾಳಾಗಿ ಹೋಗಲಿ' ಎಂದು ಶಾಪ ಕೊಟ್ಟರು. ರಾಕ್ಷಸರು ಅಟ್ಯಾಕ ಮಾಡಿದ್ರು. ಎಲ್ಲಾ ಕಳಕೊಂಡು ಓ........! ಅಂತ ತನ್ನ ಬಳಗನ್ನ ಕರಕೊಂಡು ವಿಷ್ಣುವಲ್ಲಿಗೆ ಬಂದ. ಇವನ ಗೋಳು ನೋಡಲಾರದ ನಿಮಗ ಮುಪ್ಪು ಸಾವು ಇರದ ಹಾಗೆ ಅಮೃತ ಕುಡಿಯುವಂತಿರಿ. ಉಪಾಯದಿಂದ ರಾಕ್ಷಸರೊಂದಿಗೆ ಸಂಧಾನ ಮಾಡಿಕೊಂಡು ಸಮುದ್ರ ಮಂಥನ ಮಾಡಕ ಸಿದ್ಧರಾಗರಿ ಅಂತ ಇವನ ಕಾರಣಕ್ಕ ಸಮುದ್ರ ಮಂಥನ ನಡಿಬೇಕಾತು. ಪಾಪ ಶಿವಾ ನೀಲಕಂಠನಾಗಬೇಕಾಯಿತು. ಇಂದ್ರನ ಪರಿವಾರಕ್ಕಾಗಿ ಅಸುರರಿಗೆ ಮೋಹಿನಿ ಆಟ ಆಡಿಸಿ ಹರಿ ಅಮೃತ ಕುಡಿಸಬೇಕಾದ ಅನಿವಾರ್ಯತೆ ಬಂತು. ಮುಂದೆ ಬಲಿನೂ ಸ್ವಸಾಮರ್ಥ್ಯದಿಂದ ಇಂದ್ರಪದವಿಗೇರಲು ನೂರಾನೇ ಯಾಗ ಮಾಡತೊಡಗಿದಾಗಲೂ ಹೈಕಮಾಂಡ ಮೇಲೆ ಒತ್ತಡ ತಂದ. ಹರಿನ ವಾಮನ ರೂಪದಾಗ ಕಳಿಸಿ ಮೂರು ಹೆಜ್ಜೆ ಜಾಗದ ದಾನದ ಮೂಲಕ ಬಲಿ ಚಕ್ರವರ್ತಿಯನ್ನು ಇಲ್ಲವಾಗುವ ಹಾಗೆ ಮಾಡಿದ. ಇಲ್ಲಿನ ಹಿರೋನೂ ಬಲಿನ.

ಇನ್ನೂ ಇಂದ್ರಂದು ಎಂತಹ ಗುಣ ಇರಬೇಕು. ಒಲ್ಲೆ ಅಂದೋರ ಹಿಂದ ಬೀಳವ. ಬೇಕು ಅಂತ ದುಂಬಾಲ ಬಿದ್ದೋರಿಗೆ ಕಾಡಾವ. ನಾನು ಇಂದ್ರನ ಬಗ್ಗೆ ಓದಿದ ಪೈಕಿ ನನಗ ದೇವೇಂದ್ರನ್ನ ಮದುವಿ ಮಾಡಿಕೊಂತಿನಿ ಅಂತ ಹಠ ಹಿಡದಾಕಿ ಭಾರಧ್ವಜ ಋಷಿಗಳ ಮಗಳು

ಸ್ವಚಾವತಿ ಅಂಬಾಕಿ. ಆಕಿಗೇನು ಗ್ರಹಚಾರ ಬಡದಿತ್ತೋ ಈ ಲಂಪುಟನ ವರಸಾಕ! ಆದರ ಒಪ್ಪಿದನೇರಿ? ನೋ ಚಾನ್ಸ್. ಘೋರತಪಸ್ಸಿಗೆ ಕುಳಿತುಕೊಳ್ಳತಾಳ. ಆಗಲೂ ಬೇಕಂತ್ರ ಪರೀಕ್ಷಾ ಮಾಡಾಕ ಬ್ರಾಹ್ಮಣ ವೇಷದಾಗ ಬರತಾನ. ಇಷ್ಟಾರ್ಥ ಸಿದ್ಧಿಯಾಗಬೇಕಂದ್ರ ಬೇಯದ ಬೀಜಗಳನ್ನು ಕೊಟ್ಟು ಬೇಯಿಸಿ ತಿನ್ನು ಅಂತ ಕೊಡತಾನ. ಪಾಪ ಖುಷಿಯಿಂದ ಬೇಯಿಸಕಾ ಹೋದ್ರ ಬೇಯಬೇಕೆಲ್ಲಿ. ಬೇಯದೆ ಹೋದದ್ದು ನೋಡಿ ಕಂಗಾಲಾ ಸ್ವಚಾವತಿ ತನ್ನ ಕಾಲುಗಳನ್ನ ಬೆಂಕ್ಯಾಗ ಇಟ್ಟು ಬೇಯಿಸಾಕ ಸುರುಮಾಡತಾಳ. ಬ್ರಾಹ್ಮಣ ರೂಪದ ದೇವೇಂದ್ರ ''ನಾನಾ ನಿನ್ನ ಪರೀಕ್ಷೆ ಮಾಡಾಕ ಹಾಂಗ ಮಾಡಿದೆ. ನೀನು ಗೆದ್ದೆ. ಮದುವೆಯಾಗಬೇಕಾದ್ರ ಸ್ವರ್ಗ ಬರಬೇಕು. ನಿನ್ನ ಹಾಂಗ ಕರಕೊಂಡು ಹೋಗಾಕ ಆಗಲ್ಲ. ನೀನು ಭೂಲೋಕದ ಕರ್ತವ್ಯ ಮುಗಿಸಿ ಬಾ, ನಂತರ ಮದುವೆ ಆಗ್ತೀನಿ'' ಎಂದ. ಪೂಸಿ ಹೊಡದು ಎಸ್ಕೇಪ ಆದ. ನಮಗ ಗೊತ್ತಿದ್ದ ಪೈಕಿ ಶಚಿ ಒಬ್ಬಾಕಿ ಪರಮನೆಂಟ್ ಹೆಂಡ್ತಿ. ಎಲ್ಲಾರೂ ಟೆಂಪರರಿ. ಅದು ಒಂದ ಭಾಗ ಸ್ವಚಾವತಿ ಬಂದು ಹೋಗಾಕಿ. ಆಮೇಲೆ ಏನಾದ್ಲೋ ಪುರಾವೆ ಅಂತೂ ಇಲ್ಲ. ದೇವೇಂದ್ರನ ಹೇಳಬೇಕು. ಎಲ್ಲಿ ಹೆಂಡ್ತಿ ಜಬರಸ್ತಾಳ ಅಂತ ಸುಳ್ಳ ಹೇಳಿ ಮೋಸ ಮಾಡಿದ್ನೊ?

ಇಷ್ಟೆಲ್ಲ ಹಗರಣಗಳ ಸರಮಾಲೆ ಹೊದ್ದುಕೊಂಡ ಇಂದ್ರ ಕೊನಿಗೆ ತಮ್ಮ ಹೈಕಮಾಂಡ ಜೊತಿಗೆ ಸುದ್ದಿದ್ದಾನೇನು? ಅಲ್ಲಿಯೂ ಇಲ್ಲ. ಮಥುರದಾಗ ಕೃಷ್ಣ ಇದ್ದನ ಅಂತ ಗೊತ್ತಿದ್ದು ಗೌರವ ನೀಡುತ್ತಿಲ್ಲ ಎಂದು ಮೂಢತನದಿಂದ ಸಿಟ್ಟಿಗೆದ್ದು ಕಂಡಂಗ ಮಳಿ ಸುರಿಸಿದ. ಕೃಷ್ಣ ಕಿರಿಬೆರಳಾಗ ಗೋವರ್ಧನ ಗಿರಿಯನ್ನು ಎತ್ತಿ ಹಿಡಿದ. ಇವನ ಸೊಕ್ಕು ಮುರದ. ಕೃಷ್ಣಗ ಪಾರಿಜಾತ ಕೊಡಲಾರದದಕ ಆ ಗಿಡನ ಭೂಲೋಕಕ್ಕ ತಂದಿಟ್ಟ. ಇನ್ನೂ ಎಲ್ಲಾ ಕಾಲದಾಗ ಇರೋ ಪುತ್ರ ವ್ಯಾಮೋಹಿ ಹಾಂಗ ಇವನು. ಅರ್ಜುನ ಮುಂದ ಇರಬೇಕೆಂದು ಪಾಪ ಸೂರ್ಯಪುತ್ರ ಕರ್ಣಗ ನೀಡಿದ ತೊಂದರೆಯಂತಹದು! ಕರ್ಣ ಮುಂದ ಮಗಗ ಮುಳ್ಳು ಅಂತ ತಿಳಿದು ಕರ್ಣ ಪರಶುರಾಮರ ಹತ್ರ ಅಭ್ಯಾಸ ಮಾಡೋಹೊತ್ತಿನಾಗ ಮಾಡಿದ ಘನಂದಾರಿ ಕಾರ್ಯನ್ನ ನೆನಸಿಕೊಳ್ಳಿ. ದೇಹಾಯಾಸದಿಂದ ಪರಶುರಾಮ ಮಲಗಿದ್ದ ಕರ್ಣನ ತೊಡೆಯನ್ನು ದುಂಬಿ ರೂಪದಲ್ಲಿ ಹೀರಿದೆಂತಹದು? ಬಿಸಿನೆತ್ತರು ದೇಹಕ್ಕೆ ತಾಗಿ ಎದ್ದ ಪರಶುರಾಮ ಶಿಷ್ಯನ ಹಿರಿಮೆಯನ್ನು ಕೊಂಡಾಡದೆ ''ಕ್ಷತ್ರಿಯನಲ್ಲ ಎಂದು ಸುಳ್ಳು ಹೇಳಿ ನನ್ನ ಹತ್ರ ವಿದ್ಯೆ ಕಲಿತಿರುವೆ. ಕಲಿತ ವಿದ್ಯೆಯಲ್ಲ ಆಪತ್ಕಾಲದಲ್ಲಿ ಮರೆತು ಹೋಗಲಿ'' ಎಂದು ಶಾಪ ಕೊಡುವಂತಹ ಪರಿಸ್ಥಿತಿ ತಂದಿಟ್ಟನಲ್ಲ. ಇಷ್ಟಾದರೂ ಸುಮ್ಮನಿರದೆ ಮುಂದೆ ಜನ್ಮತಃ ಬಂದ ಕರ್ಣನ ಕವಚ ಕುಂಡಲಗಳನ್ನು ಬ್ರಾಹ್ಮಣನ ವೇಷ ಹಾಕಿಕೊಂಡು ಬಂದು ಬೇಡಿ ಕಿತ್ತುಕೊಂಡನಲ್ಲ! ಎಂತಹ ದೃಷ್ಟತನ.

ಇಂದ್ರ ಮಾಡಿದ ಕಿತಾಪತಿಗಳು ಬರಕಂತ ಕೂತ್ರ ಕಾದಂಬರಿನ ಆಗ್ತಾದ. ಅಂತಹ ಪವಾಡ ಪುರುಷ. ಇಂದ್ರ ಪ್ರತಿ ಮನದ ಪಾತ್ರ. ಎಲ್ಲರ ಮನಸ್ಥಿತಿಯ ಮೂರ್ತ ರೂಪ. ರಾಜಕಾರಣಿಗಳಿಗೆ ವಿಶೇಷವಾಗಿ ಹೋಲುವ, ದುರ್ಗುಣಗಳು ಏನೆಲ್ಲಾ ಇವೆಯೋ ಎಲ್ಲವನ್ನೂ ಮೈಗೂಡಿಸಿಕೊಂಡು ಕೆಸರಿನಲ್ಲಿ ಕಮಲದಂತೆ ಸಾಚಾ ಎಂದು ತೋರಿಸಿಕೊಂಡ ವ್ಯಕ್ತಿತ್ವ. ಹೈಕಮಾಂಡಗಳೆಂಬ ದೇವತೆಗಳು ಇವನ ಅಟ್ಟಹಾಸವನ್ನು ಈಗಿನ ರಾಜಕಾರಣಿಗಳಂತೆ ಹೇಗೆ ಸಹಿಸಿಕೊಂಡರೋ? ಸೂಟಕೇಸ ರೂಪದಲ್ಲಿ ಹಣವನ್ನು ಕಳಿಸಿಕೊಡುವ ನಾಯಕರಂತೆ ಇಂದ್ರನೂ ಸೋಮರಸ, ಮಾನಿನಿ ಮೊದಲಾದವನ್ನು ಕಳಿಸುತ್ತಾ ಎಲ್ಲರನ್ನೂ ತನ್ನ ಪರವಾಗಿರಿಸಿಕೊಂಡಿದ್ದನೋ? ಈ ಬಗ್ಗೆ ಸಂಶೋಧನೆ ಖಂಡಿತ ಆಗಬೇಕು.

✤

# ಬೇಂದ್ರೆ ವರಕವಿ ಅಲ್ವೆ, ಸುಮ್ಮನಾಗಲೇಬೇಕಾಯಿತು

- ಚಿದಂಬರ ನರೇಂದ್ರ

ಮೊನ್ನೆ,
ನನ್ನ ಇನ್‌ಬಾಕ್ಸ್‌ಗೆ
ಒಂದೇ ಸಮನೇ
ಹೊಗಳಿಕೆಗಳ ಸುರಿಮಳೆ

''ನೀವೆಷ್ಟು ಒಳ್ಳೆ ಕವಿ,
ನಾನು ನಿಮ್ಮ ಅಭಿಮಾನಿ''
ಹಾಗೆ, ಹೀಗೆ ಅಂತೆಲ್ಲ.

ಸುಮ್ಮನಿರದೆ ಹೆಂಡತಿಗೆ ಮೆಸೇಜ್
ತೋರಿಸಿ ಸೊಕ್ಕಿನಿಂದ ಹೇಳಿದೆ;

''ನೋಡು, ನನ್ನ ಕವಿ ಅಂತ
ಜನ ಒಪ್ಪಿದ್ದಾಯ್ತು,
ಇನ್ನು ಮೇಲೆ ಮನೆಯ
ಸಣ್ಣ ಸಣ್ಣ ಕೆಲಸ ಹೇಳಬೇಡ.
ನರಸಿಂಹಸ್ವಾಮಿಗಳ ಹೆಂಡತಿ
ಮೆಣಸಿನಕಾಯಿ, ಕೊತ್ತಂಬ್ರಿ ತರ್ಲಿಕ್ಕೂ ಕೂಡ
ಅವರನ್ನ ಹೊರಗೆ ಕಳಿಸ್ತಿರ್ಲಿಲ್ಲವಂತೆ''

ಹೆಂಗಸರದ್ದು
ಕೇಳಿ ಸುಮ್ಮನಿರುವ ಜಾಯಮಾನವಲ್ಲ.
ಅದರಲ್ಲೂ ಈಕೆ
ಧಾರವಾಡದಲ್ಲಿ ಹುಟ್ಟಿದವಳು.

''ನೀವೇನು ನರಸಿಂಹಸ್ವಾಮಿಗಳ ಥರ ಬರೀಬೇಕಾಗಿಲ್ಲ
ಬೇಂದ್ರೆ ಥರ ಬರೀರಿ ಸಾಕು.
ಬೇಂದ್ರೆ, ನಾಲ್ಕು ಕಿಲೋಮೀಟರ್ ನಡೆದು
ಹಾಲಗೇರಿ ಹಣಮಂತ ದೇವರ ಗುಡಿ ತನಕ ಹೋಗಿ
ಹಲ್ಲೆ ತರ್ತಿದ್ರಂತ.''

ಒಂದು ಕ್ಷಣ ಅವಾಕ್ಕಾದೆ,
ಸಿಟ್ಟು ಬಂತು.
ಬೇಂದ್ರೆ ವರಕವಿ ಅಲ್ವೆ
ಸುಮ್ಮನಾಗಲೇಬೇಕಾಯಿತು.

ಸೌಜನ್ಯ : ಅವಧಿ

✤

# ಹೋಗೋದೆಲ್ಲಿ, ಹೇಳಿ?

**- ನುಗ್ಗೆಹಳ್ಳಿ ಪಂಕಜ**

**ಒಂ**ದೇ ಸಂತೋಷ - ಇಷ್ಟು ವರ್ಷದ ಕಷ್ಟಕ್ಕೆ ಕೊನೆಗಾದ್ರೂ ಒಂದು ಅಂತ್ಯ ಕಾಣಿಸಿದನಲ್ಲಾ, ಆ ಮಹಾನುಭಾವ ದೇವರು, ಎಂದು! ಅತ್ತೆ ಸತ್ತುಹೋದ್ರೆ, ಯಾವ ಸೊಸೆಗೆ ತಾನೆ ಸಮಾಧಾನ ಆಗಲ್ಲ, ಹೇಳಿ? ಅದ್ರಲ್ಲೂ, ಸದಾ ಗೋಳು ಹುಯ್ಕೊಳ್ಳೋ ಅತ್ತೆಮ್ಮಾ ಸತ್ರೆ? ಹೋಗಲಾರದೆ ಹೋದ್ರು ಪಾಪ..... ಚಿತೇಲಿ ಸುಡೋವರ್ಗೂ ಭಯ ಇದ್ದೇ ಇತ್ತು. ಗಟ್ಟಿಗಾರ್ತಿ ಹೆಂಗಸು, ಎಲ್ಲಿ ಎದ್ದು ಬಂದುಬಿಡ್ತಾರೋ, ಅಂತ! ''ಎದ್ದು ಬಾಮಾ, ಪ್ಲೀಸ್ ಎದ್ದು ಬಾಮಾ, ನೀನು ಹೋದ್ರೆ, ನನ್ನನ್ನ ನೋಡ್ಕೊಳೋವ್ರು ಯಾರು?'' - ಅಂತ, ಇವರ ಆರ್ತನಾದ ಬೇರೆ, ಪಕ್ಕದಲ್ಲಿ! ಯಾಕೆ, ನಾನಿಲ್ವೇ? ನಾ ತಾನೆ ಅವರ ಸಕಲ ಬೇಕುಬೇಡಗಳನ್ನೆಲ್ಲಾ ಮದ್ವೆ ಆದಾಗಿನಿಂದ ಪೂರೈಸ್ತಾ ಬಂದಿರೋದು? ಸೊಸೆ ಮನೆ ಒಳಗೆ ಕಾಲಿಟ್ಟದ್ದೇ ಕಾಲಿಟ್ಟದ್ದು, ಒಳ್ಳೆ ರಿಟೈರ್ಡ್ ಆಫೀಸರ್ ಹಾಗೆ ವಿಜೃಂಭಿಸಲಾರಂಭಿಸಿದ್ರು, ನನ್ನ ಅತ್ತೆಮ್ಮಾ ಮಹಾರಾಣಿ! ಅವರಿಗೆ ಊಟ ತಿನ್ನೋದೊಂದು ಬಾಕಿ, ಎಲ್ಲಾ ಫ್ರೀ ಸರ್ವೀಸ್! ಆದ್ರೂ ಗೊಣಗಾಟ ತಪ್ಪಿದ್ದಲ್ಲ! 'ವಟ ವಟ' ಅನ್ನೊದೇ ಅವರ ಗಾಯತ್ರಿ ಪಠಣ - ಸೂರ್ಯೋದಯದ ಜೊತೆ ಆರಂಭವಾದದ್ದು, ಸೂರ್ಯಾಸ್ತಮದವರೆಗೂ ನಡೀತಿತ್ತು. ಇನ್ಟರ್ವಲ್ - ಫುಲ್‌ಸ್ಟಾಪ್ ಯಾವ್ದೂ ಇಲ್ದೆ! ಈಗಲ್ಲಿ ಯಾರ ಮುಂದೆ ಪಟಿಸ್ತಾರೆ?

ಅವರ ಅಂತಿಮ ಸಂಸ್ಕಾರವನ್ನೆಲ್ಲಾ ಮುಗಿಸಿ, ಮನೆಗೆ ಬಂದ ನನ್ನ ಸಂಭ್ರಮ ಹೇಳತೀರದು! ಅನ್ಯಾಯ, ನಂಗೂ ನನ್ನಂಥಾ ಒಳ್ಳೇ ಸೊಸೆ ಇರ್ಬಾರದಿತ್ತೇ? ನಾ ಹೇಳಿದ್ದನ್ನೆಲ್ಲಾ ತುಟಿಕ್‌ಪಿಟಕ್ಕೆನ್ನದೆ ಮಾಡ್ಕೊಂಡು, ಸದಾ ನನ್ನ ಕಣ್‌ಸನ್ನೆಗಾಗಿ ಕಾಯ್ತಾ ಇರೋ ಸೊಸೆ..... ಹು, ಎಲ್ಲಾ ಕೇಳ್ಕೊಂಡು ಬಂದಿರ್ಬೇಕು.... ಅಲ್ಲಾ, ಮಗಾನೇ ಇಲ್ಲದಿದ್ದ ಮೇಲೆ ಸೊಸೇನ ಎಲ್ಲಿಂದ ತರೋದು?

ಹೀಗೆಲ್ಲಾ ಏನೇನೋ ಮನಸ್ಸಿನಲ್ಲೇ ಯೋಚನೆ ಮಾಡ್ತಾ ಮಲಗಿದ್ದಾಗ, ಇದ್ದಕ್ಕಿದ್ದಂತೆ ಬಾಗಿಲ ಹತ್ರ ಏನೋ ಶಬ್ದ ಆದ ಹಾಗೆ ಆಯ್ತು; ಕಣ್ ಬಿಟ್ಟು ನೋಡ್ತೀನಿ, ಕೋಣೆ ಬಾಗಿಲ ಹತ್ರ - ನನ್ನ ಅತ್ತೆಮ್ಮಾ! ಹೌದು, ಸಂಶಯವೇ ಇಲ್ಲ, ಅಲ್ಲಿ ಕೋಣೆ ಬಾಗಿಲಿಗೆ ಒರಗಿ ನಿಂತಿದ್ದಾಕೆ, ನನ್ನ ಮದರ್-ಇನ್-ಲಾ!

ಇದೇನಿದು, ಇದೇ ತಾನೇ ಅಂತ್ಯಸಂಸ್ಕಾರ ಮಾಡಿ ಬಂದಿದ್ವಲ್ಲಾ ನಾವಿಬ್ರೂ, ನೆಂಟರಿಷ್ಟರ ಮುಂದೆ! ಹೇಗೆ ವಾಪಸ್ ಬಂದುಬಿಟ್ರು? ಭ್ರಮೆಯೋ? ಪಿಶಾಚಿಯೋ? ಇಲ್ಲ ಇಲ್ಲಾ - ಎಲ್ಲಾ ಹಿಂದಿನ ಹಾಗೇ ರೂಪ! ಆದ್ರೆ ಶರೀರ ಮಾತ್ರ, ಊಹೂ ಏನೋ ಬದಲಾವಣೆ..... ಏನಿದರ ಅರ್ಥ? ಭಯ ಹತ್ತಿಕೊಂಡ್ತು; ಅಷ್ಟೆಲ್ಲಾ ಗೋಳಾಡ್ಸಿದ್ದು ಸಾಲ್ದು ಅಂತ, ಯಮನ ಕಣ್ತಪ್ಪಿಸಿ ಓಡಿಬಂದಿದೆಯೋ, ಪಿಶಾಚಿಯಾಗಿ! ರಾಮ್ರಾಮ, ಈಗೇನ್ಮಾಡೋದು?

''ಹೇ ಪಿಶಾಚಿಯಮ್ಮ, ದಮ್ಮಯ್ಯ ನನ್ನನ್ನೇನೂ ಮಾಡ್ಬೇಡ ಪ್ಲೀಸ್! ನಿಮಗೆ ಬೇಕಾದ್ರೆ, ಎಲ್ಲಾ ಕ್ಷೇತ್ರಗಳಲ್ಲೂ ಒಳ್ಳೇ ವೈಭವದಿಂದ ತಿಥೀನ ಮಾಡಿಸ್ತೀನಿ - ಬೇಕಾದ್ರೆ, ಮಿನಿಸ್ಟರ್ಸ್ಸು, ಗವರ್ನರ್ಸ್ಸು, ಎಲ್ರನ್ನೂ ಕರೆದು, ಗ್ರಾಂಡಾಗಿ ಮಾಡ್ತೀನಿ! ನಿನ್ನ ಬಗ್ಗೆ ಪದ್ಯ ಬರೆದು, ಟಿವಿ, ರೇಡಿಯೋ ಎಲ್ಲಾದ್ರಲ್ಲೂ ಹಾಡ್ತೀನಿ.. ನಿನ್ನ ಫೋಟೋಗೆ ಫ್ರೇಮ್ ಹಾಕ್ಸಿ.....''

‘‘ಸಾಕು ಸಾಕು!’’ – ಅತ್ತೆಮ್ಮಾ ಕೈ ಎತ್ತಿದ್ರು – ‘‘ನಾನೇನೂ ಓಡಿಬರ್ಲಿಲ್ಲಾ, ಮೇಲಿನ ಲೋಕದಿಂದ – ನಮ್ಮನ್ನ, ಅಂದ್ರೆ ನಮ್ಮ ಬ್ಯಾಚನ್ನ, ಒಳಗೇ ಸೇರಿಸ್ಲಿಲ್ಲ ಆ ದೂತರು – ಮುಖಮೂತಿ ನೋಡ್ದೆ, ತಳ್ಳಿಬಿಟ್ರು.’’

‘‘ಯಾರು ಸ್ವರ್ಗದವರೇ? ಅದ್ರಲ್ಲೇನು ಆಶ್ಚರ್ಯ! ಸ್ವರ್ಗ ಕರಪ್ಟ್ ಆಗತ್ತಷ್ಟೇ, ನಿಮ್ಮಂಥಾವರಿಗೆ ಸೀಟು ಕೊಟ್ರೆ! ಏನಿದ್ರೂ ನಿಮಗೆ ನರಕಾನೇ ಗತಿ!’’

‘‘ಆದ್ರೆ, ಅಲ್ಲೂ ನಮ್ಮನ್ನ ಸೇರಿಸ್ಕೊಳ್ಳಲಿಲ್ಲ....’’ – ಅತ್ತೆಮ್ಮ ಗೊಳೋ ಅಂತ ಅಳೋಕ್ಕೆ ಆರಂಭಿಸಿದ್ರು.

‘‘ಏನು!’’ – ನನ್ನ ಕಿವಿಗಳನ್ನೇ ನಂಬದಾದೆ – ‘‘ನರಕದಲ್ಲೂ ಬಹಿಷ್ಕಾರ ಮಾಡೋ ಅಷ್ಟು ಪಾಪಾಕಾರ್ಯಗಳನ್ನ ಮಾಡಿದೀರಾ ನೀವು?’’

‘‘ನನ್ನೊಬ್ಬಳನ್ನೇ ಅಲ್ಲ, ನಮ್ಮ ಇಡೀ ಬ್ಯಾಚ್ – ಅಂದ್ರೆ, ನನ್ನ ಜೊತೇಲಿ ಸತ್ತವ್ರನ್ನೆಲ್ಲಾ ಬಾಯ್ಕಾಟ್ ಮಾಡ್ಬಿಟ್ರು, ಕಟ್ಟುನಿಟ್ಟಾಗಿ!’’

‘‘ಕಾರಣ ಏನು?’’

‘‘ಆಧಾರ್ ಕಾರ್ಡ್ ತಂದಿಲ್ಲ ಅಂತ......’’

‘‘ಏನು, ಅಲ್ಲೂ ನಮ್ಮ ಪೀಡೆ ಬಂದು ಸೇರ್ಕೊಂಡಿದೆಯೇ? ಹಾಗಾದ್ರೆ ಗೊವಿಂದನೇ ಗತಿ!’’

‘‘ಊ, ಅದೇ ನೋಡು – ನ್ಯಾಯಾನಾ? ನಾವೆಲ್ಲಿಂದ ತರೋದು? ಹೀಗೆ ಆಧಾರ್ ಕಾರ್ಡ್ ಇಲ್ಲಾಂತ ಏಕ್‌ದಮ್ ತಳ್ಳಿಬಿಟ್ರೆ, ನಾವೆಲ್ಲಿಗೆ ಹೋಗೋದು ಅಂತ! ಆ ಕಡೆ ಪರಲೋಕಾನೂ ಇಲ್ಲ, ಈಕಡೆ ಭೂಲೋಕಾನೂ ಇಲ್ಲ – ಪರದಾಡ್ತಿದೀವಿ ಆ ತ್ರಿಶಂಕು ಹಾಗೆ! ತ್ರಿಶಂಕುಗೆ ವಿಶ್ವಾಮಿತ್ರನಾದ್ರೂ ಇದ್ರು, ಸಹಾಯ ಮಾಡೋಕ್ಕೆ, ನಮಗ್ಯಾರಿದಾರೆ?’’

ನಂಗೆ ಒಂದು ಐಡಿಯಾ ಹೊಳೀತು; ಕೊಟ್ಟೇ – ‘‘ಅತ್ತೆಮ್ಮಾ, ನೀವು ವಿಷ್ಣು ಭಕ್ತರು.... ಅವನೇ ಅಲ್ಲವೇ ಸುಪ್ರೀಮ್ ಗಾಡ್? ವಿಷ್ಣು ಒಂದು ಮಾತು ಶಿಫಾರಸ್ ಮಾಡಿದ್ರೆ ಸಾಕು, ನರಕದಲ್ಲಿ ಖಂಡಿತ ಸೀಟ್ ಸಿಕ್ಕೇಸಿಗತ್ತೆ. ಯಾಕೆ ಮೊರೆ ಹೋಗ್ಬಾರ್ದು?’’

ಹೇಗಾದ್ರೂ ಮಾಡಿ ನನ್ನ ಅತ್ತೇನ ಘೋರ ನರಕಕ್ಕೆ ರವಾನಿಸೋ ಆಸೆ ನಂಗೆ.

‘‘ಅಯ್ಯೋ, ಆ ವಿಷ್ಣು ತನ್ನ ಫೇಮಸ್ ಬೆಡ್ ಮೇಲೆ ಇದ್ರೆ ತಾನೆ, ಮೊರೆ ಹೋಗೋಕ್ಕೆ? ಫಲಾಯನವಾದಿ ನಂಬರ್ ಒನ್! ಪರಲೋಕದಲ್ಲಿ ಜಂಜಾಟ ಆದಾಗೆಲ್ಲಾ ಭೂಲೋಕಕ್ಕೆ ಪಲಾಯನ – ಹೊಸ ಅವತಾರದ ನೆಪದಲ್ಲಿ! ಈ ಸಲಾನೂ ಹಾಗೇ ಮಾಡಿದಾನೆ!’’

‘‘ಹೌದೇ?’’ – ಉತ್ಸಾಹಿತಳಾದೆ – ‘‘ಈಗ ಯಾವ ಅವತಾರ? ಎಲ್ಲಿ? ಯಾವ ಊರಲ್ಲಿ? ಹೋಗಿ ನೋಡ್ಬೇಕು, ಅತ್ತೆಮ್ಮ.. ಹೇಳಿ, ಬೇಗ....’’

ಹ್ಯಾಂಡ್ ಬ್ಯಾಗನ್ನ ಕೈಗೆತ್ತಿಕೊಂಡೆ.

‘‘ಆ ಟ್ರಂಪ್ ಮನೇಲಿ – ವೈಟ್‌ಹೌಸ್‌ನಲ್ಲಿ.....’’ – ಬಂತು ಉತ್ತರ!

✤